ಮಂತ್ರ ಹೇಳ್ತಿತ್ತು। ಉರಿಮೂತಿ ಮೆಣಸಿನಕಾಯಿ ಹೋಮ ಮಾಡ್ತಿತ್ತು॥3॥ ಗಂಡು ಹೆಣ್ಣು ಹೊಗೆ ತಾಳ್ದೆ ಕಣ್ಣೀರು ಹಾಕ್ತಿತ್ತು। ಹೀರೆಕಾಯಿ ಹಿರಿ ಹಿರಿ ಹಿಗ್ಗಿ ನಕ್ಕು ನಲಿತಿತ್ತು॥4॥ ಬಾಳೆಕಾಯಿ ಬಾಗಿ ಬಾಗಿ ಎಲೆ ಹಾಕ್ತಿತ್ತು। ಹುರಳಿಕಾಯಿ ಊಟಕೆ ಏಳಿ ಎಂದು ಕೂಗ್ತಿತ್ತು॥5॥ ಸೌತೆಕಾಯಿ ಲೋಟಕ್ಕೆಲ್ಲ ನೀರು ಹಾಕ್ತಿತ್ತು। ಆಲೂಗೆಡ್ಡೆ ಹೊಟ್ಟೆತುಂಬ ಊಟ ಬಡ್ಸಿತ್ತು॥6॥ ಪಡವಲಕಾಯಿ ಬಳುಕ್ತಾ ಬಳುಕ್ತಾ ವೀಳ್ಯಕೊಡ್ತಿತ್ತು। ತೊಂಡೆಕಾಯಿ ತಾಂಬೂಲಕೊಟ್ಟು ಟಾ ಟಾ ಹೇಳ್ತಿತ್ತು॥7॥ ಅಂತು ಇಂತು ಕಹಿಗು ಸಿಹಿಗು ಮದ್ವೆಯಾಯಿತು। ಹಾಗಲಕಾಯಿ ಮಾವಿನಹಣ್ಣು ಜೋಡಿಯಾಯಿತು॥8॥

ಶಿಶುಗೀತೆಗಳು

ಕ್ರೀಡೆ

ಅಚ್ಚಚ್ಚೊ ಬೆಲ್ಲದಚ್ಚೊ

ಅಚ್ಚಚ್ಚೊ ಬೆಲ್ಲದಚ್ಚೊ। ಅಲ್ಲಿ ನೋಡು ಇಲ್ಲಿ ನೋಡು। ಸಂಪಂಗಿ ಮರದಡಿ ಗುಂಪು ನೋಡು। ಯಾವ ಗುಂಪು ಕಾಗೆ ಗುಂಪು। ಯಾವ ಕಾಗೆ ಕಪ್ಪು ಕಾಗೆ। ಯಾವ ಕಪ್ಪು ಇದ್ದಿಲು ಕಪ್ಪು। ಯಾವ ಇದ್ದಿಲು ಸೌದೆ ಇದ್ದಿಲು। ಯಾವ ಸೌದೆ ಕಾಡು ಸೌದೆ । ಯಾವ ಕಾಡು ಸುಡುಗಾಡು। ಯಾವ ಸುಡು ರೊಟ್ಟಿ ಸುಡು। ಯಾವ ರೊಟ್ಟಿ ತಿನ್ನುವ ರೊಟ್ಟಿ। ತಿನ್ನು ರೊಟ್ಟಿ ತಿನ್ನು॥

ಅಪ್ಪನು ತಂದ ಸೈಕಲ್ಲು ರಾಗ:ಶಂಕರಾಭರಣ

ಅಪ್ಪನು ತಂದ ಸೈಕಲ್ಲು। ಮೂರು ಚಕ್ರದ ಸೈಕಲ್ಲು। ಅಂದದ ಚೆಂದದ ಸೈಕಲ್ಲು। ನಾನೇ ಇದಕೆ ಓನರು॥1॥ ಟ್ರಿನ್ ಟ್ರಿನ್ ಟ್ರಿನ್ ಬೆಲ್ಲು। ಪೋಂ ಪೋಂ ಹಾರನ್ನು। ಮೆತ್ತಗೆ ಇರುವ ಸೀಟು। ಬಣ್ಣದ ಬೆಡಗಿನ ಸೈಕಲ್ಲು॥2॥ ಗಾಳಿ ಇಲ್ಲದ ಟೈರು। ಬೇಕಿಲ್ಲ ಪೆಟ್ರೋಲು। ಬೇಡ ಇದಕೆ ಬ್ರೇಕು। ಹಾಗೇ ಓಡುವ ಸೈಕಲ್ಲು॥3॥ ಮನೆ ನೆಲವೆ ಇದಕೆ ರಸ್ತೆ। ಸಾಗೋದು ಸಲೀಸು। ಖುಷಿ ಕೊಡುವ ಸೈಕಲ್ಲು। ನನ್ನ ಮುದ್ದಿನ ಸೈಕಲ್ಲು॥4॥

ಅವಲಕಿ ಪವಲಕಿ

ಅವಲಕಿ ಪವಲಕಿ ಕಾಂಚನ ಮಿಣಮಿಣ। ಡಾಂ ಢೂಂ ದಸ್ ಬುಸ್ ಕೊಂಯ್ ಕೊಠಾರ್॥

ಅವರ್ ಬಿಟ್ಟು ಇವರ್ ಬಿಟ್ಟು

ಅವರ್ ಬಿಟ್ಟು ಇವರ್ ಬಿಟ್ಟು ಅವರ್ ಬಿಟ್, ಇವರ್ ಬಿಟ್ ಇವರ್ಯಾರು? ಎಂದು ಒಬ್ಬರು (ಮತ್ತೊಬ್ಬರ ಕಣ್ಣು ಮುಚ್ಚಿ ಸ್ನೇಹಿತರನ್ನು ಎದುರಿಗೆ ಸಾಲಾಗಿ ನಿಲ್ಲಿಸಿಕೇಳುವ ಆಟ)

ಆನೆ ಅಳಗರ್ ಆನೆ (ತಮಿಳು)

ಆನೆ ಆನೆ ಅಳಗರ್ ಆನೆ। ಅಳಗರುಂ ಶೊಕ್ಕರುಂ ಏರುಂ ಆನೆ। ಶಿಂಗಾರ ತೋಟತ್ತೈ ಅಳಿಕ್ಯುಂ ಆನೆ। ಆನೆ ವಂದುದಾಂತೋಪ್ಪುಲೇ। ಅಳಿಯ ಪಳುತ್ತುದಾಂ ಮಾಂಬಳಂ। ಕುದುರೆ ವಂದುದಾಂ ತೋಪ್ಪುಲೆ ಕುಲುಂಗ ಪಳುತ್ತುದಾಂ ಕೊಯ್ಯಂಪಳುಂ॥

ಏತೆತ್ತಾ ಬಲ್‌ಬಲಾ (ಕಾಲಿನ ಮೇಲೆ ನಿಲ್ಲಿಸಿ ಮೇಲೆ ಕೆಳಗೆ ಮಾಡುವುದು)

ಏತೆತ್ತಾ ಬಲ್‌ಬಲಾ ಯಾವ ಹೆಂಡತಿ ಬೇಕು? ಕರಿಹೆಂಡತಿ ಬೇಕಾ? ಬಿಳಿ ಹೆಂಡತಿಬೇಕಾ? ಏತ ಏತ ಮೊಗೆಹಾರ ತೋಟಕ್ಕೆ ನೀರು ಹುಯ್ದು ಸಣ್ಣ ಏತ ಸಣ್ಣ ಸಣ್ಣ ಸಣ್ಣ ದೊಡ್ಡ ಏತ ದಡಿ ದಡಿ ದಡಿ॥
ಏತೆತ್ತೋ ಮಹದೇವ ತೋಟಕ್ಕೇ ನೀರಿಲ್ಲ ಹಿಂದ್‌ಮುಂದ್ಕೆ ಹತ್ತಿಳಿಯೋದು ಚಿಕ್ಕೆತ್ತೋ ದೊಡ್ಡೆತ್ತೋ?

ಕಣ್ಣಾ ಮುಚ್ಚೆ ಕಾಡೇ ಗೂಡು

ಕಣ್ಣಾ ಮುಚ್ಚೆ ಕಾಡೇ ಗೂಡು ಉದ್ದಿನ ಮೂಟೆ ಉರುಳೇ ಹೋಯ್ತು। ನಮ್ಮಯ ಹಕ್ಕಿ ಬಿಟ್ಟೇ ಬಿಡ್ತು। ನಿಮ್ಮಯ ಹಕ್ಕಿ ಬಚ್ಚಿ ಕೊಳ್ಳಿ॥

ಕಣ್ಣು ಮುಚ್ಚುವಾಟಸಾಕು — ರಾಗ:ಹಿಂದೋಳ

ಕಣ್ಣು ಮುಚ್ಚುವಾಟಸಾಕು ಕಣ್ಣು ತೆರೆಯುವಾಟ ಬೇಕು॥ ಕಳ್ಳನಾಗಿ ಹುಡುಕುವವನು ಕೊನೆಯವರೆಗು ನಾನೆ ಏನು? ಒಮ್ಮೆ ಅಡಗಿ ಕುಳಿತೆ ಏನು? ನೀನು ಇಂಥ ಆಟ ಮುಗಿವುದೇನು?॥1॥ ಅಡಗಿದವಳು ನೀನೆ ಇರುವಿ ನೀನೆ ಕಣ್ಣು ಮುಚ್ಚುತಿರುವಿ ಎಲ್ಲು ನನಗೆ ಕಾಣದಿರುವಿ ಹೇಗೆ ನೀನು ಹೊರಗೆ ಬರುವಿ?॥2॥ ಹೊರಗೆ ಒಮ್ಮೆ ಬಂದು ನೋಡು। ಮುಟ್ಟ ಬರಲು ದೂರ ಓಡು। ಕುಣಿಸಿ ನಗಿಸಿ ಆಟವಾಡು।3॥ ಒಲ್ಲದಿರಲು ಸಾಕುಮಾಡು॥ ಇಂಥ ಆಟ ಆಡಲಾರೆ ನಿಂತು ನಿಂತು ನೋಯಲಾರೆ। "ಅಲಕ್ ಬಲಕ್ ಗುಬ್ಬಚ್ಚಿ ಗುಂಟೋರಿಯ" ಹಿಡಿದೇ ಬಿಟ್ಟೆ ನಿನ್ನ ಬಾರೆ॥4॥

ಕೂಸುಮರಿ ಬೇಕೆ — ರಾಗ:ಶಂಕರಾಭರಣ

ಕೂಸುಮರಿ ಕೂಸುಮರಿ। ಕೂಸುಮರಿ ಬೇಕೆ ಕೂಸುಮರಿ। ಅಣ್ಣನ ಬೆನ್ನಿಗೆ ಮೈಯನು ಬೆಸೆದು। ಕತ್ತಿನ ಸುತ್ತಲು ಕೈಗಳನೆಸೆದು। ಸೊಂಟದ ಸುತ್ತಲು ಕಾಲನು ಬಿಗಿದು। ಅಣ್ಣನು ನೆಗೆದರೆ ತಾನೂ ನೆಗೆದು। ಮುದ್ದಾಗಿರುವುದು ಕೂಸುಮರಿ। ಕನ್ನಡ ನಾಡಿನ ಕೂಸುಮರಿ॥1॥ ಕೆದರಿದ ಕೂದಲ ಮರೆಯಿಂದಿಣಿಕಿ ಐ। ಐ। ಎನ್ನುತ ಕಾಡುತ ಕೆಣಕಿ। ಬೆಳಗಿನ ಜಾವದ ಕತ್ತಲೆಯಲ್ಲಿ ಎಳೆ ಬಿಸಿಲೆರಚುವ ಸೂರ್ಯನ ಹೋಲಿ। ಮುದ್ದಾಗಿರುವುದು ಕೂಸುಮರಿ॥2॥ ಭೂಮಿಯ ಬಲೆಯಿಂದಾಕಾಶಕ್ಕೆ। ಸರ್ರೆಂದೇರುತ ಬಣ್ಣದ ರೆಕ್ಕೆ। ಹರಡುತ ಹಾಡುವ ಹಕ್ಕಿಯ ಹಾಗೆ। ಹರಡುತಲಿರುವುದು ಬೆನ್ನಿನ ಮೇಗೆ॥3॥

ಕೂ ಜುಗ್2 ನೋಡು (ರೈಲಾಟ)

ಕೂ ಜುಗ್ ಜುಗ್, ಜುಗ್ ನೋಡು। ಬೇಗನೆ ಹೊಗೆಯನ್ನು ಉಗುಳುತ್ತಾ। ಕಂಬಿ ಮೇಲೆ ಉರುಳುತ್ತಾ। ಹಸಿರು ಬಾವುಟ ಬೀಸುತ್ತಾ। ಕೈ ಮರ ಬೀಳುತ್ತಾ ಘಂಟೆನಾದ ಟಣಟಣ ಎಂದು॥1॥ ಉಷ್ ಉಷ್ ಎಂದು ಶಿಳ್ಳಿ ಊದಿ। ಬೆಟ್ಟ ಗುಡ್ಡ ಏರುತ್ತಾ। ಹೊಳೆಗಿಳೆ ದಾಟುತ್ತಾ। ಊರಿಂದ ಊರಿಗೆ ಒಯ್ಯುತ್ತಾ। ಮುದವನ್ನೆ ತರುತ್ತಾ। ಕೂ ಜುಗ್ ಜುಗ್ ಜುಗ್॥2॥

ಚಿಕ್ ಬುಕ್2 ಎನ್ನುತ ರೈಲು

ಚಿಕ್ ಬುಕ್ ಚಿಕ್ ಬುಕ್ ಎನ್ನುತ ರೈಲು। ಓಡುತ ಹೋಗಲಿ ದೂರಕೆ। ಗಾಳಿಯ ಸೀಳುತ ಹೊಗೆಯನು ಕಾರುತ। ವೇಗದಿ ಸಾಗಲಿ ಮುಂದಕೆ॥ ಬಡವರು ಸೇರಿ ಬಲ್ಲಿದರೆಲ್ಲರು। ಬರುವರು ನಿನ್ನಲಿ ಕೂಡಲು। ಅಳುವರು ನಗುವರು ನೀನು ಹೊರಡಲು। ಕಾಯದೆ ಗುರಿಯನು ಸೇರಲು॥ ಜಾತಿ ವಿಜಾತಿಯ ಭೇಧವ ಮರೆತು ಜೊತೆಯಲಿ ಪಯಣವ ಬೆಳೆಸುವರು। ಸ್ನೇಹದ ಮಾತನು ಆಡುತ ಅಂದು। ಮನದೊಳು ಚಿಂತೆ ಮರೆಯುವರು॥ ನಿಲುಗಡೆ ಬರುತಲೆ ಇಳಿವರ ಕಂಡು। ವ್ಯಸನದಿ ಎಲ್ಲರೂ ಮರುಗುವರು। ಹೊಂದಿ ಎಲ್ಲರೂ ಮಿಲನದ ಬಯಕೆಯ। ಪಯಣವ ಪುನಃ ಬೆಳೆಸುವರು॥ ಸ್ನೇಹದ ಮಹಿಮೆಯ ನಾವು ಅರಿಯಲು। ಒಲವಿಂದ ಬಾಳಲು ಬೇಕು। ಕಹಿಸಿಹಿ ನೆನಪಿನ ಪಯಣದಿ ನಾವು।

ಶ್ರೀನೆಲೆಯನ್ನು ಸೇರಲು ಬೇಕು॥

ಚುಕುಬುಕು2 ರೈಲುಬಂಡಿ

ಚುಕುಬುಕು ಚುಕುಬುಕು ರೈಲುಬಂಡಿ। ಕೆರೆಗಳ ದಂಡಿ। ಮಾವನ ಊರಿಗೆ ಹೋಗೋಣ। ಊರನ್ನೆಲ್ಲಾ ಸುತ್ತೋಣ। ಮಾವನ ಹೆಂಡತಿ ಬಲು ಜಾಣೆ। ಮಾಡುತ್ತಾಳಾ ಚಪಾತಿ ಸೀಕರ್ಣೆ। ಚಪಾತಿ ಸೀಕರ್ಣೆ ತಿನ್ನೋಣ। ಊರನ್ನೆಲ್ಲಾ ಸುತ್ತೋಣ॥

ಚುಕುಪುಕು3 ಬಂದಿತು ರೈಲು

ಚುಕುಪುಕು ಚುಕುಪುಕು ಚುಕುಪುಕು। ಬಂದಿತು ರೈಲು ಬಿದ್ದಿತು ಕೈಮರ। ಬಡಿಯಿತು ಗಂಟೆ ಊದಿತು ಸೀಟಿ। ಬೀಸಿತು ಬಾವುಟ ಹೊರಟಿತು ರೈಲು। ಚುಕುಪುಕು ಚುಕುಪುಕು ಚುಕುಪುಕು ॥1॥ ಉರುಳಿತು ಚಕ್ರ ಹಾಕಿತು ಸಿಳ್ಳು। ಉಗುಳಿತು ಧೂಮ ದಾಟಿತು ಹೊಲಮನೆ। ಓಡಿತು ವೇಗದಿ ಸೇರಿತು ಊರು। ಚುಕುಪುಕು ಚುಕುಪುಕು ಚುಕುಪುಕು॥2॥

ಛುಕ್ಕು2 ರೈಲು ಬಂತು ಸೀಟಿ

ಛುಕ್ಕು ಛುಕ್ಕು ರೈಲು ಬಂತು। ಸೀಟಿ ಊದುತ್ತ। ಸಿಗರೇಟ್ ಸೇದೋ ಹಾಗೆ ಕೊಳವೀಲ್। ಹೊಗೇ ಬಿಡುತ್ತ। ಎದೆ ತುಂಬ ನಿಗಿ ನಿಗಿ ಕೆಂಡ ಇಟ್ಕೊಂಡು। ಸಾವಿರಾರು ಜನಾನ ತನ್ನ ಹೊಟ್ಟೇಗ್ಹಾಕ್ಕೊಂಡು॥1॥ ರೈಲು ಹೋಗ್ತಾ ಇದ್ರೆ ಊರಿಗ್ ಊರೇ ಸುತ್ತುತ್ತೇ। ಮರಗಿಡ ಬೆಟ್ಟ ಎಲ್ಲ ಓಡೋಡ್ ಹೋಗುತ್ವೆ। ಊರು ಬಂತೋ ರೈಲಿಗಿಷ್ಟ ನಿಂತೇ ಬಿಡುತ್ತೆ। ನೀರು ಕುಡಿಸಿ ಮತ್ತೆ ಅದನ್ ಕಳಸ್ಬೇಕಾಗುತ್ತೆ॥2॥ ಬನ್ನಿ ಬನ್ನಿ ಎಲ್ಲಾ ಹೋಗಿ ರೈಲಲ್ ಕೂರೋಣ। ಊರು ಬಂದ ಕೂಡ್ಲೆ ಎಲ್ಲ ಹೊರಕ್ ಜಿಗಿಯೋಣ॥3॥

ಬರುತಿದೆ3 ರೈಲು ಹಳಿಗಳ

ಬರುತಿದೆ ಬರುತಿದೆ ಬರುತಿದೆ ರೈಲು। ಹಳಿಗಳ ಮೇಲೆ ಚುಕುಬುಕು ರೈಬು। ಜನಗಳು ತುಂಬಿದ ಅಂದದ ರೈಲು। ಹೊಗೆಯನು ಉಗುಳುತ ಉದ್ದದ ರೈಲು। ಮಕ್ಕಳು ಮೆಚ್ಚುವ ಚಂದದ ರೈಲು। ಮಕ್ಕಳ ಪ್ರೀತಿಯ ಚುಕು ಬುಕು ರೈಲು॥

ಕೈ ಎಲ್ಲಾ ಎಲ್ಹೋಯ್ತು

ಕೈ ಎಲ್ಲಾ ಎಲ್ಹೋಯ್ತು - ಬಾಗಿಲ್ಹಿಂದೆ। ಬಾಗಲೇನು ಕೊಡ್ತು - ಚಕ್ಕೆಕೊಡ್ತು। ಚಕ್ಕೆನೇನು ಮಾಡ್ದೆ - ಒಲೆಗ್ಹಾಕ್ದೆ। ಒಲೆ ಏನು ಕೊಡ್ತು - ಬೂದಿಕೊಡ್ತು। ಬೂದಿ ಏನು ಮಾಡ್ದೆ - ಗೊಬ್ಬರಮಾಡ್ದೆ। ಗೊಬ್ಬರ ಏನ್ ಮಾಡ್ದೆ - ಗಿಡಕ್ಹಾಕ್ದೆ। ಗಿಡ ಏನ್ ಕೊಡ್ತು - ಹೂವುಕೊಡ್ತು। ಹೂವೇನು ಮಾಡ್ದೆ - ದೇವರಿಗಿಟ್ಟೆ। ದೇವರೇನು ಕೊಟ್ರು - ಕೈ ಕೊಟ್ರು। (ವಸ್ತುಗಳ ಉಪಯೋಗವನ್ನು ಮನವರಿಕೆ ಮಾಡಿಸಲು ಕೈಗಳನ್ನು ಹಿಂದೆ ಇಟ್ಟುಕೊಳ್ಳಲು ಹೇಳಿ ಕೊನೆಯಲ್ಲಿ ಮುಂದೆ ತೋರಿಸಬೇಕು)

ಚೈ ಎಕ್ಕಡಿಕಿ ಪಾಯ (ತೆಲುಗು)

ಚೈ ಎಕ್ಕಡಿಕಿ ಪಾಯಾ। ಸಂತಕು ಪಾಯಾ। ಸಂತನಿಂಚಿ ಏಮಿ ತಚ್ಚೆ? ಪೂಲು ತಚ್ಚೆ। ಪೂಲೇಮಿ ಚೇಸೇ? ದೇವಣಿಕಿ ಏಸೆ। ದೇವುಡೇಮಿ ಇಚ್ಚೆ? ಚೈ ಇಚ್ಚೆ॥

ಕೈವೀಸಮ್ಮ ಕೈವೀಸು (ತಮಿಳು)

ಕೈ ವೀಸಮ್ಮ ಕೈವೀಸು। ಕಡೈಕ್ಕು ಪೋಲಾಂ ಕೈವೀಸು। ಮಿಠ್ಠಾಯಿ ವಾಂಗಲಾಂ ಕೈ ವೀಸು। ಮೆದುವಾಯ್ ತಿಂಗಳಾಂ ಕೈವೀಸು। ಕೊವಿಲುಕ್ಕು ಪೋಗಲಾಂ ಕೈವೀಸು। ಕುಂಬಿಟ್ಟುವರಲಾಂ

ಕೈ ಬೀಸಮ್ಮ (ಕನ್ನಡದ ಅನುವಾದ)

ಕೈ ಬೀಸಮ್ಮ ಕೈ ಬೀಸು। ಅಂಗಡಿಗೆ ಹೋಗೋಣ ಕೈ ಬೀಸು। ಮಿಠಾಯಿ ತರೋಣ ಕೈ ಬೀಸು। ಚಪ್ಪರಿಸಿ ತಿನ್ನೋಣ ಕೈ ಬೀಸು। ಗುಡಿಗೆ ಹೋಗೋಣ ಕೈ ಬೀಸು। ಕೈಮುಗಿದು ಬರೋಣ ಕೈ ಬೀಸು।।

ಡೀಡೀಡೀಡೀ ಡುಬ್ಬಣ್ಣ

ಡೀಡೀಡೀಡೀ ಡುಬ್ಬಣ್ಣ। ಡಿಕ್ಕಿ ಕೊಡುವೆ ಬಾರಣ್ಣ।।

ಚಿಟ್ಲ ಪಟ್ಲ ಕಾಯಿ

ಚಿಟ್ಲ ಪಟ್ಲ ಕಾಯಿ। ಚಿಮ್ಮನ್ನೆಲ್ಲಿ ಕಾಯಿ। ಗೋರ್‌ಚಿಕ್ಕಡಕಾಯಿ। ಗೋಲ್ಲಪಕ್ಕಕಾಯಿ। ಅತ್ತೇಕ್‌ಪಟ್ಟೇದ್‌ಅಲ್ಲಂ। ನೇನ್‌ತಿನ್ನೇ ಬೆಲ್ಲಂ। ಪಾತಕ್ಕುಂಡಲಾಲಾ। ಪಶಿಬಿಡ್ಡಲಾಲಾ। ಪೇಪೇ ಗುರ್ರಂ। ಪೆಂಡ್ಲಿಕಿ ಪೋಯ। ಗಾರಗುಂಟ್ಲ ನೀಳ್ಳೊಚ್ಚ। ಗಾರ ಗೀರ ಗಿಸ್ಕಟ್ಟು।

ತಟಕೆ ಮುಟಕೆ

ತಟಕೆ ಮುಟಕೆ ತಾಳಂದೇವಿ। ಎಪ್ಪತ್ತವ್ರೆ ಗೊಲ್ಲಾರಣ್ಣ। ಆಚೆ ಕೇರೀಗ್ ಹೋಗಿ ಅಡ್ಡರಾಗಿ ತಂದು। ದರ್ರ ಬುರ್ರ ಬೀಸಿ, ಮೂರು ರೊಟ್ಟಿ ಸುಟ್ಟು। ಅತ್ತೆಗೊಂದು ಕೊಟ್ಟು, ಮಾವಂಗೊಂದು ಕೊಟ್ಟು। ಹೊಡಿಬೇಡ ಗಂಡ ಬಡಿಬೇಡಗಂಡ, ನಿಂಗ್ ಹಾಕಿದ್ದೆಲ್ಲಾ ದಂಡ।।

ತಾಡು2 ತಂಬಳಂ (ತಮಿಳು)

ತಾಡು ತಾಡು ತಂಬಳಂ ತಲೈಕಿ ಮೇಲೆ ಗೋಪುರಮ್। ಸಿಂಗ ಪೆರುಮಾಳ್ ಪಟ್ಟಣಮ್। ಸೀತಾದೇವಿ ಸಿರಿಗಾಲ್ ನೀಟು।

ಗುಲಾಬಿ ಹೂವೆ

ಗುಲಾಬಿ ಹೂವೆ ಬಿಸಿಲಲಿ ಕುಳಿತು ಜೊತೆಗಾಗಿ ಏಕೆ ಅಳುತಿರುವೆ? ಎದ್ದೇಳು ಗುಲಾಬಿ ಹಿಂದೆ ಮುಂದೆ ತಿರುಗು ನಿನಗೆ ಇಷ್ಟವಾದವರನ್ನು ಆರಿಸಿಕೊ (ಕೈ ನೀಡಿಸುತ್ತುತ್ತಾ ಹೇಳುವುದು)

ಚಿಕ್ಕಮಲ್ಲ (ಕುಣಿತ)

ಚಿಕ್ಕ ಮಲ್ಲ ಮುದ್ದು ಕಳ್ಳ ಕುಣಿಯೋ ಥಕ್ಕತೈ ಥಕ್ಕತೈ। ಆಡಿ ಓಡಿ ಬೇಡಿ ಕಾಡಿ ಕುಣಿಯೋ ।ಮೋಡಿ ಮಾಡಿ ಥಕ್ಕತೈ ಥಕ್ಕತೈ। ನೀನು ಚೆಂದ ಬುದ್ಧಿ ಮಂದ। ಕುಣಿಯೋ ಕಂದ ಥಕ್ಕತೈ ಥಕ್ಕತೈ। ಚೆಲುವ ಚೆನ್ನ ಎನ್ನ ರನ್ನ। ಕುಣಿಯೊ ಚಿಣ್ಣ ಥಕ್ಕತೈ ಥಕ್ಕತೈ।।

ತೆನ್ನ ಮರತ್ತಿಲೈ ಏರಾದೇ (ತಮಿಳು)

ತೆನ್ನ ಮರತ್ತಿಲೈ ಏರಾದೇ।।ತೇಂಗಾಯ್ಯೆ ಪರಿಕ್ಯಾದೇ।। ಮಾಂ ಮರತ್ತಿಲೈ ಏರಾದೇ। ಮಾಂಗಾಯ್ಯೆ ಪರಿಕ್ಯಾದೇ।।

ಕೊಯ್ಯಾ ಮರತ್ತಿಲ್ಲೈ ಏರಾದೇ। ಕೊಯ್ಯಾಕಾಯ್ಯೆ ಪರಿಕ್ಕಾದೇ।। ಆತ್ತುಲೆ ವಿಳರಿಯಾ ಸೇತ್ತುಲೆ ವಿಳರಿಯಾ।। ಕುದಿಕ್ಕಿರೆಯಾ? ಕುದಿಕ್ಕಿರೆಯಾ?

ದೂರಿ2 ದುಂಡಲಮ್ಮ (ಮಗುವನ್ನು ಹಿಂದಕ್ಕೆ ಮುಂದಕ್ಕೆ ಆಡಿಸುತ್ತಾ ಹೇಳೋದು)

ದೂರಿ ದೂರಿ ದುಂಡಲಮ್ಮ। ನಾರಿ ಕೇಳೆ ನಂದ ಗೋಪಿ। ನಂದಗೋಪಿಗೆ ಮಕ್ಕಳೆಷ್ಟು। ನಂದಗೋಪಿಗೆ ಎರಡು ಮಕ್ಕಳು। ರಾಮನೊಬ್ಬ। ಶ್ಯಾಮನೊಬ್ಬ।। ಅತ್ತೆ ಮನೆಗೆ ಹೋದನಮ್ಮ। ಅತ್ತಿಹಣ್ಣು ತಿಂದನಮ್ಮ। ಮಾವನ ಮನೆಗೆ ಹೋದನಮ್ಮ। ಮಾವಿನಹಣ್ಣು ತಿಂದನಮ್ಮ।।

ದೂರಿ2 ದುಗ್ಗಲಮ್ಮ

ದೂರಿ ದೂರಿ ದುಗ್ಗಲಮ್ಮ। ಮಕ್ಕಳೆಷ್ಟು ದೂರಿ ದೂರಿ।। ಮನೆಯ ತುಂಬ ದೂರಿ ದೂರಿ। ತಲೆ ತಲಕಾಡು ದೂರಿದೂರಿ।। ಕಣ್ಣು ಕನ್ನಂಬಾಡಿ ದೂರಿ ದೂರಿ। ಮೂಗು ಮುಂದ್ಲೂರು ದೂರಿ ದೂರಿ।। ಕಿವಿ ಕಿರಂಗೂರು ದೂರಿ ದೂರಿ। ಹಲ್ಲು ಸಣ್ಣಕ್ಕಿ ದೂರಿದೂರಿ।। ನಾಲಿಗೆ ನಾಗರಹೆಡೆ ದೂರಿ ದೂರಿ। ತುಟಿ ತೊಂಡೆಹಣ್ಣು ದೂರಿ ದೂರಿ।। ಕೈಯಿ ಬೀಸಣಿಗೆ ದೂರಿ ದೂರಿ। ತೊಡೆ ಬಾಳೆಕಂಬ ದೂರಿ ದೂರಿ।। ಕಾಲು ಓಲೆಮರ ದೂರಿ ದೂರಿ। ಹೊಟ್ಟೆ ಚಿಕ್ಕೇನಹಳ್ಳಿ ದೂರಿದೂರಿ।। ಬೆನ್ನು ಬೀಸಣಿಗೆ ದೂರಿದೂರಿ।।

ಶಾಂಜಾಡಮ್ಮ ಶಾಂಜಾಡು (ತಮಿಳು)

ಶಾಂಜಾಡಮ್ಮ ಶಾಂಜಾಡು। ಶಾಯಕ್ಕಿಳಿಯೆ ಶಾಂಜಾಡು। ಕುತ್ತುವಿಳಕ್ಕೆ ಶಾಂಜಾಡು। ಕೋವಿಲ್ ಪುರಾವೆ ಶಾಂಜಾಡು। ತಂಗತಟ್ಟೈ ಶಾಂಜಾಡು। ತಾಮರೈಪೂವೆ ಶಾಂಜಾಡು।।

ಜಾರಿಬಿದ್ದ ರಾಮಣ್ಣ (ಜಾರುಬಂಡೆ)

ಜಾರಿ ಬಿದ್ದ ರಾಮಣ್ಣ। ನೀವೆಲ್ಲಾ ನೋಡ್ರಣ್ಣ। ಏಟುಬಿತ್ತು ಜೋರಾಗಿ। ಹಲ್ಲು ಮುರ್ದು ಚೂರಾಗಿ। ಬಾಯಲ್ ಬಂತು ರಕ್ತ। ಕಣ್ಣಲ್ ಬಂತು ನೀರು। ಆಡುತ್ತಿದ್ದ ಮಕ್ಕಳು। ನೋಡಿ ಎಲ್ಲ ನಕ್ಕರು। ನೀರು ತಾ ಎಂದರು. ನೀರು ತಂದು ಸುರಿದರು।।

ಬೆಣ್ಣೆ ಮುದ್ದೆ ಚಂದ್ರ ತೇಲಿ (ಜೋಕಾಲಿ) — ರಾಗ:ನೀಲಾಂಬರಿ

ಬೆಣ್ಣೆ ಮುದ್ದೆ ಚಂದ್ರ ತೇಲಿ। ಬಾನ ತುಂಬ ಚಿಕ್ಕೆ ನೀಲಿ। ಕೊಳದಿ ಅರಳೆ ನೈದಿಲೆ ನೀಲಿ। ಮರಕೆ ಕಟ್ಟಿ ಆಡುವೆ ಜೋಕಾಲಿ।।1।। ಒಂದು ಎರಡು ಈ ಲೆಖ್ಖವು ಸಾಕು। ತಾರೆ ಎಣಿಕೆ ಇನ್ನೇಕೆ ಬೇಕು। ಮೌನಗೀತೆಯ ಲಾಲಿ ಆಲಿಸು। ಉಲ್ಲಾಸದ ಜೋಕಾಲಿ ಹಿಂದೆ ಮುಂದೆ ಜೀಕು।।2।। ಹುಣ್ಣಿಮೆ ಇರುಳು ತಂಗಾಳಿ ಬೀಸಿ। ಮಲ್ಲಿಗೆ ಅರಳು ಸೌಗಂಧ ಸೂಸಿ। ನದಿಯ ತಟದಲಿ ಮರಳು ಹಾಸಿ। ಉಯ್ಯಾಲೆ ತೂಗಲಿ ದಣಿವ ಮರೆಸಿ।।3।। ಮಿನುಗು ತಾರೆ ತಾರೆಯೇ ಮಿನುಗು। ಮಕ್ಕಳ ಕಂಗಳಲಿ ಹೊಳೆವಂತೆ ಕನಸು। ಜೋಕಾಲಿ ಮೆಲ್ಲಮೆಲ್ಲನೆ ತೂಗು। ಅಮ್ಮನ ತೋಳಲಿ ತೂಗಿದಂತೆ ಕೂಸು।।4।।

ಬಂತು2 ದಂಡು ಆಡಲಿಕ್ಕೆ — ರಾಗ:ಪುನ್ನಾಗವರಾಳಿ

ಬಂತು ಬಂತು ದಂಡು। ಆಡಲಿಕ್ಕೆ ಚೆಂಡು।।ಪ।। ಹೊಡೆದರೆ ಹಾರುವ ಅವನೋಡು। ನಿಮ್ಮಯ ಗೆಳೆಯ ನೀ ನೋಡು। ಹೊಡೆದರೆ ಬೀಳ ಒದ್ದರು ಬಯ್ಯ। ಓಡುವ ಆಟದಿ ಅವ ಮೇಲು ಆಡಲಿಕ್ಕೆ ಚೆಂಡು।।1।। ಕೈಯ್ಯೂ ಇಲ್ಲ ಕಾಲೂ ಇಲ್ಲ। ರುಂಡವು ಮುಂಡವು ಏನೂ ಇಲ್ಲ। ಕೈಯ್ಯಲ್ಲಾಡಿಸು ಕಾಲಲ್ಲಾಡಿಸು। ಪುಟ ಪುಟ ಹಾರಿ ತಾ ಪೋಪ।।2।। ರಷ್ಯಕೆ ಪೋಪ ರೋಮಿಗೆ ಪೋಪ। ಆಟಕ್ಕೆಂದರೆ ತಾ ಸಿದ್ಧ। ನೆಲದಲಿ ಹಾಕು ನೀರಲಿ ಹಾಕು। ಎಲ್ಲೇ ಹಾಕಲಿ ತಾ ನೆಗೆವ।।3।। ಅತ್ತಿಂದಿತ್ತ ಇತ್ತಿಂದತ್ತ। ಓಡಿಸೆ ಆಡಿಸೆ ತಾ ಪೋಪ। ಓಡಲು ಬಲ್ಲ ಆಡಲು ಬಲ್ಲ। ನನ್ನಯ ಗೆಳೆಯ ಗುಂಡಣ್ಣ।।4।।

ಇಲ್ಲಿ ಬರ್ರಿ ಆಡೋಣ ಬುಗುರಿ ರಾಗ: ಕುರಂಜಿ

ಇಲ್ಲಿ ಬರ್ರಿ ಆಡೋಣ ಬುಗುರಿ।।ಪ।। ಹುರಿಯನು ಸುತ್ತಿ ಗರ್ರನೆ ಬಿಡಲು। ಬರ್ರನೆ ತಿರುಗುವ ಬಣ್ಣದ ಬುಗುರಿ। ಮರವನ್ನು ಕೆತ್ತಿ ಗುಂಡಗೆ ಮಾಡಿ। ಮೊಳೆಯನು ಹೊಡೆದಿಹ ಅಂದದ ಬುಗುರಿ।।1।। ಪಾವಲಿಗೆರಡು ಕೊಂಡಿಹೆ ನಾನು। ನಿದ್ದೆ ಕಟ್ಟುವ ಗುನ್ನದ ಬುಗುರಿ। ನೀನೂ ಕೊಳ್ಳೋ ನೀನೂ ಆಡೋ। ಅಂದದ ಚೆಂದದ ಬಣ್ಣದ ಬುಗುರಿ।।2।। ನೋವನು ಮರೆಸಿ ಹುರುಪನು ಕೊಟ್ಟು। ಬಲವನೀವುದು ಆಟದ ಬುಗುರಿ। ಆಟಕೆ ನಿಂತರೆ ಎಂದೂ ಸೋಲದ। ನನ್ನಯ ಪ್ರೀತಿಯ ಗೆಲುವಿನ ಬುಗುರಿ।।3।।

ತಿರುಗೆಲೆ ಬುಗುರಿ ತಿರುತಿರುಗು

ತಿರುಗೆಲೆ ಬುಗುರಿ ತಿರುತಿರುಗು। ಸುರುಳಿಯ ತೆರದಲಿ ತಿರುತಿರುಗು।ಓಡುತ ಓಡುತ ತಿರುತಿರುಗು। ನಿಂತಲಿ ನಿಂತು ತಿರುತಿರುಗು। ನಿದ್ದೆಯ ಮಾಡುತ ತಿರುತಿರುಗು।।1।। ಸದ್ದುಗದ್ದಲವಿಲ್ಲದೆ ತಿರುತಿರುಗು। ಅಂಗೈಮೇಲೆ ತಿರುತಿರುಗು। ಚಕ್ರಾಕಾರದಿ ತಿರುತಿರುಗು। ದಾರಿಯ ಗುಂಟ ತಿರುತಿರುಗು।।2।। ಗಿರಿಗಿರಿನೀನು ತಿರುತಿರುಗು।ಮಕ್ಕಳ ನಗಿಸುತ ತಿರುತಿರುಗು। ಮನವನು ತಣಿಸುತ ತಿರುತಿರುಗು। ಬಣ್ಣದ ಬುಗುರಿಯೆ ತಿರುತಿರುಗು।।3।।

ಬಣ್ಣದ ಬುಗರಿ

ಬಣ್ಣದ ಬುಗರಿ ಬಾಲರ ಬುಗರಿ। ಗಿರ್ ಗಿರ್ ತಿರುಗುವ ಭಲೆಭಲೆ ಬುಗರಿ। ಸುಂಯ್ ಸುಂಯ್ ಸದ್ದನು ಮಾಡುವ ಬುಗರಿ। ಸರಸರ ಸುತ್ತುವ ಸುಂದರ ಬುಗರಿ। ಬಣ್ಣದ ಬಣ್ಣದ ಅಂದದ ಬುಗರಿ ನಮ್ಮನು ನಲಿಸುವ ಚಂದದ ಬುಗರಿ।।

ಬುಗರಿ2 ಹಸುರಿನ ಬುಗುರೀ

ಬುಗರೀ ಬುಗರೀ ಹಸುರಿನ ಬುಗುರೀ। ಬಣ್ಣದ ಬುಗುರಿ ಸಣ್ಣದು ಬುಗುರಿ। ಮರದಲಿ ಮಾಡಿದ ಮೊಳೆಯೂ ಸೇರಿದ। ಸರಿಸರಿದಾಡುವ ಚೆಂದದ ಬುಗುರಿ। ದಾರವ ಸುತ್ತುವ ಗಿರಿಗಿರಿ ತಿರುಗುವ ಮಕ್ಕಳ ಜೇಬಲಿ ಬುಗುರಿ ಬುಗುರಿ।।

ನೋಡಿರಿ2 ನನ್ನಯ ಕುದುರೆ

ನೋಡಿರಿ ನೋಡಿರಿ ನನ್ನಯ ಕುದುರೆ। ಅಣ್ಣನುತಂದಿಹ ಬಣ್ಣದ ಕುದುರೆ। ನಾಲ್ಕು ಕಾಲಿನ ನನ್ನಯ ಕುದುರೆ।।1।। ಒಂದೇ ಬಾಲದ ಚಂದದ ಕುದುರೆ। ಮುಂದಡೆ ನಾನು ಹಿಂದಡೆ ಪಾಪು। ಹಿಂದಕೂ ಮುಂದಕೂ ತೂಗುವೆನು। ಮೇವನು ಮೇಯದು ನೀರನು ಕುಡಿಯದು। ನಮ್ಮನು ಹೊತ್ತು ತೂಗುವುದು।।2।।

ಬಂಡಿ2 ಜಟಕಾ ಬಂಡಿ ರಾಗ:ಶಂಕರಾಭರಣ

ಬಂಡಿ ಬಂಡಿ ಜಟಕಾ ಬಂಡಿ। ಕಂದು ರಂಗಿನ ಕುದುರೆ ಬಂಡಿ। ಕುಣಿಗಲ್ ಕುದುರೆ ಕಟ್ಟಿದ ಬಂಡಿ। ವೇಗದ ಕುದುರೆ ಎಳೆಯುವ ಬಂಡಿ।।1।। ಬುಡೇನ್ ಸಾಬಿ ಬಿಡುವಾ ಬಂಡಿ। ಬಾಜೂ ಬಾಜೂ ಕೂಗುವ ಬಂಡಿ। ಚಾವಟಿ ಏಟಿಗೆ ಓಡುವ ಬಂಡಿ। ಚಲ್ರೆ ಬೇಟಾ ಚಲ್ ಚಲ್ ಬಂಡಿ।।2।। ಗಾಳಿ ಪೆಟ್ರೋಲ್ ಕೇಳದ ಬಂಡಿ। ರೈಲು ಬಸ್ಸು ಕಾಯದ ಬಂಡಿ। ನಾಲ್ವರ ಹೊತ್ತು ಸಾಗುವ ಬಂಡಿ। ನಾಗಾಲೋಟದಿ ಓಡುವ ಬಂಡಿ।।3।। ಕಟಕಟ ನಾದವ ಮಾಡುವ ಬಂಡಿ। ಶಾಲೆಗೆ ಮಕ್ಕಳ ಒಯ್ಯುವ ಬಂಡಿ। ಸಮಯಕ್ಕಾಗುವ ಸಾರೋಟ್ ಬಂಡಿ। ಸಾರಥಿ ನೀಸುವ ಬದುಕಿನ ಬಂಡಿ।।4।।

ಅಗೋ ನೋಡು ಗಾಳಿಪಟ ರಾಗ:ಮಾಂಡ್

ಅಗೋ ನೋಡು ಅಗೋ ನೋಡು। ಗಾಳಿಪಟ ಹಾರುತಿದೆ। ಮೇಲೆ ಮೇಲೆ ಏರುತಿದೆ। ಮುಂದೆ ಮುಂದೆ ಸಾಗುತಿದೆ।

ಹಕ್ಕಿಯಂತೆ ಹಾರುತಿದೆ। ಲಾಗ ಹಾಕಿ ಬೀಳುತಿದೆ। ಮತ್ತೆ ಮತ್ತೆ ಏರುತಿದೆ।।

ಅಣ್ಣನು ಮಾಡಿದ ಗಾಳಿಪಟ

ಅಣ್ಣನು ಮಾಡಿದ ಗಾಳಿಪಟ। ಬಣ್ಣದ ಹಾಳೆಯ ಗಾಳಿಪಟ। ನೀಲಿಯ ಬಾನಲಿ ತೇಲುವ ಸುಂದರ। ಬಾಲಂಗೋಸಿಯ ನನ್ನ ಪಟ।।1।। ಬಿದಿರಿನ ಕಡ್ಡಿಯ ಗಾಳಿಪಟ। ಬೆದರದ ಬೆಟ್ಟದ ಗಾಳಿಪಟ। ದಾರವ ಜಗ್ಗಿ ದೂರದಿ ಬಗ್ಗಿ। ತಾರೆಯ ನಗಿಸುವ ನನ್ನ ಪಟ।।2।।

ನೀಲಿಬಾನಲಿ ನಲಿಯುತ ಸಾಗಿದೆ

ನೀಲಿಬಾನಲಿ ನಲಿಯುತ ಸಾಗಿದೆ। ನಾನು ಮಾಡಿದ ಗಾಳಿಪಟ। ಮೀನಿನಂತೆ ಈಜುತ ಹೊರಟಿದೆ। ಆಗಸದಲ್ಲಿ ಆಡುತ ಆಟ। ಹಕ್ಕಿಗಳಂತೆ ರೆಕ್ಕೆಯ ಬಿಚ್ಚಿದೆ। ಅತ್ತಾ ಇತ್ತಾ ಹಾರಾಡುತ। ಹಾವಿನ ಹಾಗೆ ಹೊರಳಾಡುತಲಿದೆ। ಮೇಲೆ ಕೆಳಗೆ ಇಳಿಯುತ। ರಂಗು ರಂಗಿನ ಚಿತ್ತಾರ ಬಿಡಿಸುತಾ। ಸುಂದರ ಗೊಳಿಸಿದೆ ಗಗನ। ಅಂಬರ ಚುಂಬಿಸಿ ಎಲ್ಲರ ನಗಿಸಿ। ಸಂತಸ ಪಡಿಸಿದೆ ಮನ। ಏಳುತ ಬೀಳುತ ಬಾನೆತ್ತರ ಜಿಗಿದು। ಮೂಡಿಸಿದೆ ಹೊಸ ಚೇತನ। ನೋವಿನಲ್ಲೂ ನಲಿವು ಕಾಣುತ। ಮಕ್ಕಳಿಗಾಗಿದೆ ಪ್ರೇರಣ। ಕಾಗದ ಬಿದಿರು ದಾರದಂತೆ ನಮ್ಮ। ಬದುಕಿದು ಗಾಳಿಪಟ। ಸಾಧನೆ ಶಿಖರ ತಲುಪಲು ಇರಲಿ। ಗಾಳಿಪಟದಂತೆ ನಮ್ಮ ಓಟ।।

ಬಾನಲ್ಲಿ ಹಾರುವ ಗಾಳಿಪಟ

ಬಾನಲ್ಲಿ ಹಾರುವ ಗಾಳಿಪಟ। ನಾನು ಮಾಡಿದ ಗಾಳಿಪಟ। ಕೆಂಪು ರಂಗಿನ ಗಾಳಿಪಟ। ಬಾಲಂಗೋಸಿಯ ಗಾಳಿಪಟ।।2।। ಪರಪರ ಏರಿದ ಗಾಳಿಪಟ। ಭರಭರ ಏರಿದ ಗಾಳಿಪಟ। ಸುಂದರವಾದ ಗಾಳಿಪಟ। ನಾನು ಮಾಡಿದ ಗಾಳಿಪಟ।।2।।

ಬೂದಿ ತೆಗ್ದೆ ಒಲೆ ಸಾರ್‌ಸ್ದೆ

ಬೂದಿ ತೆಗ್ದೆ ಒಲೆ ಸಾರ್‌ಸ್ದೆ, ರಂಗೋಲಿ ಇಟ್ಟೆ, ಸೌದೆ ಇಟ್ಟೆ, ಬೆಂಕಿ ಹಚ್ಚಿದೆ, ತವಾಯಿಟ್ಟೆ, ದೋಸೆ ಹುಯ್ದೆ, ಚುಂಯ್ ಚುಂಯ್, ಚುಂಯ್, ಬೆಂದಿದ್ಯಾ ಇಲ್ವಾ? ಬೆಂದಿದೆ, ಬೆಂದಿದೆ।। (ಕೈಗಳನ್ನು ನೆಲಕ್ಕೆ ಊರಿ, ಬೆರಳುಗಳ ನಡುವೆ ಸಂದನ್ನು ಮಾಡಿಕೊಂಡು ಆಡುವ ಆಟ।।)

ಮೂಟೆ ಮೇಲ್ ಮೂಟೆ

ಮೂಟೆ ಮೇಲ್ ಮೂಟೆ ಯಾವ್ ಮೂಟೆ? ಕಡ್ಲೆಮೂಟೆ। ಯಾವ್‌ಮೂಟೆ? ಉಪ್ಪು ಮೂಟೆ। ಯಾವ್ ಮೂಟೆ? ಉದ್ದಿನ ಮೂಟೆ। ಯಾವ್ ಮೂಟೆ? ಸಕ್ಕರೆ ಮೂಟೆ। ಯಾವ್ ಮೂಟೆ? ಅಕ್ಕಿ ಮೂಟೆ ।। (ಯಾರನ್ನು ಕಂಡರೆ ಇಷ್ಟೋ ಇಲ್ಲವೋ ಆ ಮೂಟೇನ ಕಚಕ್ ಎಂದು ಕೈಯಿಂದ ಕತ್ತರಿಸುವುದು)

ರತ್ತೋ2 ರಾಯನ ಮಗಳೇ

ರತ್ತೋ ರತ್ತೋ ರಾಯನ ಮಗಳೇ ಬಿತ್ತೋ ಬಿತ್ತೊ ಭೀಮನ ಮಗಳೇ ಹದಿನಾರೆಮ್ಮೆ ಕರೆಯಲಾರೆ, ಕಾಸಲಾರೆ ಕಡೆಯಲಾರೆ, ಚೋಟು ಗುಬ್ಬಿ ಬಾಳೆಕಂಬ ಕುಕ್ಕರ ಬಸ್ವಿ ಕೂರ್ ಬಸ್ವಿ।।

ಸಾಧು ಗೋದು ಫಿರಂಗಿ (ಕೈ ಬೆರಳುಗಳನ್ನು ಎಣಿಸುತ್ತಾ ಮಡಿಚುವುದು)

ಸಾಧು ಗೋದು ಫಿರಂಗಿ ಲಾಟ್ಮೆ ಲೂಟ್ಮೆ ಚೀ ಚಲ್ ಚಟಕ್

ಸಾರ್ಸಿ ಗುಡ್ಸಿ ರಂಗೋಲಿ ಇಟ್ಟು

(ಅಂಗೈ ನೇವರಿಸಿ ಹೇಳುತ್ತಾ ಕೊನೆಗೆ ಕಂಕುಳಲ್ಲಿ ಕಚಗುಳಿಯಿಡುವುದು)

1. ಸಾರ್ಸಿ ಗುಡ್ಸಿ ರಂಗೋಲಿ ಇಟ್ಟು, ಎಲೆ ಹಾಕಿ, ಅನ್ನ, ಸಾರು, ತವ್ವೆ, ತುಪ್ಪ, ಪಲ್ಯ, ಕೋಸಂಬ್ರಿ, ಮಜ್ಜಿಗೆಹುಳಿ, ಗೊಜ್ಜು, ಚಿತ್ರಾನ್ನ, ಪಾಯಸ, ಒಬ್ಬಟ್ಟು, ಆಂಬೋಡೆ, ಎಲ್ಲ ಬಡ್ಸಿ ಅಪ್ಪನ್ ಗೊಂದು ತುತ್ತು, ಅಮ್ಮನಿಗೊಂದು ತುತ್ತು, ಅಜ್ಜೀಗೊಂದ್ ತುತ್ತು, ತಾತನಿಗೊಂದು ತುತ್ತು, ಅಣ್ಣನಿಗೊಂದು ತುತ್ತು, ಅಕ್ಕನಿಗೊಂದು ತುತ್ತು, ಮಿಕ್ಕಿದ್ದೆಲ್ಲಾ ಕಾಗೆಗೆ॥

2. ಅಪ್ಪ ಬಂದ ಗಡಿಯಾರ ತಂದ, ಊಟ ಮಾಡ್ದ ಕೀ ಕೊಟ್ಟ॥

3. ಕಳ್ಳ ಬಂದ ಕಟ್ಟೆ ಒಡೆದ । ಎಲ್ಲಿಗೆ ಬಂದ? ಇಲ್ಲಿಗೆ ಬಂದ। ಏನು ಮಾಡ್ದ? ಕಚಗುಳಿ ಇಟ್ಟ॥

ಹಾಲಿಗೊಂದು ಕಾಸು

ಹಾಲಿಗೊಂದು ಕಾಸು ಮೊಸರಿಗೊಂದು ಕಾಸು। ಬೆಣ್ಣೆಗೊಂದು ಕಾಸು। ತುಪ್ಪಕ್ಕೊಂದು ಕಾಸು। ಚಿಕ್ಕಪ್ಪ ಕೊಟ್ಟ ಕಾಸು, ಚಕ್ಕುಲಿಗಾಯ್ತು। ಮಾವ ಕೊಟ್ಟ ಕಾಸು ಮಾಯವಾಗಿ ಹೋಯ್ತು। ಭಾವ ಕೊಟ್ಟ ಕಾಸು ಭಾವೀಲಿ ಬಿದ್ದೋಯ್ತು। ಅತ್ತೆ ಕೊಟ್ಟ ಕಾಸು ಅತ್ತಿತ್ತೋಯ್ತು। ಅಪ್ಪ ಕೊಟ್ಟ ಕಾಸು ಇಷ್ಟದಪ್ಪ ಆಯ್ತು। ಅಕ್ಕ ಕೊಟ್ಟ ಕಾಸು ಅಲ್ಲೇ ಹೋಯ್ತು। (ಹೊಟ್ಟೆಗೆ ಕಚಗುಳಿ ಇಟ್ಟು ಮಗುವನ್ನು ನಗಿಸುವುದು) (ಅಂಗೈಮೇಲೆ ಒಂದು ಬೆರಳನ್ನು ಅದುಮಿಸುತ್ತಾ ಹೇಳುವುದು)

ಹೆಬ್ಬೆರಳಣ್ಣಾ2 ಹೇಗಿದ್ದಿಯಣ್ಣಾ

ಹೆಬ್ಬೆರಳಣ್ಣಾ ಹೆಬ್ಬೆರಳಣ್ಣಾ ಹೇಗಿದ್ದಿಯಣ್ಣಾ? ಚೆನ್ನಾಗಿದ್ದೀನಣ್ಣ - ಹೋಗ್ ಬರ್ತೀನ್ ಅಣ್ಣಾ॥ ಹೋಗ್ ಬಾರಣ್ಣ - ತೋರ್ ಬೆರಳಣ್ಣಾ। ತೋರ್ ಬೆರಳಣ್ಣ - ಹೇಗಿದ್ದೀಯಣ್ಣಾ। ಚೆನ್ನಾಗಿದ್ದೀನಣ್ಣ - ಹೋಗ್‌ಬರ್ತೀನಣ್ಣಾ। ಹೋಗ್ ಬಾರಣ್ಣ - ಮಧ್ಯದಬೆರಳಣ್ಣ। ಹೇಗಿದ್ದೀಯಣ್ಣಾ - ಚೆನ್ನಾಗಿದ್ದೀನಣ್ಣಾ - ಹೋಗ್ ಬರ್ತೀನ್ ಅಣ್ಣಾ - ಉಂಗುರ ಬೆರಳಣ್ಣ - ಉಂಗುರ ಬೆರಳಣ್ಣ। ಹೇಗಿದ್ದೀಯಣ್ಣಾ - ಚೆನ್ನಾಗಿದ್ದೀನಣ್ಣಾ - ಹೋಗ್‌ಬರ್ತೀನಣ್ಣ -ಹೋಗ್ ಬಾರಣ್ಣ - ಕಿರುಬೆರಳಣ್ಣಾ ಹೇಗಿದ್ದೀಯಣ್ಣಾ -ಚೆನ್ನಾಗಿದ್ದೀನಣ್ಣ - ಹೋಗಬರ್ತೀನಣ್ಣ ಹೋಗ ಬಾರಣ್ಣಾ॥ ನಮಸ್ಕಾರಣ್ಣ ನಮಸ್ಕಾರಣ್ಣ॥

ಎಳೆಯರ ದಿನವಿದು (ಮಕ್ಕಳದಿನಾಚರಣೆ) ರಾಗ:ಕುರಂಜಿ

ಎಳೆಯರ ದಿನವಿದು ಮಧುರವಿದು। ಗೆಳೆಯರ ಸಂಗಡ ನಲಿಯುವುದು॥ಪ॥ ಹೂವಿನ ತೋಟದ ಚಿಟ್ಟೆಗಳಂತೆ। ಕುಣಿಯುತ ನೆಗೆಯುತ ಓಡುವುದು। ಅರಳುವ ಮೊಗ್ಗಿನ ಆತುರದಂತೆ। ಘಮಘಮ ಪರಿಮಳ ಹರಡುವುದು॥1॥ ಬಿದಿಗೆಯ ಚಂದ್ರನ ತೋಟದಂತೆ। ಕಣ್ಣಿಗೆ ಹಬ್ಬವ ತರುತಿಹುದು। ಪುಣ್ಯವಂತರ ಜೀವನದಂತೆ। ಪರೋಪಕಾರವ ಸ್ಮರಿಸುವುದು॥2॥ ಹೃದಯವು ಹೂಗಳ ಕೋಮಲದಂತೆ। ಪ್ರೀತಿಯ ಗೌರವ ನೆಲೆಸಿಹುದು। ಈ ದಿನ ಶುಭ ದಿನ ಮುಂಬರುವಂತೆ। ಶ್ರೀ ಹೆಸರ ನೆನಪಿಡಿ ಎಂದೆಂದೂ॥3॥

ಗ್ರಾಮೀಣ ಕ್ರೀಡೆ

ಅಣ್ಣೆಕಲ್ಲು

ಹೆಚ್. ಎಮ್. ಗುಚ್ಚಿ ಲಕ್ಷ್ಮೀದೇವಿ। ನಡುವೆ ಗುಚ್ಚಿ ನಾಗಮ್ಮ। ಕೋಣೆ ಗುಚ್ಚಿ ಕಮಲಾಕ್ಷಮ್ಮ। ನಡುಮನೆಯಲಿರುವಳಿ ಸುಬ್ಬಮ್ಮ। ಅಂಗಳದಲ್ಲಿರುವಳಿ ಪಾರ್ವತಮ್ಮ॥1॥ ತಂದನ್ನಾ ಪಿಲ್ಲಿ ಒಂದೆ, ಎರಡೆ, ಮೂರೆ। ಪೊಹಲ್ಲಾ ಕೊಟ್ಟೆ ಒಂದೆ, ಎರಡೆ, ಮೂರೆ। ತಾಹಲ್ಲಾ ತಟ್ಟೆ ಒಂದೆ, ಎರಡೆ, ಮೂರೆ। ಯಾವೂರಮ್ಮ ಬಸಾವಿ ಒಂದೆ। ಎಲ್ಲಿಹಳಮ್ಮ ಬಸಾವಿ ಎರಡೆ ಸುಣ್ಣದಮ್ಮ ಶುಂಠಿ ಮೂರೆ॥2॥ ಅಚ್ಚಮ್ಮ ಗುಚ್ಚಿ ಒಂದೆ, ಎರಡೆ, ಮೂರೆ,। ಡುದ್ದೂರಿ ಡುಬ್ಬಣ್ಣ

ಒಂದೆ, ಎರಡೆ, ಮೂರೆ। ಶಳಕ್ಕವೇರಿ ಗುಳಕ್ಕ ಒಂದೆ, ಎರಡೆ, ಮೂರೆ।।3।। ಅರಿಶಿನ್ನಾದ ದರುಶನ ಒಂದೆ, ಎರಡೆ, ಮೂರೆ। ಕುಂಕುಮನಾದ ಪಂಕಜ ಒಂದೆ, ಎರಡೆ, ಮೂರೆ। ಕಬ್ಬಿಣದ ಕಡಾಣಿ ಒಂದೆ, ಎರಡೆ, ಮೂರೆ।।4।। ಹಿತ್ಲಗ್ ಹೋಗಮ್ಮ ಹಿರೇಕಾಯ್ ಕುಯ್ಯಮ್ಮ। ಸೋರೆಕಾಯಿ, ಕುಯ್ಯಮ್ಮ। ಸೌತೆಕಾಯ್ ಕುಯ್ಯಮ್ಮ। ಪೆಟ್ಟಿಗ್ ಹಾಕಮ್ಮ। ಪೆಟ್ಗೆ ಬಾಯ್ ಮುಚ್ಚಮ್ಮ।।5।।

(ಅ) ಕುಪ್ಪಳಿಸುವುದು

ಹಾಲನು ಕಾಯಿಸಿ ಗಡಿಗೆಯಲಿರಿಸಿ। ಸರಸರ ಬೆರಸಿ ಬೆರಸುತಲಿರಿಸಿ। ಬೆಕ್ಕಣ್ಣ ಬಂದ ನೆಕ್ಕೊಂಡ್ ಹೋದ। ಡಿಕ್ಕಿ ಡಿಕ್ಕಿ ಎಂದ ಕುಕ್ಕೆಯ ಕವುಚಿ ಒಂದು ಗುಚ್ಚಿ ಮಾಡಿದೆ।।1।। ಪುಟ್ಟ ಪುಟ್ಟ ಹುಡುಗಿ। ಪುಟಾಣಿ ಹುಡುಗಿ। ಕರಿಸೀರೆ ಉಡಿಸಿ। ಬಿಳಿ ರವಿಕೆ ತೊಡಿಸಿ। ಹೂವನು ಮುಡಿಸಿ। ಗಂಡನ ಮನೆಗೆ ಕಳಿಸಿ।।2।। ರಾಮಣ್ಣ ಬಂದ। ನಿಂಬೆಹಣ್ಣು ತಂದ। ಆಗಲೆ ಗುಚ್ಚಿ ಈಗಲೆ ಗುಚ್ಚಿ। ರಾಮ್ ಪಕ್ಷಿ ಕೃಷ್ಣನ್ ಪಕ್ಷಿ। ಮೂರೆ ಪಕ್ಷಿ।।3।।

(ಆ) ಕೂಸು ಕೊಡೋದು

ಒಂದಂ ಬೇಳೆ ಬೆಳಕಂ ಬೇಳೆ। ಎರಡು ಗರಡಿಯ ಸಾಲು। ಮೂರು ಮುತ್ತಿನ ಚೆಂಡು। ನಾಕು ನಲ್ಲಿಗೆ ವಾಕು। ಐದು ಅಜ್ಜಿ ತಲೆ ದಿಂಬು। ಆರು ಬಾರೋ ಬಸವಣ್ಣ। ಏಳು ಕಡಿಯೋ ಚೇಳು। ಎಂಟು ನಾಗರ ಗಂಟು। ಒಂಭತ್ತು ಸಿರಿ ಸಂಪತ್ತು। ಹತ್ತು ದಿನ ತುಂಬಿತ್ತು। ಹನ್ನೊಂದು ಮತ್ತೊಂದು। ಹನ್ನೆರಡಕ್ಕೆ ನಿನಗೊಂದು ಕೂಸು।।

ಕಾಮಣ್ಣ ಮಕ್ಕಳು

ಕಾಮಣ್ಣ ಮಕ್ಕಳು। ಕಳ್ಳ ಸುಳ್ಳು ಮಕ್ಕಳು। ಏನೇನು ಕದ್ದರು? ಸೌದೆ ಬೆರಣಿ ಕದ್ದರು।। ಯಾತಕ್ಕೆ ಕದ್ದರು। ಕಾಮಣ್ಣನ್ನ ಸುಡಕ್ಕೆ ಕದ್ದರು।। (ಬದುಕಿದ್ದವರನ್ನು ಸತ್ತರೆಂದು ಹೇಳಿ ಬಾಯಿ ಬಡಿದುಕೊಳ್ಳುತ್ತಾರೆ)

ಹುಯ್ಯೊ2 ಮಳೆರಾಯ

ಹುಯ್ಯೋ ಹುಯ್ಯೋ ಮಳೆರಾಯ। ಹೂವಿನ ತೋಟಕೆ ನೀರಿಲ್ಲ। ಬಾರೋ ಬಾರೋ ಮಳೆರಾಯ। ಬಾಳೆಯ ತೋಟಕೆ ನೀರಿಲ್ಲ। ಕುಟ್ಟೋ ಕುಟ್ಟೋ ಮಳೆರಾಯ। ಕಟ್ಟೆಗೆ ಕೆರೆಗೆ ನೀರಿಲ್ಲ।।1।। ಬಾರೆಂದರೆ ಬಾರನು। ಹೋಗೆಂದರೆ ಹೋಗನು। ಯಾರಿಚ್ಚೆ ಹೇಳು ಮಳೆರಾಯ।।2ಸಾರಿ।। ಶಿವರಾಯ ತನ್ನಿಚ್ಚೆ ಬಂದಲ್ಲಿಸುರಿವೋನು।।2।। ಮಳೆರಾಯನು ಹೋಗವ್ನೆ। ಮೈಸೂರು ದೇಶಕ್ಕೆ ಎಂದಿಗೆ ಬರ್ತಾನೋ ಗೊತ್ತಿಲ್ಲ। ಯಾಕಪ್ಪ ಮಳೆರಾಯ ಹಿಂದೆ ಮುಂದೆ ನೋಡ್ತಿಯಾ। ಲೋಕದ ಮೇಲೆ ಮೆರೆಯುವವನೆ।।3।। ಬೇಲದಕಾಯಿ ಬೆಳ್ಳಿಗುಂಡು। ಸೀಗೇಕಾಯಿ ಚಿನ್ನದ ದಂಡು। ಅಂಚಿಕಡ್ಡಿ ಕೆಂಚೇಗೌಡ। ಸಾಸ್ವೇ ಕಡ್ಡಿ ಸೈನ್ಯವಮಾಡಿ। ಜಡಿಮಳೆಯಾಗಿ ಕೆರೆಗಳು ತುಂಬಿ। ಕಾರೇ ಮಳೆ ಕಬ್ಬಿನ ಮೆಳೆ। ಬೈಲಿಗೆ ಬಂತು।।4।। ಹುಯ್ಯೋ ಹುಯ್ಯೋ ಮಳೆರಾಯ। ಬತ್ತದ ಗದ್ದೆಗೆ ನೀರಿಲ್ಲ। ಹುಯ್ಯೋ ಹುಯ್ಯೋ ಮಳೆರಾಯ। ರಾಗಿ ಪೈರಿಗೆ ನೀರಿಲ್ಲ। ಹುಯ್ಯೋ ಹುಯ್ಯೋ ಮಳೆರಾಯ। ತೆಂಗಿನ ತೋಟಕೆ ನೀರಿಲ್ಲ। ಹುಯ್ಯೋ ಹುಯ್ಯೋ ಮಳೆರಾಯ। ಭಾವಿಗಳಲ್ಲಿ ನೀರಿಲ್ಲ। ಹುಯ್ಯೋ ಹುಯ್ಯೋ ಮಳೆರಾಯ। ಕುಡಿಯೋದಕ್ಕೆ ನೀರಿಲ್ಲ। ಹುಯ್ಯೋ ಹುಯ್ಯೋ ಮಳೆರಾಯ। ದನಕರುವಿಗೆ ಮೇವಿಲ್ಲ। ಕರೆಯೋ ಕರೆಯೋ ಮಳೆರಾಯ।।5।।

ವರ್ಣಮಾಲೆ

ಅಆಇಈ ಕನ್ನಡದ ಅಕ್ಷರ ಮಾಲೆ — ರಾಗ: ಮಧ್ಯಾಮಾವತಿ

ಅಆಇಈ ಕನ್ನಡದ ಅಕ್ಷರ ಮಾಲೆ। ಅಮ್ಮಾ ಎಂಬುದು ಕಂದನ ಕರುಳಿನ ಕರೆಯೋಲೆ। ಅಆ ಆಟ ಊಟ ಓಟ। ಕನ್ನಡ ಒಂದನೇ ಪಾಠ। ಕನ್ನಡ ಭಾಷೆಯ ಕಲಿತವಗೆ ಜೀವನವೇ ರಸದೂಟ।।1।। ಇಇ ಇದ್ದವರೆಲ್ಲ ಇಲ್ಲದವರಿಗೆ ನೀಡಲೇ ಬೇಕು। ಈಈ ಈಶ್ವರನಲ್ಲಿ ಎಂದೂ ನಂಬಿಕೆ ಇಡಬೇಕು।।2।। ಉಉ ಉಪ್ಪುತಿಂದ ಮನೆಗೆ ಎರಡು ಬಗೆಯ ಬೇಡ।

ಊಊ ಊರಿಗೆ ದ್ರೋಹಮಾಡಿ ಬದುಕಲೆಣಿಸಬೇಡ॥3॥ ಋಋೂಎಏಐ ಭಾರತ ಮಾತೆಗೆ ಜೈ॥ ಒಓ ಒಂದೇ ತಾಯಿಯ ಮಕ್ಕಳು ನಾವು ಒಂದು ಗೂಡಬೇಕು। ಓಓ ಓದಲು ಕಲಿತು ದೇಶದ ಸೇವೆಗೆ ನಿಲ್ಲಬೇಕು॥ಔ ಅಂ ಅಃ ಅಃ ಅಃ ಆಹಹಾಹಾ॥

ಅ ಅ ಅರಸ ಅಲ್ಲಿಗೆ ಬಾರೆ ಸರಸ

ಅ ಅ ಅರಸ ಅಲ್ಲಿಗೆ ಬಾರೆ ಸರಸ॥ ಆ ಆ ಆನೆ ಆಗಲೆ ಬಂದಳು ತಾನೆ॥ ಇ ಇ ಇರುವೆ ಇಲ್ಲಿಗೆ ಸಕ್ಕರೆ ತರುವೆ॥ ಈ ಈ ಈಳಿಗೆ ಈತ ತಂದ ಹೋಳಿಗೆ॥ ಉ ಉ ಉಡಿಗೆ ಉದಯರವಿ ಕೆಂಪಗೆ॥ ಊ ಊ ಊಟ। ಊರಿಗೆ ಬಂದರೆ ಕಾಟ॥ ಋ ಋ ಋಷಿ ಋತುಚಕ್ರ ಋಷಿ॥ ಎ ಎ ಎರಡು ಎಲೆ ಬಿಡಿಸಿ ಹರಡು॥ ಏ ಏ ಏಡಿ। ಏನು ಛಂದ ಜೋಡಿ॥ ಐ ಐ ಐಲು ಐರಾವತದ ಕಾಲು॥ ಒ ಒ ಒಂಟೆ ಒಗಟು ಬಿಡಿಸೋ ತಂಟೆ॥ ಓ ಓ ಓಲಗ। ಓಡಿಬಂತು ಸಲಗ॥ ಔ ಔ ಔತಣ ಔತಣ ಔದಾರ್ಯ ತೋರು ತಕ್ಷಣ॥ ಅಂ ಅಂ ಅಂಗಿ। ಅಂಬುಜ ನನ್ನ ತಂಗಿ॥ ಅಃ ಅಃ ಅಃ। ಅಂದನೋಡು ಅಃ॥

ಅದೋ ನೋಡು ಅಲ್ಲಿ ಕಾಡು

ಅದೋ ನೋಡು। ಅಲ್ಲಿ ಕಾಡು ಆನೆಯೊಂದು ಬಂದಿತು॥ ಇದರ ತಲೆಯು ಬಹಳ ಚಂದ। ಈಶಸುತಗೆ ಸಂದಿತು॥ ಉದ್ದ ಸೊಂಡಿಲೆತ್ತಿಕೊಂಡು। ಊರನೆಲ್ಲ ತಿರುಗಿತು॥ಋಕ್ಷ ಕಣ್ಣ ಸುಂದರಾಗ। ಎಲ್ಲ ಜನರ ಸಳೆಯಿತು॥ ಏಕದಂತನಾಗಿ ನಿಂದು। ಐಕ್ಯಮತ್ಯ ಸಾರಿತು॥ ಒಬ್ಬ ಮಾವುತಂಗೆ ಮಣಿದು। ಓಡಿ ನೋಡಿ ಬರುವುದು॥ ಔಕಿಕಾಲ ಸರಿಸಿ ಮುಂದೆ। ಅಂಕುಶಕ್ಕೆ ಮಣಿವುದು। ಅಃ ಎಂಥ ಚಂದ ಇರುವುದು॥

ಅಪ್ಪನು ಮಾಡಿದ ಚೌತಿಯ ರಾಗ:ಕುರಂಜಿ

ಅಪ್ಪನು ಮಾಡಿದ ಚೌತಿಯ ಪ್ರತಿಮೆಗೆ। ಆನೆಯ ಸೊಂಡಿಲ ಮೊಗವಿತ್ತು। ಇಲಿಯನ್ನೇರಿದ ಯಾರಿವನೆನ್ನಲು। ಈಶ್ವರ ಸುತನೆಂದನು ಅಪ್ಪ॥ ಉಮಾಕುಮಾರನ ಚೆಲು ಹಬ್ಬದ ದಿನ। ಊಟಕೆ ಬಂದರು ಅತಿಥಿಗಳು। ಎಲೆಗಳನಿರಿಸಿ ಊಟವ ಬಡಿಸಲು। ಏಕಾಗ್ರತೆಯಲಿ ಜನರುಣಲು। ಐದು ಬಗೆಯ ಸಿಹಿ ಭಕ್ಷಗಳಿದ್ದವು। ಒಗ್ಗರಣೆಯ ಹುಳಿ ಮೊಸರಿತ್ತು। ಓಡುವ ತಿಳಿಪಾಯಸವನು ತಿನ್ನುತ। ಔತಣದೂಟವ ಮಾಡಿದರು॥ ಅಂದದ ರುಚಿಯಾ ಅಡಿಕೆಲೆ ವೀಳ್ಯವ। ಅಃ ಎಂದರು ಜನ ಸವಿಯುತಲಿ॥

ಅಮ್ಮ ನನಗೆ ಅ ಬಂತು

ಅಮ್ಮ ನನಗೆ ಅ ಬಂತು। ಆಟವ ಆಡಿ ಆ ಬಂತು। ಇಲಿಯನು ಕಂಡು ಇ ಬಂತು। ಈಶ್ವರ ಕಂಡು ಈ ಬಂತು। ಉಂಗುರ ಕಂಡು ಉ ಬಂತು। ಊಟವ ಕಂಡು ಊ ಬಂತು। ಋಷಿಯನು ಕಂಡು ಋ ಬಂತು। ಎಲೆಯನು ಕಂಡು ಎ ಬಂತು। ಏಣಿಯ ಕಂಡು ಏ ಬಂತು। ಐದನು ಎಣಿಸಿ ಐ ಬಂತು। ಒಂಟೆಯ ಕಂಡು ಒ ಬಂತು। ಓಡುತ ಓಡುತ ಓ ಬಂತು। ಔಷಧ ಕುಡಿದು ಔ ಬಂತು। ಅಂಗಿಯ ಕಂಡು ಅಂ ಬಂತು॥

ಅಮ್ಮನ ವಾಣಿಯ ಕೇಳಲು ಚಂದ

ಅಮ್ಮನ ವಾಣಿಯ ಕೇಳಲು ಚಂದ। ಆಟವ ಆಡುತ ಕಲಿಯಲು ಚಂದ। ಇಲಿಯ ಸವಾರಿ ಗಣಪಗೆ ಚಂದ। ಈಟಿಯ ನಾಟಿ ಬಗೆಯಲು ಚಂದ। ಉದಯ ರವಿ ನೋಡಲು ಚಂದ। ಊರಿನ ದೇವರ ಉತ್ಸವ ಚಂದ। ಋಣವನು ಮಾಡದ ಬಾಳೇ ಚಂದ। ಋೂಕಾರಕ್ಷರ ಓದಲು ಚಂದ। ಎಮ್ಮೆಯ ಹಾಲು ಕುಡಿಯಲು ಚಂದ। ಏಡಿಯ ಚಲನೆ ನೋಡಲು ಚಂದ। ಐದರ ಮಗ್ಗಿಯು ಹೇಳಲು ಚಂದ। ಒರಟರ ಸಂಗವ ಬಿಡುವುದೆ ಚಂದ। ಓಟದ ಪಂದ್ಯ ನೋಡಲು ಚಂದ।

ಔಷದಿ ತುಂಬಲ ಬಾಟಲಿ ಚಂದ। ಅಂಗಳದಲಿ ಹೂಗಿಡ ಬೆಳೆಸಲು ಚಂದ। ಅಃಉಚ್ಚರಿಸಲು ಕಲಿತರೆ ಚೆಂದ। ಕತ್ತಿಯ ಕಾಳಗ ನೋಡಲು ಚಂದ। ಖಡ್ಗದಿ ಅರಿಗಳ ತರಿಯಲು ಚಂದ। ಗರಿಗೆದರಿದ ನವಿಲಿನ ನಾಟ್ಯವು ಚಂದ। ಘನವಂತರ ಸ್ನೇಹವು ಬದುಕಿಗೆ ಚಂದ। ಙ ಕಾರವ ಮೂಗಲಿ ಹೇಳಲು ಚಂದ। ಚಕ್ಕುಲಿ ಕರಿದು ತಿನ್ನಲು ಚಂದ। ಛತ್ರಿಯ ಹಿಡಿದು ನಡೆಯಲು ಚಂದ। ಜವಳಿಯ ಅಂಗಡಿ ಕಣ್ಣಿಗೆ ಚಂದ। ಝಣಝಣ ಶಬ್ದವು ಕೇಳಲು ಚಂದ। ಞ ಕಾರದ ಬಳಕೆಯ ಕಲಿತರೆ ಚಂದ। ಟಗರಿನ ಕಾಳಗ ನೋಟಕೆ ಚಂದ। ಠಕ್ಕರ ಸಹವಾಸ ಬಿಡುವುದೆ ಚಂದ। ಢಮರುಗ ನಾದವು ಕೇಳಲು ಚಂದ। ಢಣಢಣ ಎನ್ನುವ ಜಾಗಟೆ ಚೆಂದ। ಣ ಕಾರ ಸೇರಿಹ ಗಣಪನು ಚಂದ। ತವರಿನ ಆಸೆ ತಂಗಿಗೆ ಚಂದ। ಥಳಥಳ ಹೊಳೆಯುವ ಚಿನ್ನವು ಚಂದ। ದವನದ ಕಂಪು ಮೂಗಿಗೆ ಚಂದ। ಧವಳಗಿರಿ ಶಿಖರವ ಏರಲು ಚಂದ।। ನಡೆನುಡಿ ಕಲಿಸುವ ಹಿರಿಯರು ಚಂದ। ಪಗಡೆಯ ಆಟ ನೋಡಲು ಚಂದ। ಫಲವನು ಕೋರದ ದುಡಿಮೆಯ ಚಂದ। ಬದಲನು ಹೇಳಿದ ಮಗನಿರೆ ಚಂದ। ಭರಣಿ ಮಳೆಯು ಧರಣಿಗೆ ಚೆಂದ। ಮಕ್ಕಳ ಸಿರಿಮೊಗ ನೋಡಲು ಚಂದ। ಯತಿಗಳ ದರ್ಶನ ಭಾಗ್ಯವೆ ಚಂದ। ರವಿ ಬೆಳಗುವ ಆಗಸ ಚುದ। ಲಕ್ಷ್ಮಿಯು ಜೊತೆಗಿರೆ ಸರಸತಿ ಚಂದ। ವರಕವಿ ಬೇಂದ್ರೆಯು ನಾಡಿಗೆ ಚಂದ। ಶರಾವತಿಯ ಕಣಿವೆಯು ನೋಟಕೆ ಚಂದ। ಷಟ್ಪದಿ ಕಾವ್ಯ ಓದಲು ಚಂದ। ಸಪ್ತಸ್ವರಗಳ ನಾದವು ಚಂದ। ಹವಳದ ಮಣಿಸರ ಧರಿಸಲು ಚಂದ। ಳ ಕಾರ ಸೇರಿಹ ಮೇಳವು ಚಂದ।।

ಅಯೋಧ್ಯೆ ಅರಸನು (ಅಕ್ಷರ ರಾಮಾಯಣ)

ಅ- ಅಯೋಧ್ಯೆ ಅರಸನು ದಶರಥನೆಂಬುವನು। ಆ- ಆತ್ಮಜರಾಗಲಿಯೆಂಬುವ ಆಸೆಯೊಳು। ಇ- ಇಷ್ಟಿಯ ಮಾಡಿದನುತ್ತಮರೀತಿಯೊಳು। ಈ- ಈಶ್ವರ ಕೃಪೆಯಿಂದ ದೊರೆಕಿತು ಪಾಯಸವು। ಉ- ಉದಾತ್ತನಿತ್ತನು ಮೂವರು ಸತಿಯರಿಗೆ। ಊ- ಊಟವ ಮಾಡಲು ಪಡೆದರು ನಾಲ್ವರನು। ಋ- ಋಷಿವರ ವಿಶ್ವಾಮಿತ್ರರು ಬೇಡಿದರು। ೠ- ೠಕ್ಷಜನರನು ಶಿಕ್ಷಿಸಲೆಂದು। ಎ- ಎಸುಗೆಯೊಳಂಜದೆ ರಾಮನ ಕಳುಹೆಂದು। ಏ- ಏಳಿಗೆ ಹೊಂದಲು ಹೊರಟನು ಲಕ್ಷ್ಮಣನು। ಐ- ಐತಂದಾಶ್ರಮಕೆ ಇಷ್ಟಿಯ ಕಾಪಾಡಿ। ಒ- ಒಮ್ಮೆಲೆ ಜನಕನ ಪುರವನು ಸೇರಿದನು। ಓ- ಓಲಗದೊಳು ರಾಮನು ಶಿವಧನುಸನುಮುರಿದು। ಔ- ಔತ್ಸುಕ್ಯವನು ಸಭೆಯೊಳು ಹೆಚ್ಚಿಸಿದ। ಅಂ- ಅಂಬಾ ಸನಿಹದೊಲಾದುವು ಮದುವೆಗಳು। ಅಃ- ಅಃ ಶ್ರೀರಾಮನ ವಿವಾಹದ ವೈಭವವೂ। ಕ- ಕಟು ವರಗಳ ಪೂರೈಸಲು ಕೈಕೇಯಿಯ। ಖ- ಖತಿಗೊಳ್ಳದೆ ಲಕ್ಷ್ಮಣ ಸೀತೆಯರೊಡನೆ। ಗ- ಗಮನ ಮಾಡಿದಾ ರಾಮನು ಕಾನನಕೆ। ಘ- ಘಟಸಂಭವನಿತ್ತನು ಹರಿಚಾಪವನು। ಙ- ಙ ಙ ಎನ್ನುವ ಪ್ರಾಣಿಗಳೊಡನಾಡಿದನು। ಚ- ಚಳಿಗಾಳಿಗಳೆಲ್ಲವ ಸಹಿಸುತಲಿ। ಛ- ಛವಿಗುಂದದೆ ಕಾಲವ ಕಳೆಯುತಲಿ। ಜ- ಜಯರಾಘವ ಎನ್ನುತ ಭರತನು ಬಂದು। ಝ- ಝುಗಝುಗಿಸುವ ಪಾದಕೆಗಳ ತೊಡಿಸಿದನು। ಞ- ಜ್ಞಾನಿವರೇಣ್ಯನು ಭರತನನಪ್ಪಿದನು। ಟ- ಟವುಳಿಯನಾಡೆನು ರಾಜ್ಯವನೀಯುವೆನು। ಠ- ಠಕ್ಕೆಯ ಹಾರಿಸುವೆನು, ಎನೆ ರಾಮನು ಖಂಡಿಸಿದ। ಡ- ಡಗೆಯಳಿಯಲು ಪಾದುಕೆಗಳ ಕೈಕೊಂಡು। ಢ- ಢಕ್ಕೆಯ ಬಾರಿಸುತ್ತೈದಿದನಾ ಭರತ। ಣ- ಣಣಣಣ ಶಬ್ದವು ಎಲ್ಲೆಡೆ ಕೇಳಿಸಿತು। ತ- ತರುಣಿಯ ಮಾತರನು ಲೆಕ್ಕಿಸಿ ರಾಘವನು। ಥ- ಥಳಥಳಿಸುವ ಜಿಂಕೆಯ ಹಿಂದೋಡಿದನು। ದ- ದನಿಯ ಕೇಳುತೆ ಲಕ್ಷ್ಮಣ ತೆರಳಿದನು। ಧ- ಧನ್ವಿಗಳಾಶ್ರಮವನು ಸೇರುವ ಮೊದಲೆ। ನ- ನಲ್ಲೆಯನಪಹರಿಸಿದ್ದನು ರಾವಣನು। ಪ- ಪತ್ನಿಯನಪಹರಿಸಿದನ್ನೈ ರಾವಣನು। ಫ- ಫಲ ಹೊಂದಲು ಸುಗ್ರೀವನ ಮೊರೆ ಹೋಗೆ। ಬ- ಬಲಿಷ್ಠನನು ಕಳೆದು ಜಟಾಯುವಿಗೆ। ಭ- ಭವಬಾಧೆಯನು ತಪ್ಪಿಸಿದನು ರಾಘವನು। ಮ- ಮರ್ಕಟವೀರನ ಮೈತ್ರಿಯ ಬೆಳಸಿದನು। ಯ- ಯಮಪುರಿಗಟ್ಟಿದ ರಾಮನು ವಾಲಿಯನು। ರ- ರಮಣಿಯ ವಾರ್ತೆಯ ತಂದನು ಮಾರುತಿಯು। ಲ- ಲವಣಾಂಬುಧಿಗೈತಂದರು ವಾನರರು। ವ-ವತ್ಸಲನಾಶ್ರಯವಿತ್ತನು ವಿಭೀಷಣಗೆ। ಶ- ಶರಧಿಯ ದಾಟತೆ ಯುದ್ಧವ ನಡೆಸಿದರು। ಷ- ಷಡ್ಗುಣಸಹಿತನು ರಾವಣನನು ಕೊಂದು। ಸ- ಸತಿಯೊಡಗೂಡಿ ಅಯೋಧ್ಯೆಗೆ ತೆರಳಿದನು। ಹ- ಹನುಮನು ಭರತಗೆ ವಿಷಯವ ತಿಳುಹಿದನು। ಳ(ಲ)- ಲಕ್ಷ್ಮೀವಲ್ಲಭನಿಳೆಯನು ಆಳಿದನು। ಕ್ಷ- ಕ್ಷಮಾಭರಿತನೆಲ್ಲರ ಕಾಪಾಡಿದನು। ಶ್ರೀರಾಮನು ಎಲ್ಲರ ಕಾಪಾಡಿದನು।

"ಅಕ್ಷರರಾಮಾಯಣಂ ಸಂಪೂರ್ಣಂ"

ಅರಮನೆಯಲ್ಲಿ ಅರಸನಿದ್ದ

ಅರಮನೆಯಲ್ಲಿ ಅರಸನಿದ್ದ। ಆತನ ಬಳಿ ಆನೆಯಿತ್ತು। ಇಲಿಯ ಬಳಿ ಇರುವೆ ಬಂತು। ಈಚಲದಡಿ ಈಶ ಕುಳಿತ। ಉದರದಲ್ಲಿ ಉಪಟಳ। ಊಟಕ್ಕಾಗಿ ಊರೂರು ಅಲೆದ। ಋಷಿಗಳ ಋಣಹರಿಸಿದರು। ಎದುರಿಗೆ ಎತ್ತು ಬಂತು। ಏತ ಏನಾಯಿತು? ಐದು ಐವತ್ತು ಎಷ್ಟಾಯಿತು। ಒರಟುತನ ಒಳ್ಳೆಯದಲ್ಲ। ಓದುವಾಗಲೇ ಓಟಕಿತ್ತ। ಔಚಿತ್ಯವರಿತು ಔಷಧಿ ಕೊಟ್ಟ। ಅಂಗಳದಲ್ಲಿ ಅಂಜಿದ। ಆಃ ಏನ್‌ಸವಿ ಅಃ ಅಃ ಅಃ।

ಅ ಆ ಕಲಿಸಲು ಅಮ್ಮನೆ ಬೇಕು

ಅ ಆ ಕಲಿಸಲು ಅಮ್ಮನೆ ಬೇಕು। ಆನೆಯ ಕಥೆ ತಾ ಕೇಳಲೆ ಬೇಕು।। ಇಈ ಎನ್ನಲು ಇಲಿರಾಯಣ್ಣ। ಈಶನು ಬರುವನೆ ನೀ ಹೇಳಣ್ಣ।। ಉಊ ಎನ್ನುತ ಉಣಿಸುತಲಿರಲು। ಊಟದ ಔತಣ ನಮಗಾಗಿರಲು।। ಋವನು ನುಡಿಯಲು ಋಷಿ ತಾ ಬಂದ। ಋಣ ಬಾಧೆಯು ಇರಬಾರದು ಎಂದ। ಎಏ ಹೇಳಿತು ಎಮ್ಮೆಯ ಜೋಡಿ। ಏರಿದರೆಲ್ಲರು ಎತ್ತಿನ ಗಾಡಿ। ಐ ಎಂದ್ಹೇಳುತ ಐವತ್ತು ಮಂದಿ। ತೂರಿದರೆಲ್ಲ ಸಂದೀ ಗೊಂದಿ।। ಒಓ ಊದುತ ಒಲೆಯನು ಹಚ್ಚಿ। ಓಟವ ಕಿತ್ತರು ಕಿರಿಜನ ಬೆಚ್ಚಿ।। ಔ ಎನ್ನಲು ತಾ ಔಷಧಿ ಕುಡಿದ। ಅಂಗಡಿ ಮುಂದೆ ಬಿಂಕದಿ ನಡೆದು। ಅಃಆಃ ಹಾ.... ಹಾಡನು ಹಾಡಿ। ಚಿಣ್ಣರು ಮೆರೆದರು ಒಟ್ಟಿಗೆ ಕೂಡಿ।।

ಅಲ್ಲೊಂದು ಅರಮನೆ

ಅಲ್ಲೊಂದು ಅರಮನೆ ಅಹಹಾ। ಪುಟ್ಟ ಅರಗಿಳಿ ಅಹಹಾ। ಅರಗಿಳಿ ಕೂಗಿತು ಅರಸ ಅರಸ। ಅರಸನು ಕೂಗಿದ ಬಾಬಾ ಅರಗಿಳಿ।। ಆನೆ ಬಂತೊಂದ್ ಆನೆ ಯಾವೂರಾನೆ। ಸಿದ್ಧಾಪುರದಾನೆ ಇಲ್ಲಿಗ್ಯಾಕೆ ಬಂತು। ಹಾದಿ ತಪ್ಪಿ ಬಂತು ಬೀದಿ ತಪ್ಪಿ ಬಂತು।। ಹುಲ್ಲನ್ನೆಲ್ಲಾ ತಿಂತು ಬಾಲ ಅಲ್ಲಾಡ್‌ಸ್ಕೊಂಡ್ಹೋಯ್ತು।। ಇರುವೆ ಇರುವೆ ಎಲ್ಲಿರುವೆ? ಸುಮ್ಮನೆ ಏಕೆ ಕುಳಿತಿರುವೆ? ಇಲ್ಲಿದೆ ಸಕ್ಕರೆ ಸವಿಬೆಲ್ಲ। ಇಲ್ಲಿಗೆ ಬಾಬಾ ಬಲು ಬೇಗ।। ಈಶ್ವರನಿವನು ಮುಕ್ಕಣ್ಣ। ಈಗಲೆ ತೆರೆಯೋ ಹಣೆಗಣ್ಣ। ಈತನ ನೋಡಿರಿ ಮೈಬಣ್ಣ। ಈಶನ ಮಗನಿವ ಗಣಪಣ್ಣ।। ಉಂಗುರ ಬೆರಳಿಗೆ ಬಲುಚೆನ್ನ। ಉರಗದ ಹೊಳಪು ನೋಡಣ್ಣ। ಉಸಿರೇ ಆಧಾರ ಜೀವಕ್ಕೆ ಹಸಿರಿರಬೇಕು ಉಸಿರಾಟಕ್ಕೆ।। ಊರು ಊರು ಯಾವೂರು? ಊಟಕೆ ಸಾರು ಜೊತೆಯಲಿ ಖೀರು। ಊದು ಊದು ಪೀಪಿ ಊದು। ಊತದಿಂದ ಊನ ಬಂತು।। ಎತ್ತಿನ ಕೊರಳಲಿ ಘಣಘಣ ಗಂಟೆ। ಎಲೆಗಳ ಸದ್ದಿನ ಸರಪರಸಂತೆ। ಎಮ್ಮೆಗೆ ಬೇಕು ಹುಲ್ಲಿನ ಕಂತೆ। ಎಲ್ಲಿದೆ ಇವಕೆ ಲೋಕದ ಚಿಂತೆ।। ಏರಿಯ ಏರಿ ರೈತನು ನೋಡಿದ ಹೊಲದೊಳು ನೀರಿಲ್ಲ। ಏತವ ಬಿಟ್ಟು ಎತ್ತಿದ ಭರಭರ ಹರಿಯಿತು ನೀರೆಲ್ಲ।। ಐದು ಬೆರಳಿದೆ ಕೈಯೊಳಗೆ। ಐವರು ಇರುವರು ಮನೆಯೊಳಗೆ। ಐರಾವತ ಬಿಳಿ ಬಣ್ಣ। ಐಕ್ಯತೆ ನಮ್ಮ ಬದುಕಣ್ಣ।। ಒಂಟೆಕೊಂಬು ಒನಕೆ ಚಿಗುರಿತು। ಒರಳಿಗೆ ದಣಿವು ಏಕಿಲ್ಲ। ಒಂಟಿ ಗೂಬೆಗೆ ಒಬ್ಬರು ಗೆಳೆಯರು ಬೇಕಿಲ್ಲ।। ಓಲಗವೆಂದರೆ ಪುಟ್ಟನಿಗಾಸೆ। ಓದನು ಬಿಟ್ಟ ಓಲಗ ಕದ್ದ। ಓಲಗ ಸ್ವರವನು ಊದುತಲಿದ್ದ ಪ್ವೀ ಪ್ವೀ ಪ್ವೀ।। ಔತಣದೂಟ ಉಂಡಾಯ್ತು। ಹೊಟ್ಟೆಯ ನೋವು ಜೋರಾಯ್ತು। ಔದಳದೆಣ್ಣೆ ಕಹಿಕಹಿ ಬಾಯಿಗೆ। ನುಂಗು ನುಂಗು ಔಷಧ ಗುಳಿಗೆ।। ಅಂಗಿ ಅಂಗಿ ಅಂದದ ಅಂಗಿ। ಕೆಂಪು ಬಣ್ಣದ ಅಂಚಿನ ಅಂಗಿ। ಅಂಗೈಲಿರುವ ಚಂದದ ಅಂಗಿ।। ಅಂಗೈ ಉದ್ದ ಇರುವ ಅಂಗಿ।। ಅರಮನೆ ಅರಗಿಳಿ ಹಾರಿತ್ತು ರಾಣಿಯ ದುಃಖವು ಜೋರಾಯ್ತು। ಅಂತಃಕರಣವು ಕಲಕಿತ್ತು। ಅಂತಃಪುರದಲಿ ಆಃ ಎದ್ದಿತು।।

ಅಂದವಾದ ಹಕ್ಕಿ ತಾ (ಕಾಗುಣಿತ)

ಅಂದವಾದ ಹಕ್ಕಿ ತಾ ಎಂದುಕೊಂಡು ಕಾಗೆ ತಾ। ಒಂದು ಕೊಂಬೆ ಮೇಲೆ ಕಾಗೆ ಕಕಕಾ....।। ತುಂಟಕೋತಿ ನೋಡಿ

ತಾ। ತಂಟೆ ಮಾಡೆ ನಕ್ಕಿತು। ಕುಂಟಿಕೊಂಡು ಅಣಕಿಸುತ್ತ।ಕಿಕಿಕೀ......।। ತೋಳಮರವು ಬಿದ್ದಿತು। ರೈಲು ಬಂಡಿ ಓಡಿತು। ವೇಳೆಯಾಯ್ತು ಎಂದು ಕೂಗೆ ಕು ಕು ಕೂ....।। ದೊಡ್ಡದೊಂದು ಕಪ್ಪೆಯು। ಹೆಡ್ಡತನದ ಹಾವಿನ। ದೊಡ್ಡ ಹೆಡೆಯ ಕೆಳಗೆ ಕೂಗೆ ಕೃಕೃ ಕೃ...।। ಹುಡುಗರೆಲ್ಲ ಕೂಡುತ। ಗುಡುಗಿನಾಟವಾಡುತ। ನಡುವೆ ನಕ್ಕು ನಲಿದು ಕೂಗೆ ಕೆಕೇ ಕೇ....।। ಬಾಗಿಲೊಳಗೆ ಕೈಯನು। ಸೇರಿಸಿರಲು ಹುಡುಗನು। ಹಾಗೆಸೇರಿದಾಗ ಕೂಗೆ ಕೊಕೊ ಕೋ...।। ಸಣ್ಣ ಮರಿಗೆ ಹಣ್ಣನು। ಚಿಟ್ಟೆಗಳಿಗೆ ಗುಟುಕನು। ಹೆಣ್ಣುಗಿಳಿಯು ಕೊಡಲು ಕೂಗೆ ಕೌಕೌಕೌ.।। ರಂಗನನ್ನು ಕರೆಯಲು ಇಂಗ್ಲಿಷ್ ಮಾತಿನೊಳ್। ಹೆಂಗೆ ಕರೆಯುತಾರೆ ನೋಡು ಕಂ ಕಂ ಕಂ।। ಕಡ್ಡಿಯೊಂದು ಗಂಟಲೊಳ್। ಅಡ್ಡಿಯಾಗೆ ಹುಡುಗನು। ಗುಡ್ಡೆಗಣ್ಣು ಮಾಡಿ ಕೂಗೆ ಕಃಕಃಕಃ।।

ಕನಸಿನೊಳಗೊಂದು (ಕಾಗುಣಿತ) **ರಾಗ:ಸಾವೇರಿ**

ಕನಸಿನೊಳಗೊಂದು ಕಾಡನ್ನು ಕಂಡೆ। ಕಿಚ ಕಿಚವೆನ್ನುವ ಕೀಟವನು ಕಂಡೆ। ಕುಹೂ ಕುಹೂ ಕುಹು ಕೂಗುವ ಕೋಗಿಲೆ। ಕೆಸರಿನ ಹೊಂಡದಲಿ ಕೇಳಿಯಾಡುವಾನೆ। ಕೈಸೆರೆಗೆ ಸಿಗದೆ ಕೊಂಬೆಯಲಿ ಹಾರುತಿದೆ ಕೋತಿ ಮರಿಗಳ ಗುಂಪು। ಕೌಕೌ ಕಾಗೆಗಳ ಸದ್ದೋಸದ್ದು। ಕಂಗಳನು ತೆರೆದಾಗ ಎಲ್ಲವೂ ಮಾಯ।।

ಕಾವ್ಯದಲ್ಲಿ ಕಾಗುಣಿತ **ರಾಗ:ರೇವತಿ**

(ಲಕ್ಷ್ಮೀಶನ ಜೈಮಿನಿ ಭಾರತದ 5ನೇ ಸಂಧಿ 8ನೇ ಪದ್ಯ ಮತ್ತು 13ನೇ ಸಂಧಿ,27ನೇ ಪದ್ಯ)

ಕಮಲದಳ ನಯನ। ಕಾಳೀಯ ಮಥನ। ಕಿಸಲಯೋಪಮ ಚರಣ। ಕೀಶಪತಿ ಸೇವ್ಯ। ಕುಜಹರ। ಕೂರ್ಮಸಮ ಸತ್ಕಪೋಲ। ಕೇಯೂರಧರ। ಕೈವರ ಶ್ಯಾಮ। ಕೋಕನದ ಗೃಹೆಯರಮಣ। ಕೌಸ್ತುಭಶೋಭ। ಕಂಬುಚಕ್ರಗದಾಬ್ಜ। ವಿಮಲಕರ ಕಸ್ತೂರಿಕಾತಿಲಕ ಕಾವುದು =ಕಂ।। ಜಯ ಚತುರ್ಮುಖಜನಕ ಜಯ ಚಾರುಚರಿತ್ರ ಜಯ ಚಿದಾನಂದ ಜಯ ಚೀರಾಂಬರಜ್ಞೇಯ ಜಯಚ್ಯುತಿದೂರ ಜಯಚೂಡಬರ್ಹಶೋಭಿತ ಜಯ-ಚೇತನ-ಸ್ವರೂಪ ಜಯಚೈದ್ಯ ಮಥನ ಜಯಚೋದಿತಾಖಿಳಲೋಕ ಜಯಚೌರ್ಯ ಕೃತಲೀಲ ಜಯ ಚಂಡಶತಕಿರಣ ಜಯ ಚಕ್ರಧರ।।

ಕೆಂಪು ಕೋಟೆ ದಿಲ್ಲಿಯಲ್ಲಿ (ವ್ಯಂಜನ)

ಕೆಂಪು ಕೋಟೆ ದಿಲ್ಲಿಯಲ್ಲಿ ಕಖಗಘಙ।। ಚಂದಾಮಾಮ ಬಾನಿನಲ್ಲಿ ಚಛಜಝಞ।। ಟಗರಿಗೆ ಎರಡುಕೊಂಬು ಉಂಟು ಟಠಡಢಣ।। ತಾತನ ಗಂಟು ದಪ್ಪವಂತೆ ತಥದಧನ।। ಪಾಪು ಮೊಗವು ಸುಂದರವಂತೆ ಪಫಬಭಮ।। ಯಾರಿಗುಂಟು ಯಾರಿಗಿಲ್ಲ ಯರಲವಶಷಸಹಳ।।1।।

ಗಣಿತ (ಎಣಿಕೆ, ಕುಡುವುದು, ಕಳೆಯುವುದು)

ಎರಡು2 ನಾಕು

ಎರಡು ಎರಡು ನಾಕು ಹಾಕು ಮೈಸೂರ್ ಪಾಕ್। ನಾಕು ನಾಕು ಎಂಟು ಅಂಟು ಶುಂಠಿ ಗಂಟು।। ಮೂರು ಮೂರು ಆರು ಕೂರೋದಂದ್ರೆ ಬೋರು। ಆರು ಆರು ಹನ್ನೆರಡು ಲಾಡುಬೇಕು ಇನ್ನೆರಡು।। ಐದು ಐದು ಹತ್ತು ಬಾಳೆಹಣ್ಣು ಎತ್ತು। ಹತ್ತು ಹತ್ತು ಇಪ್ಪತ್ತು ರೊಟ್ಟಿ ತುಪ್ಪಕ್ ಬಿತ್ತು।।

ಒಂಟೆಗೆ ಬಾಲ ಒಂದೈತಿ

ಒಂಟೆಗೆ ಬಾಲ ಒಂದೈತಿ ನೋಡ। ಎತ್ತಿಗೆ ಕೋಡು ಎರಡೈತಿ ನೋಡ। ಶಿವನಿಗೆ ಕಣ್ಣು ಮೂರೈತಿ ನೋಡಾ। ಮಂಚಕೆ ಕಾಲು ನಾಕೈತಿ ನೋಡಾ। ಪಂಚೇಂದ್ರಿಯಗಳು ಐದೈತಿ ನೋಡಾ।।1।। ವರ್ಷಕೆ ಆರು ಋತುಗಳು ನೋಡಾ। ವಾರಕ್ಕೆ ಏಳು ದಿನಗಳು ನೋಡಾ। ದಿಕ್ಕುಗಳು ಎಂಟು ಸುತ್ತ ಮುತ್ತ ನೋಡಾ। ಗ್ರಹಗಳು ಒಂಬತ್ತು ಆಕಾಶ ನೋಡಾ। ಕೈಯಾ

ಬೆರಳು ಐದೈದು ನೋಡಾ। ಎಣಿಸಿ ನೋಡಲು ಹತ್ತೈತ್ತಿ ನೋಡಾ।।

ಒಂದು ಎರಡು ಬಾಳಿಲೆ ಹರಡು

ಒಂದು ಎರಡು ಬಾಳಿಲೆ ಹರಡು। ಮೂರು ನಾಲ್ಕು ಅನ್ನ ಹಾಕು। ಐದು ಆರು ಬೇಳೆಯ ಸಾರು। ಏಳು ಎಂಟು ಪಲ್ಯಕ್ಕೆ ದಂಟು। ಒಂಭತ್ತು ಹತ್ತು ಎಲೆಮುದುರೆತ್ತು।। ಒಂದರಿಂದ ಹತ್ತು ಹೀಗಿತ್ತು। ಊಟದ ಆಟವು ಮುಗಿದಿತ್ತು।।

ಒಂದು ಎರಡು ಬೇಸನ್ ಲಾಡು

ಒಂದು ಎರಡು ಬೇಸನ್ ಲಾಡು। ಮೂರು ನಾಲ್ಕು ಮೈಸೂರು ಪಾಕು। ಐದು ಆರು ಬಾದಾಮಿ ಖೀರು। ಏಳು ಎಂಟು ಪೆಪ್ಪರಮೆಂಟು। ಒಂಭತ್ತು ಹತ್ತು ಗರಂಗರಂ ಬಿಸ್ಕತ್ತು।। ಒಂದರಿಂದ ಹತ್ತು ಹೀಗಿತ್ತು ತಿಂಡಿಯ ಆಟ ಮುಗಿದಿತ್ತು।।

ಒಂದು ಎರಡು ತಿಂಡಿ ತಿನ್ನೋಕೆ ಹೊರಡು

ಒಂದು ಎರಡು ತಿಂಡಿ ತಿನ್ನೋಕೆ ಹೊರಡು। ಮೂರುನಾಲ್ಕು ನಾಕೇ ದೋಸೆ ಸಾಕು। ಐದು ಆರು ಬಿಸಿ ಕಾಫಿ ಹೀರು। ಏಳು ಎಂಟು ಶಾಲೆಗೆ ರಜ ಉಂಟು। ಒಂಬತ್ತು ಹತ್ತು ಬಂತು ಆಟದ ಹೊತ್ತು। ಚೆಂಡು ದಾಂಡು ಆಮೇಲೆ ಬುಗುರಿಗೆ ದಾರ ಸುತ್ತು।।

ಒಂದು ಕಣ್ಣು ಅಡಿಕೆಗೆ

ಒಂದು ಕಣ್ಣು ಅಡಿಕೆಗೆ। ಎರಡು ಕಣ್ಣು ಜನರಿಗೆ। ಮೂರು ಕಣ್ಣು ತೆಂಗಿನಕಾಯಿಗೆ। ನಾಲ್ಕು ಕಾಲು ನಾಯಿಗೆ। ಐದು ಬೆರಳು ಕೈಯಿಗೆ। ಆರು ಕಾಲು ದುಂಬಿಗೆ। ಏಳು ದಿನ ವಾರಕ್ಕೆ। ಎಂಟು ಕಾಲು ಜೇಡಕೆ। ಒಂಭತ್ತು ಆದ ಮೇಲೆ। ಹತ್ತು ಎನ್ನಿ ಮೆಲ್ಲಗೆ।।

ಒಂದು ಎಲ್ಲಕ್ಕಿಂತ ಮೊದಲು

ಒಂದು ಎಲ್ಲಕ್ಕಿಂತ ಮೊದಲು ಬರುತ್ತೆ ಅಲ್ವೇನೋ। ಆಮೇಲೆ ಎರಡು ಮೂರು ನಾಲ್ಕು, ಐದು ಸರಿಯೇನೋ?। ಹೇಳ್ಲ ಈಗ ಒಟ್ಟಾಗ್ ಮತ್ತೆ ಕಲಿತದ್ದೆಲ್ಲಾನೂ?। ಒಂದು ಎರಡು ಮೂರು ನಾಲ್ಕು ಐದು - ಮುಂದೇನು?। ಐದು ಆದ್ಮೇಲೆ ಹೇಳ್ಬೇಕಾದ್ದು ಆರು ಏಳು। ಎಂಟು ಒಂಬತ್ ಹತ್ತು ಈಗ ಎಲ್ಲಾ ಕೇಳು। ಒಂದು ಎರಡು ಮೂರು ನಾಲ್ಕು ಐದು ಆರು। ಏಳು ಎಂಟು ಒಂಬತ್ತು ಹತ್ತು ಮಗ್ಗಿ ಬೋರು।

ಒಂದು ಎರಡು ಶಾಲೆಗೆ ಹೊರಡು

ಒಂದು ಎರಡು ಶಾಲೆಗೆ ಹೊರಡು। ಮೂರು ನಾಲ್ಕು ಆಟ ಸಾಕು। ಐದು ಆರು ಜೊತೆಯಲಿ ಸೇರು। ಏಳು ಎಂಟು ಅಕ್ಷರ ನಂಟು। ಒಂಭತ್ತು ಹತ್ತು ನನಗದು ಗೊತ್ತು। ಒಂದರಿಂದ ಹತ್ತು ಶಾಲೆಯ ಮೆಟ್ಟಿಲು ಹತ್ತು।।

ಒಂದೆಂಬೋದು ಒಬ್ಬನೆ ಸೂರ್ಯ

ಒಂದೆಂಬೋದು ಒಬ್ಬನೆ ಸೂರ್ಯ। ಎರಡೆಂಬೋದು ಭೂಮಿ ಆಕಾಶ। ಮೂರೆಂಬೋದು ನೀನಾನವನು। ನಾಕೆಂಬೋದು ಮೃಗಗಳ ಕಾಲು। ಐದೆಂಬೋದು ಜನಗಳ ಬೆರಳು। ಆರೆಂಬೋದು ಷಣ್ಮುಖನಾರು ಮುಖ। ಏಳೆಂಬೋದು ಸಪ್ತಸ್ವರ। ಎಂಟೆಂಬೋದು ದಿಕ್ಕುಗಳು। ಒಂಬತ್ತೆಂಬೋದು ನವಗ್ರಹ ಮಾಲೆ। ಹತ್ತೆಂಬೋದು ಊಟದ ಹೊತ್ತು।।

ಒಂದು ಕಾಗೆ ಬಂದಿತು

ಒಂದು ಕಾಗೆ ಬಂದಿತು। ಎರಡು ಕಾಳು ತಂದಿತು। ಮೂರು ಮೊಟ್ಟೆ ಇಟ್ಟಿತು। ನಾಲ್ಕು ಸಲ ಕೂಗಿತು। ಐದು ಸಲ ಹಾರಿತು। ಐದು ಸಲ ಹಾರಿತು॥

ಒಂದು ಕಾಡಿನ ಮಧ್ಯದೊಳಗೆ (ಕಥನ-ಕವನ)

ಒಂದು ಕಾಡಿನ ಮಧ್ಯದೊಳಗೆ ಎರಡು ಮರಗಳ ನಡುವೆ ಮಲಗಿ। ಮೂರು ಕರಡಿಗಳಾಡುತ್ತಿದ್ದವು। ನಾಲ್ಕು ಮರಿಗಳ ಸೇರಿಸಿ। ಐದು ಜನರು ಬೇಟೆಗಾರರು। ಆರು ಬಲೆಗಳನೆಳೆದು ತಂದು। ಏಳುಕರಡಿಯ ಹಿಡಿದು ನೋಡದೆ। ಎಂಟು ಹಿಡಿದೆವು ಎಂದರು। ಒಂಬತ್ತೆಂದನು ಅವರಲ್ಲೊಬ್ಬ। ಹತ್ತು ಎಂದನು ಬೇರೆಯವನು। ಎಣಿಸಿ ನೋಡಿದರೇಳೆ ಕರಡಿ ಇಲ್ಲಿಗೀಕತೆ ಮುಗಿಯಿತು॥

ಒಂದು ಒಂದು ಎರಡು (ಕೂಡುವುದು)

ಒಂದು ಒಂದು ಎರಡು। ಹಣ್ಣು ಎರಡು। ಎರಡು ಎರಡು ನಾಲ್ಕು। ಕಾಯಿ ನಾಲ್ಕು। ಮೂರು ಮೂರು ಆರು। ಮಿಡಿ ಆರು। ನಾಲ್ಕು ನಾಲ್ಕು ಎಂಟು। ಹೂವು ಎಂಟು। ಐದು ಐದು ಹತ್ತು। ಎಲೆ ಹತ್ತು। ಇಷ್ಟು ಹೇಳೋದ್ರೊಳಗೆ ಬಲು ಸುಸ್ತು॥

ಒಂದು ಒಂದು ಎರಡು ಆದ್ರೆ

ಒಂದು ಒಂದು ಎರಡು ಆದ್ರೆ। ಎರಡು ಎರಡು? - ನಾಲ್ಕು। ನಾಲ್ಕು ಚಕ್ಕುಲಿ ಬೇಕು!। ಎರಡು ಎರಡು ನಾಲ್ಕು ಸರಿ। ಮೂರು ಮೂರು? - ಆರು। ಆರು ಲೊಟ ಖೀರು! ಮೂರು ಮೂರು ಆರು ಹೌದು। ನಾಲ್ಕು ನಾಲ್ಕು? - ಎಂಟು। ಬಿಚ್ಚು ತಿಂಡಿ ಗಂಟು!। ನಾಲ್ಕು ನಾಲ್ಕು ಎಂಟು, ನಿಜ। ಐದು ಐದು? - ಹತ್ತು। ಉಂಡೆ ಜೇಬಿಗೆ ಬಿತ್ತು! ಐದು ಐದು ಹತ್ತು ಸರಿ। ಆರು ಆರು? - ತಾಳಿ! ತಿಂಡಿ ಬಂತು ಏಳಿ।

ನನ್ನಲ್ಲೊಂದು ಗೋಲಿ ಇದೆ

ನನ್ನಲ್ಲೊಂದು ಗೋಲಿ ಇದೆ। ನಾನು ಆಟ ಆಡುವೆ॥ ಅಮ್ಮ ಒಂದು ಕೊಟ್ಟಳು 2 ಗೋಲಿಗಳಾದವು॥ ಎರಡು ಗೋಲಿ ನನ್ನಲ್ಲಿವೆ। ನಾನು ಆಟ ಆಡುವೆ॥ ಅಪ್ಪ ಒಂದು ಕೊಟ್ಟನು 3 ಗೋಲಿಗಳಾದವು॥ ನನ್ನಲ್ಮೂರು ಗೋಲಿ ಇವೆ। ನಾನು ಆಟ ಆಡುವೆ॥ ಅಪ್ಪ ಒಂದು ಕೊಟ್ಟನು 4 ಗೋಲಿಗಳಾದವು॥ ನನ್ನಲ್ ನಾಲ್ಕು ಗೋಲಿ ಇವೆ। ನಾನು ಆಟ ಆಡುವೆ॥ ಅಜ್ಜಿ ಒಂದು ಕೊಟ್ಟಳು 5 ಗೋಲಿಗಳಾದವು॥ ನನ್ನಲ್ ಐದು ಗೋಲಿ ಇವೆ। ನಾನು ಆಟ ಆಡುವೆ॥ ಅಜ್ಜ ಒಂದು ಕೊಟ್ಟನು 6 ಗೋಲಿಗಳಾದವು॥ ನನ್ನಲ್ ಆರು ಗೋಲಿ ಇವೆ। ನಾನು ಆಟ ಆಡುವೆ॥ ಅತ್ತೆ ಒಂದು ಕೊಟ್ಟಳು 7 ಗೋಲಿಗಳಾದವು॥ ನನ್ನಲ್ ಏಳು ಗೋಲಿ ಇವೆ। ನಾನು ಆಟ ಆಡುವೆ। ಮಾವ ಒಂದು ಕೊಟ್ಟನು। 8 ಗೋಲಿ ಆದವು॥ ನನ್ನಲ್ ಎಂಟು ಗೋಲಿ ಇವೆ। ನಾನು ಆಟ ಆಡುವೆ। ಅಣ್ಣ ಒಂದು ಕೊಟ್ಟನು 9 ಗೋಲಿ ಆದವು। ನಾನು ಆಟ ಆಡುವೆ॥ ನನ್ನಲ್ ಒಂಬತ್ತು ಗೋಲಿ ಆದವು। ನಾನು ಆಟ ಆಡುವೆ। ತಮ್ಮ ಒಂದು ಕೊಟ್ಟನು। 10 ಗೋಲಿ ಆದವು। ಹತ್ತು ಗೋಲಿ ಸೇರಿಸಿ ನಾನು ಆಟ ಮುಗಿಸುವೆ॥

ಹತ್ತು ಒಂದು ಹನ್ನೊಂದು

ಹತ್ತು ಒಂದು ಹನ್ನೊಂದು ಮೆತ್ತನೆ ಕಡುಬು ಇನ್ನೊಂದು। ಹತ್ತೂ ಎರಡು ಹನ್ನೆರಡು ಉತ್ತಮ ತುಪ್ಪಾ ಮೇಲ್ಗಡೆರಡು। ಹತ್ತೂ ಮೂರು ಹದಿಮೂರು ನೆತ್ತಿಗೆ ಹತ್ತಲಿ ಸುರಿ ಸಾರು। ಹತ್ತೂ ನಾಲ್ಕು ಹದಿನಾಲ್ಕು। ಮೆತ್ತನೆ ಕಡುಬು ಇನ್ನೂ ಬೇಕು। ಹತ್ತೂ ಐದು ಹದಿನೈದು ಹೊತ್ತಾಗಿಲ್ಲೆ ಹೊಡಿ ಇನ್ನೈದು। ಹತ್ತೂ ಆರು ಹದಿನಾರು। ಉತ್ತಮಳಮ್ಮ ಸರಿ ನಿನಗಾರು॥

ಹತ್ತೂ ಏಳು ಹದಿನೇಳು। ಮತ್ತೂ ಬಂದರೆ ಹೊಡಿಯೇಳು। ಹತ್ತೂ ಎಂಟು ಹದಿನೆಂಟು। ಚಿತ್ತಕೆ ಬಂದರೆ ಇನ್ನೂ ಉಂಟು। ಹತ್ತೂ ಒಂಭತ್ತು ಹತ್ತೊಂಭತ್ತು ಎತ್ತಪ್ಪಣ್ಣಾ ಹೊಟ್ಟೆಯು ತುಂಬಿತು। ಹತ್ತೂ ಹತ್ತೂ ಇಪ್ಪತ್ತು ಮಾಡಿದ ಕಡುಬು ತೀರಿತ್ತು।।

ಹತ್ತು ಹತ್ತು ಇಪ್ಪತ್ತು

ಹತ್ತು ಹತ್ತು ಇಪ್ಪತ್ತು ತೋಟಕೆ ಹೋದನು ಸಂಪತ್ತು। ಇಪ್ಪತ್ತು ಹತ್ತು ಮುವ್ವತ್ತು ಕೈಯಲ್ಲೊಂದು ಕಲ್ಲಿತ್ತು। ಮುವತ್ತು ಹತ್ತು ನಲವತ್ತು ಎದುರಿಗೆ ಮಾವಿನ ಮರವಿತ್ತು। ನಲವತ್ತು ಹತ್ತು ಐವತ್ತು। ಮಾವಿನ ಮರದಲಿ ಕಾಯಿತ್ತು। ಐವತ್ತು ಹತ್ತು ಅರವತ್ತು ಕಲ್ಲನು ಬೀರಿದ ಸಂಪತ್ತು। ಅರುವತ್ತು ಹತ್ತು ಎಪ್ಪತ್ತು ಕಾಯಿಯು ತಪತಪನುದುರಿತ್ತು। ಎಪ್ಪತ್ತು ಹತ್ತು ಎಂಬತ್ತು ಮಾಲಿಯ ಕಂಡನು ಸಂಪತ್ತು। ಎಂಬತ್ತು ಹತ್ತು ತೊಂಬತ್ತು ಕಾಲುಗಳೆರಡೂ ನಡುಗಿತ್ತು। ತೊಂಬತ್ತು ಹತ್ತು ನೂರು ಮನೆಯ ಸೇರು ಸಂಪತ್ತು ।।

ಹತ್ತು ಹತ್ತು ಇಪ್ಪತ್ತು ಹತ್ತಿರ

ಹತ್ತು ಹತ್ತು ಇಪ್ಪತ್ತು। ಹತ್ತಿರ ಕುಂಬಾರನ ಮನೆಯಿತ್ತು। ಇಪ್ಪತ್ತು ಹತ್ತು ಮೂವತ್ತು। ಜೇಡಿಯ ರಾಶಿ ಅಲ್ಲಿತ್ತು। ಮೂವತ್ತು ಹತ್ತು ನಲವತ್ತು। ನೀರಲಿ ಮಣ್ಣು ನೆನೆದಿತ್ತು। ನಲವತ್ತು ಹತ್ತು ಐವತ್ತು। ಕುಂಬಾರನ ಚಕ್ರ ತಿರುಗಿತ್ತು। ಐವತ್ತು ಹತ್ತು ಅರವತ್ತು। ಜೇಡಿಯು ಚಕ್ರವನೇರಿತ್ತು। ಅರವತ್ತು ಹತ್ತು ಎಪ್ಪತ್ತು। ಕುಂಬಾರನ ಕೈ ಚುರುಕಿತ್ತು। ಎಪ್ಪತ್ತು ಹತ್ತು ಎಂಭತ್ತು। ಮಣ್ಣಲಿ ಮಡಕೆ ಮೂಡಿತ್ತು। ಎಂಭತ್ತು ಹತ್ತು ತೊಂಭತ್ತು। ಸುಡಲದು ಗಟ್ಟಿ ಆಗಿತ್ತು। ತೊಂಭತ್ತು ಹತ್ತು ನೂರಾಯ್ತು। ಮಾಡಿದ ಮಡಕೆ ಮಾರಾಯ್ತು।।

ಹತ್ತು ಹತ್ತು ಇಪ್ಪತ್ತು ಶಾಲೆಗೆ

ಹತ್ತು ಹತ್ತು ಇಪ್ಪತ್ತು। ಶಾಲೆಗೆ ರಜ ಇವತ್ತು।। ಹತ್ತು ಇಪ್ಪತ್ತು ಮೂವತ್ತು। ಆಟವೇ ಆಟ ಮೂರ್ಹೊತ್ತು। ಹತ್ತು ಮೂವತ್ತು ನಲವತ್ತು। ಪಾಠ ಓದುವುದು ಇಲ್ಲವಾಯ್ತು। ಹತ್ತು ನಲವತ್ತು ಐವತ್ತು। ಮಜವೇ ಮಜ ಇವತ್ತು।। ಹತ್ತು ಐವತ್ತು ಅರವತ್ತು। ಊಟ ನಿದ್ದೆ ಒಪ್ಪತ್ತು। ಹತ್ತು ಅರವತ್ತು ಎಪ್ಪತ್ತು। ಎಲ್ಲರೂ ಸೇರಿ ಮರಹತ್ತು।। ಹತ್ತು ಎಪ್ಪತ್ತು ಎಂಬತ್ತು। ಇಳಿಯೋದೆ ಬೇಡ ಯಾವತ್ತು।। ಹತ್ತು ಎಂಬತ್ತು ತೊಂಬತ್ತು। ಅಪ್ಪ ಬೈದ್ಹಂಗೆ ಕೇಳಿಸ್ತು।। ಹತ್ತಕ್ಕೆತ್ತೊಂಬತ್ತು ಸೇರಿ ನೂರು। ಏಳು ಬೀಳೋದ್ರಲ್ಲಿ ಕೆಳಕ್ಕೆ ಹಾರು।।

ಹತ್ತು ಗಂಟುಮೂಟೆ ಹೊತ್ತು (ಕಳೆಯುವುದು)

ಹತ್ತು ಗಂಟುಮೂಟೆ ಹೊತ್ತು ಪುಟ್ಟ ಮಕ್ಕಳು। ಓಡಿ ಹತ್ತಲು ದಿಬ್ಬ ಜಾರಿ ಬಿದ್ದನೊಬ್ಬ। ಉಳಿದವರೊಂಭತ್ತುಮಂದಿ ಹಿಂದಕೆ ಬಿದ್ದ ಚಂದಿ ಹೆಗಲಿಗೆ ಬಿತ್ತು ಗಂಟು ಮುಂದಕೆ ನಡೆದವರೆಂಟು। ಎಂಟರಲ್ಲೊಬ್ಬ ಕುಂಟ ಕಾಲು ಮುರಿದ ತುಂಟ। ಮುಂದಕೆ ಹೋದವರೇಳು ಒಬ್ಬನ ಕಚ್ಚಿತು ಚೇಳು। ಚೇಳು ಬಂತು ಚೇಳು ಎದ್ದು ಪೇರಿ ಕೀಳು। ಓಡಲಾರ ಬೋರ ಓಡಿದವರಾರು। ಕಂಬಿ ಕಿತ್ತವರಾರು ಕಾಲಿಗೆ ಗಾಜಿನ ಚೂರು। ಕೂತನೊಬ್ಬ ಹೈದ ನಡೆದು ಹೋದವರೈವರು। ಮಳೆ ಹೊಳೆ ಬಂತು ಮಕ್ಕಳ ನಡುವೆ ನಿಂತು। ಈಚೆ ಕಡೆ ಸಾಕು ಆಚೆ ಕಡೆ ನಾಕು। ಮುಂದಕೆ ಹಳ್ಳ ಜೋಕೆ ಅದನು ಹಾರುವ ಜಟ್ಟಿ। ಹಾರದಾದ ಪುಟ್ಟು ಮೂರು ಮಂದಿ ಗಟ್ಟಿ। ಹಿಡಿಯಲೆಂದು ಕರಡಿ ಬಲೆಯಿತ್ತು ಹರಡಿ। ಬಿದ್ದನದಕೆ ಗರುಡ ಉಳಿದ ಮಕ್ಕಳೆರಡು। ಇದ್ದವ-ನೊಬ್ಬ ಸುಸ್ತು ಆಗಿ ತಿಂದ ಗಸ್ತು। ಉಳಿದವನೊಬ್ಬ ಒಂದು ಕೊನೆಗೆ ಬಸವಳಿದಂದು। ಕಂಬದ ಮರೆಗೆ ಬಂದು ಬಿಕ್ಕಿ ಬಿಕ್ಕಿ ಅತ್ತ ನೊಂದು।।

ಹತ್ತು ಹಳದಿ ಲಡ್ಡುಗಳು

ಹತ್ತು ಹಳದಿ ಲಡ್ಡುಗಳು ಡಬ್ಬದಲ್ಲಿದ್ದವು। ಅದರಲ್ಲೊಂದು ರವಿಯು ತಿಂದು। 9 ಉಳಿಯಿತು। ಒಂಬತ್ತು ಹಳದಿ ಲಡ್ಡುಗಳು। ಡಬ್ಬದಲ್ಲಿದ್ದವು ಅದರಲ್ಲೊಂದು ವಿಜಯತಿಂದ। 8 ಉಳಿದವು। 8 ಹಳದಿ ಲಡ್ಡುಗಳು ಡಬ್ಬದಲ್ಲಿದ್ದವು। ಅದರಲ್ಲೊಂದು ಶಿವನು ತಿಂದು। 7 ಉಳಿದವು। 7 ಹಳದಿ ಲಡ್ಡುಗಳು ಡಬ್ಬದಲ್ಲಿದ್ದವು। ಅದರಲ್ಲೊಂದು ಶಶಿಯು ತಿಂದು 6 ಉಳಿಯಿತು।6 ಹಳದಿ ಲಡ್ಡುಗಳು ಡಬ್ಬದಲ್ಲಿದ್ದವು। ಅದರಲ್ಲೊಂದು ಗಿರಿಯು ತಿಂದು 5 ಉಳಿಯಿತು। 5 ಹಳದಿ ಲಡ್ಡುಗಳು ಡಬ್ಬದಲ್ಲಿದ್ದವು। ಅದರಲ್ಲೊಂದು ಸೀನು ತಿಂದು 4 ಉಳಿಯಿತು। 4 ಹಳದಿ ಲಡ್ಡುಗಳು ಡಬ್ಬದಲ್ಲಿದ್ದವು। ಅದರಲ್ಲೊಂದು ರಾಮ ತಿಂದು 3 ಉಳಿಯಿತು। 3 ಹಳದಿ ಲಡ್ಡುಗ್ಗಳುಡಬ್ಬದಲ್ಲಿದ್ದವು। ಅದರಲ್ಲೊಂದು ರಾಜ ತಿಂದು 3 ಉಳಿಯಿತು। 3 ಹಳದಿ ಲಡ್ಡುಗಳು ಡಬ್ಬದಲ್ಲಿದ್ದವು। ಅದರಲ್ಲೊಂದು ಲೀಲ ತಿಂದು 2ಉಳಿಯಿತು। 2 ಹಳದಿ ಲಡ್ಡುಗಳು ಡಬ್ಬದಲ್ಲಿದ್ದವು। ಅದರಲ್ಲೊಂದು ರಾಣಿ ತಿಂದು 1 ಉಳಿಯಿತು। 1ಹಳದಿ ಲಡ್ಡುವು ಡಬ್ಬದಲ್ಲಿದ್ದಿತು। ಅದರಲ್ಲೊಂದು ಉಮ ತಿಂದು 0 ಉಳಿಯಿತು।

ಹೇಳ್ತಿನಿ ಕೇಳ್ರವ್ವ ಕೋಳಿ ಕಥೆನಾ

ಹೇಳ್ತಿನಿ ಕೇಳ್ರವ್ವ ಕೋಳಿ ಕಥೆನಾ। ಮುದ್ದಿನಿಂದ ಸಾಕಿದೆ ನಾಲ್ಕು ಕೋಳೀನ। ಹದ್ದು ಒಂದನ್ನು ಹೊಡ್ಕೊಂಡ್ಹೋಯ್ತು ಇನ್ನುಳಿದ ಕೋಳಿಗಳು ಮೂರು ಆಯಿತು॥1॥ ರೋಗ ಬಂದು ಒಂದು ಕೋಳಿ ಸತ್ತೇ ಹೋಯಿತು ಇನ್ನುಳಿದ ಕೋಳಿಗಳು ಎರಡು ಆಯಿತು॥ ಹೇಳ್ತೀನಿ॥2॥ ಮಾರಿ ಹಬ್ಬಕ್ಕೆಂದು ಒಂದು ಕೋಳಿ ಮುರಿದು ತಿಂದ್ಬಿಟ್ಟೆ। ಇನ್ನುಳಿದ ಕೋಳಿ ಒಂದೇ ಆಯಿತು॥3॥ ಪ್ರೀತಿಯಿಂದ ಸಾಕುವೆ ಆ ಕೋಳಿನ ಪ್ರೇಮದಿಂದ ಸಾಕುವೆ ಆ ಕೋಳೀನ॥4॥

ಸಾಮಾನ್ಯ ಜ್ಞಾನ

ಅಜ್ಜಗೆ ಬೇಕು ನಶ್ಯದ ಡಬ್ಬಿ

ಅಜ್ಜಗೆ ಬೇಕು ನಶ್ಯದ ಡಬ್ಬಿ। ಅಜ್ಜಿಗೆ ಬೇಕು ಕುಂಕುಮ ಡಬ್ಬಿ। ಅಪ್ಪಗೆ ಬೇಕು ಶೇವಿಂಗ್ ಡಬ್ಬ। ಅಮ್ಮಗೆ ಬೇಕು ಪೌಡರ್ ಡಬ್ಬ। ನನಗೆ ಬೇಕು ಚಾಕಲೇಟ್ ಡಬ್ಬ॥

ಅಮ್ಮಾ2 ಬೆಕ್ಕು ನಾಯಿ

ಅಮ್ಮಾ ಅಮ್ಮಾ ಬೆಕ್ಕು ನಾಯಿ ಯಾಕೆ ಹಾಗಿದೆ। ನಾಚಿಕೇನೇ ಇಲ್ಲ ಛೀ ಕೆಟ್ಟೇ ಹೋಗಿದೆ॥ ಬಟ್ಟೆ ಇಲ್ದೆ ಬರೀ ಮೈಲಿ ಹೊರಗೆ ಬರುತ್ವೆ। ಕಾಚ ಕೂಡ ಇಲ್ಲ ಥೂ ಎಲ್ಲಾ ಕಾಣುತ್ತೆ॥1॥ ಹಲ್ಲು ಉಜ್ಜೆ ಸ್ನಾನ ಮಾಡ್ದೆ ಎಲ್ಲಾ ತಿನ್ನುತ್ವೆ। ಒಂದ್ರಾ ಎಂಜಲಿಗಿನ್ನೊಂದು ಜಗಳಾ ಮಾಡುತ್ವೆ।2॥ ಬಾರೆ ಅಮ್ಮ ಅಂಗ್ಡಿಗ್ಹೋಗಿ ಬಟ್ಟೆ ತರೋಣ। ಬೆಕ್ಕು ನಾಯಿ ಕತ್ತೆಗೆ ಚಡ್ಡಿ ಹೊಲಿಸೋಣ ಅಂಗಿ ತೊಡಿಸೋಣ॥3॥

ಎಲೆ2 ಅರಳಿಎಲೆ — ರಾಗ:ಬೇಹಾಗ್

ಎಲೆ ಎಲೆ ಅರಳಿಎಲೆ। ತೋರಣ ಕಟ್ಟಲು ಮಾವಿನೆಲೆ। ಚಪ್ಪರಕಾಗಿ ತೆಂಗಿನೆಲೆ। ಹೂವನು ಕಟ್ಟಲು ಪನ್ನೀರೆಲೆ। ಪೂಜೆಯ ಮಾಡಲು ತುಳಸಿ ಎಲೆ। ದೊನ್ನೆಯ ಕಟ್ಟಲು ಬಾಳೆ ಎಲೆ। ಊಟವ ಮಾಡಲು ಮುತ್ತುಗದೆಲೆ। ಊಟದ ನಂತರ ವೀಳ್ಯದೆಲೆ। ಕೃಷ್ಣನು ಮಲಗಿದಾಲದೆಲೆ। ರಥಸಪ್ತಮಿಗೆ ಎಕ್ಕದೆಲೆ। ಶಿವರಾತ್ರಿಗೆ ಬಿಲ್ವದೆಲೆ। ಯುಗಾದಿಗೆ ಬೇವಿನೆಲೆ॥ ತಂಪಾಗಿರಲು ಹೊಂಗೆ ಎಲೆ। ವಿಜಯದಶಮಿಗೆ ಬನ್ನಿ ಎಲೆ। ಔಷಧಿಗಾಗಿ ತುಂಬೆ ಎಲೆ॥

ಕಾಮನಬಿಲ್ಲು ಕಮಾನು ಕಟ್ಟಿದೆ — ರಾಗ:ಕುರಂಜಿ

ಕಾಮನಬಿಲ್ಲು ಕಮಾನು ಕಟ್ಟಿದೆ ಮೋಡದ ನಾಡಿನ ಬಾಗಿಲಿಗೆ। ಬಣ್ಣಗಳೇಳನು ತೋರಣ ಮಾಡಿದೆ। ಕಂದನ ಕಣ್ಣಿಗೆ

ಚಂದನ ಮಾಡಿದೆ। ಹಣ್ಣಿನ ಹೂವಿನ ಹೊನ್ನನು ಕೂಡಿದೆ। ಮಕ್ಕಳಿಗೋಕುಳಿಯಾಟವನಾಡಿದೆ। ತೆಂಗಿನ ತೋಟದ ಬುಡದಲಿ ಮೂಡಿದೆ। ಭೂಮಿಗೆ ಬಾನಿಗೆ ಸೇತುವೆ ಹೂಡಿದೆ। ಕಾಮನ ಬಿಲ್ಲು ಕಮಾನು ಕಟ್ಟಿದೆ।।

ಕಾಮನ ಬಿಲ್ಲು ನೋಡಮ್ಮ

ಕಾಮನ ಬಿಲ್ಲು ನೋಡಮ್ಮ। ಬಣ್ಣಗಳೆಷ್ಟು ಹೇಳಮ್ಮ।। ಮೊದಲಿನ ಬಣ್ಣ ನೇರಳೆ। ರುಚಿಯಲಿ ಒಗರು ನೇರಳೆ।। ಎರಡನೆ ಬಣ್ಣ ಊದಾ। ಬೂದಿ ಬಣ್ಣ ಊದಾ।। ಮೂರನೆ ಬಣ್ಣ ನೀಲಿ। ಆಗಸ ಬಣ್ಣ ತಿಳಿನೀಲಿ।। ನಾಲ್ಕನೆ ಬಣ್ಣ ಹಸಿರು। ಸಸ್ಯಗಳೆಲ್ಲಾ ಹಸಿರು।। ಐದನೆ ಬಣ್ಣ ಹಳದಿ। ಅರಿಶಿನ ಬಣ್ಣ ಹಳದಿ।। ಆರನೆ ಬಣ್ಣ ಕಿತ್ತಳೆ। ತಿನ್ನುವ ಹಣ್ಣು ಕಿತ್ತಳೆ।। ಏಳನೆ ಬಣ್ಣ ಕೆಂಪು। ರಕ್ತದ ಬಣ್ಣ ಕೆಂಪು।।

ಕಾಮನಬಿಲ್ಲು ನೋಡಲು ನಿಲ್ಲು

ಕಾಮನಬಿಲ್ಲು ನೋಡಲು ನಿಲ್ಲು ಚೆಲ್ಲಿತು ಬಿಲ್ಲು ಬಣ್ಣಗಳೇಳು। ಬಣ್ಣಗಳೇಳು ಕೂಡಲೆ ಹೇಳು। ಹಸಿರು ಹಳದಿ ಕೆಂಪುಗಳೆರಡು। ನೀಲಿಗಳು ಮೂರು ಸೇರಿ ಏಳು। ಬಾನಲಿ ಮೂಡಿದ ಬಣ್ಣದ ಬಿಲ್ಲು। ಏಳು ಬಣ್ಣಗಳು ಕಡೆದಿಹ ಬಿಲ್ಲು। ಊದಾ ನೇರಳೆ ಜೊತೆಯಾಗಿಹ ಬಿಲ್ಲು। ನೀಲಿ ಹಸಿರು ಒಂದಾಗಿಹ ಬಿಲ್ಲು। ಕಿತ್ತಳೆ ಕೆಂಪು ಬೆರೆತಿಹ ಬಿಲ್ಲು। ಹಳದಿ ಕೆಂಪು ಏಕವಾಗಿಹ ಬಿಲ್ಲು। ಮೂರೇ ಬಣ್ಣ ಕಾಣುವ ಬಿಲ್ಲು। ನೋಟಕೆ ಚೆಂದ ಕಾಮನ ಬಿಲ್ಲು।।

ಕಿರಿದು ಕಿರಿದು ಕಿಬ್ಬೆರಳು

ಕಿರಿದು ಕಿರಿದು ಕಿಬ್ಬೆರಳು। ಮುಂದಿರುವುದೆ ಉಂಗುರದಾ ಬೆರಳು। ನಾದವ ಮೀಟುವ ನಡುಬೆರಳು। ತೋರುವುದೇ ತೋರ್ ಬೆರಳು। ಹಿರಿದು ಹಿರಿದು ಹೆಬ್ಬೆರಳು। ಲೆಖ್ಖಿಸಿ ನೋಡಲು ಅವು ಹತ್ತು। ಕೈಗಳ ಜೋಡಿಸಿ ನಮಿಸುತ್ತಾ ಗುರುವಂದನೆ ಮಾಡುವೆವು।।

ನಾನು ಹೋಗ್ತೇನೆ ಶಾಲೆಗೆ

ನಾನು ಹೋಗ್ತೇನೆ ಶಾಲೆಗೆ। ಅಆಇಈ ಕಲಿಯೋಕೆ। ವಿದ್ಯಾವಂತನಾಗೋಕೆ। ಬುದ್ಧಿವಂತನೆನಿಸೋಕೆ। ನಸುಕಿನಲ್ಲಿ ಏಳುವೆ। ಹಲ್ಲು ಉಜ್ಜಿ ತೊಳೆಯುವೆ। ದಿನವು ಜಳಕ ಮಾಡುವೆ। ಮಡಿಯ ಬಟ್ಟೆಧರಿಸುವೆ। ಕಳ್ಳತನ ಮಾಡೋಲ್ಲ। ಸುಳ್ಳು ಎಂದು ಹೇಳೋಲ್ಲ। ಗೆಳೆಯರಿಗೆಂದು ಹೊಡೆಯೋಲ್ಲ। ಶಾಲೆಗೆ ಕಳ್ಳು ಬಿಳೋಲ್ಲ।।

ನೀರಿನಲ್ಲಿ ಮೀನುಗಳು ಈಜುತ್ತಲಿವೆ

ನೀರಿನಲ್ಲಿ ಮೀನುಗಳು ಈಜುತ್ತಲಿವೆ। ಅತ್ತಲಾಗಿಯೂ ಇತ್ತಲಾಗಿಯೂ।। ಆಗಸದಲ್ಲಿ ಪಕ್ಷಿಗಳು ಹಾರುತ್ತಲಿವೆ। ಅತ್ತಲಾಗಿಯೂ ಇತ್ತಲಾಗಿಯೂ।। ಆಮರದಲ್ಲೊಂದು ಗೂಬೆಮರಿ ಕಣ್ಣಮುಚ್ಚುತ್ತಾ ನಿದ್ದೆಮಾಡುತ್ತಾ।। ಆ ಕಾಡ್ನಲ್ಲೊಂದು ಜಿಂಕೆಮರಿ ಓಡುತ್ತಾಲಿದೆ। ಮೃಗಗಳ ನೋಡುತ್ತಾ ಹೆದರಿ ನಡುಗುತ್ತಾ।। ಆ ಕಾಡ್ನಲ್ಲೊಂದು ನವಿಲುಮರಿ ಗರಿಗಳ ಬಿಚ್ಚುತ್ತಾ ಎಗರಿ ಕುಣಿಯುತ್ತಾ।।

ಪೆನ್ಸಿಲ್ ಅಣ್ಣನ ಮೊದಲನೆ ಶತ್ರು

ಪೆನ್ಸಿಲ್ ಅಣ್ಣನ ಮೊದಲನೆ ಶತ್ರು। ಅಳಿಸೊ ರಬ್ಬರ್ರು ತಪ್ಪು ಬರೆದರೆ। ಒಪ್ಪೋದಿಲ್ಲ ಏನೇ ಹೇಳಿದ್ರೂ... ಪೆನ್ಸಿಲ್ ಅಣ್ಣನ ಎರಡನೇ ಶತ್ರು। ಹೆರೆಯೋ ಮೆಂಡರ್ರು। ಮೊಂಡಾಗಿರಲು। ಬಿಡೋದೆ ಇಲ್ಲ ಎಷ್ಟೇ ಬಡಕೊಂಡ್ರು।।

ಬಣ್ಣ ಬಣ್ಣ ಬಣ್ಣ ಎಷ್ಟೊಂದು — ರಾಗ:ಹಿಂದೋಳ

ಬಣ್ಣ ಬಣ್ಣ ಬಣ್ಣ ಎಷ್ಟೊಂದು ಬಣ್ಣ ನೋಡಿ। ಆನಂದಿಸೋಣ ಒಂದು ಪಾಠ ಕಲಿಯೋಣ।।ಪ।। ಎಲೆ ಹಸಿರು ಗಿಳಿ ಹಸಿರು ತಾಜಾ ತರ್ಕಾರಿ ಹಸಿರು। ಗಿಡ ಹಸಿರು ಮರ ಹಸಿರು ಪ್ರಕೃತಿಯ ಹೆಸರು।।1।। ಮಾವಿನ ಚಿಗುರು ಕೆಂಪು

ಗುಲಾಬಿ ಹೂ ಕೆಂಪು। ಸೇಬಿನ ಹಣ್ಣು ಕೆಂಪು ಇಂಥ ಕೆಂಪು ಮನಸ್ಸಿಗೆ ತಂಪು॥2॥ ಸೇವಂತಿಗೆ ಹೂ ಹಳದಿ ಸೂರ್ಯಕಾಂತಿಯು ಹಳದಿ। ಅಮ್ಮನ ಕೆನ್ನೆಯ ಅರಿಶಿಣ ಹಳದಿ ಬಂಗಾರದಾ ತೆರದಿ॥3॥ ನೇರಳೆ ಹಣ್ಣು ನೀಲಿ ಕಡಲಿನ ಬಣ್ಣ ನೀಲಿ। ಕೃಷ್ಣನ ಬಣ್ಣ ತೆಳು ನೀಲಿ॥ ಎಲ್ಲಾ ಬಣ್ಣಗಳು ಕೂಡಿದರಾಗ ಬಿಳಿಯ ಬಣ್ಣ ಶಾಂತಿಯ ಸಂಕೇತ। ಬಿಳಿ ಬಣ್ಣ ನಾವೆಲ್ಲಾ ಒಂದಾಗೋಣ॥4॥

ಬಸ್ಸ್ ಬಂತು ಬಸ್ಸು

ಬಸ್ಸ್ ಬಂತು ಬಸ್ಸು। ಗೌರ್ನ್‌ಮೆಂಟ್ ಬಸ್ಸು। ಕೆಂಪುಬಿಳಿಯ ಬಣ್ಣಾ। ನೋಡುಬಾರಣ್ಣಾ। ಆರು ಚಕ್ರ ಇರುವುದು। ಎರಡು ಲೈಟು ಉರಿವುದು। ನಾ ಕಂಡೆಕ್ಟರ್ ಆಗುವೆ। ರೈಟ್ ರೈಟ್ ಹೇಳುವೆ। ಸೀಟಿಯನ್ನು ಊದುವೆ॥

ಬಂತು2 ವಿಮಾನ

ಬಂತು ಬಂತು ವಿಮಾನ। ಯಾರು ಇದರ ಸಮಾನ। ಬಾನ ಬಯಲ ಯಾನ। ಮಾಡಿದೆ ವಿವಿಧ ಗಾನ॥1॥ ನೆಲವ ಬಿಟ್ಟು ಹಾರಿತು। ಮೇಲೆ ಮೇಲೆ ಏರಿತು। ಗಾಳಿಯಲ್ಲಿ ತೇಲಿತು। ಮೊಡದೋಳಗೆ ಹೋಯಿತು॥2॥ ಜನರ ಹೊತ್ತು ಮೇಲಕೆ। ಸಾಗಿ ಹೋಯಿತು ಮೇಲಕೆ। ದೇಶದಿಂದ ದೇಶಕೆ। ಸಾಗುತಿಹುದು ನಿಮಿಷಕೆ॥3॥

ಹಣ್ಣು2 ಮಾವಿನ ಹಣ್ಣು

ಹಣ್ಣು ಹಣ್ಣು ಮಾವಿನ ಹಣ್ಣು। ಮಕ್ಕಳ ಬಾಯಿಗೆ ಸೀಬೆಹಣ್ಣು। ಹೆತ್ತವರ ಬಾಯಿಗೆ ಹಲಸಿನ ಹಣ್ಣು। ಮುದುಕರ ಬಾಯಿಗೆ ಬಾಳೆಹಣ್ಣು। ಕಣ್ಣುಮುಚ್ಚು ಬಾಯಿಬಿಚ್ಚು। ಹಾಕುವೆ ನಾನು ದ್ರಾಕ್ಷಿ ಹಣ್ಣು॥

ಸಂಕ್ರಾಂತಿ ಬರಲು (ಹಬ್ಬದ ಸಿಹಿ)

ಸಂಕ್ರಾಂತಿ ಬರಲು ಎಳ್ಳು ಬೆಲ್ಲ। ಉಗಾದಿ ಬಂದಿತು ಬೇವು ಬೆಲ್ಲ। ಬೇಳೆಯ ಹೋಳಿಗೆ ಗೌರೀದೇವಿಗೆ। ಕಾಯಿಯ ಕಡುಬು ಗಣೇಶ ಚೌತಿಗೆ॥ ನವರಾತ್ರಿ ಬೊಂಬೆ ಪಟ್ಟದ ರಾಜ। ದೀವಳಿಗೆ ಹಬ್ಬ ಪಟಾಕಿ ಮಜ। ನಾಲಿಗೆ ಸಿಹಿ ಶಾಲೆಗೆ ರಜ। ಹಬ್ಬದ ದಿನವೆಲ್ಲ ಉಲ್ಲಾಸ ನಿಜ॥

ಸೃಷ್ಟಿಯ ಚಾಲನೆ ಜೀವನ ಮರಣ

ಸೃಷ್ಟಿಯ ಚಾಲನೆ ಜೀವನ ಮರಣ। ಜೀವ ಜೀವದ ಈ ಮಣ್ಣು॥ ಮೂರು ದಿನದ ಸಂತೆಯ ಮುಗಿಸಿ। ಸೇರುವರೆಲ್ಲಾ ಈ ಮಣ್ಣು॥1॥ ಕಾಡಲಿ ಹುಟ್ಟಿದ ಕೋಗಿಲೆಯ। ದನಿಯೆ ಮಿಗಿಲೆಂದಾಡುವುದು। ಕೆಸರಲಿ ಹುಟ್ಟಿದ ತಾವರೆಯು। ದೇವರ ಮುಡಿಯಲಿ ಮುಡಿಸುವರು॥2॥ ಎಲ್ಲಿವೆಯಣ್ಣ ಮಡಿ ಮೈಲಿಗೆಯು। ಸೃಷ್ಟಿಯ ಮೂಲ ಈ ಮಣ್ಣು। ಮೂರೇ ದಿನದ ಸಂತೆಯ ಮುಗಿಸಿ। ಸೇರುವರೆಲ್ಲಾ ಈ ಮಣ್ಣು॥3॥ ಜಾತಿ ಧರ್ಮ ಮಡಿಮೈಲಿಗೆಯು। ಭೇದ ಭಾವ ಈ ಮಣ್ಣಿಗಿಲ್ಲ। ಬಡವ ಬಲ್ಲಿದದಲಿತನೆಂಬ। ಸ್ಪೃಶ್ಯ ಅಸ್ಪೃಶ್ಯತೆ ಈ ಮಣ್ಣಿಗಿಲ್ಲ॥4॥ ಯಾರೇ ಬಿತ್ತಿದರೂ ಫಲವನ್ನು ಕೊಡುವ। ಪಾವನವಾದ ಈ ಮಣ್ಣು॥ ಮೂರೇ ದಿನದ ಸಂತೆಯ ಮುಗಿಸಿ। ಸೇರುವರೆಲ್ಲಾ ಈ ಮಣ್ಣು॥5॥

ಕೆಂಪು ಬಣ್ಣ ಹೇಗಿದೆ

ಕೆಂಪುಬಣ್ಣ ಹೇಗಿದೆ ಪುಟ್ಟಿ? ಅಮ್ಮನ ಕುಂಕುಮ ಟೊಮೆಟೋ ಹಣ್ಣು॥ ಕಪ್ಪು ಬಣ್ಣ ಹೇಗಿದೆ ಪುಟ್ಟಿ? ನನ್ನ ಜಡೆಯು ಅಮ್ಮನ ಕಣ್ಣು॥ ಹಸಿರು ಬಣ್ಣ ಯಾವುದೇ ಚಿನ್ನ। ಗಿಡದ ಎಲೆಯು ಗಿಣಿಯ ರೆಕ್ಕೆ॥ ಹಳದಿ ಬಣ್ಣ ಯಾವುದೇ ಚಿನ್ನ। ಸೇವಂತಿಗೆ ಹೂ ಹಾರುವ ಚಿಟ್ಟೆ॥ ನೀಲಿಯ ಬಣ್ಣ ಯಾವುದು ಮುನ್ನ। ಮೇಲೆ ಆಕಾಶ ಕೆಳಗೆ ಸಮುದ್ರ॥ ಬಿಳಿಯ

ಬಣ್ಣ ಯಾವುದೇ ಮುನ್ನಿ। ಹಗಲು ಸೂರ್ಯ ರಾತ್ರಿಯ ಚಂದ್ರ॥

ಹಸಿರು ಗಿಳಿಯ ಬಣ್ಣ

ಹಸಿರು ಗಿಳಿಯ ಬಣ್ಣ। ನೀಲಿ ಮುಗಿಲ ಬಣ್ಣ। ಹಳದಿ ಅರಿಶಿನ ಬಣ್ಣ। ಕೆಂಪು ಕುಂಕುಮ ಬಣ್ಣ। ಕಪ್ಪು ಕಾಗೆ ಬಣ್ಣ। ಬಿಳಿ ಹಾಲಿನ ಬಣ್ಣ॥

ಹಕ್ಕಿ ಚಿಲಿಪಿಲಿ ಗಿಲಕಿ ಗಿಲಿಗಿಲಿ

ಹಕ್ಕಿ ಚಿಲಿಪಿಲಿ ಗಿಲಕಿ ಗಿಲಿಗಿಲಿ। ದುಡ್ಡು ಝಣಝಣ ಗಂಟೆ ಢಣಢಣ। ಕಪ್ಪೆ ವಟವಟ ಅಜ್ಜಿ ಲೊಟಲೊಟ। ನಾಯಿ ಕುರುಕುರು ಬೆಕ್ಕು ಗುರುಗುರು। ಅಪ್ಪ ದುರುದುರು ಅಮ್ಮ ಸುರುಬುರು। ರೊಟ್ಟಿ ಸುಡುಸುಡು ಹೊಟ್ಟೆ ಗುಡುಗುಡು। ಬೆಂಕಿ ಧಗಧಗ ಗಾಯ ಭಗಭಗ। ಮಿಂಚು ಫಳಫಳ ಕಂಚು ಥಳಥಳ। ಮಳೆ ಬಳಬಳ ನೆಲ ಝುಳಝುಳ॥

ಸಮಯ

ಒಂದು ನಿಮಿಷಕೆ ಎಷ್ಟು ಸೆಕೆಂಡು? ರಾಗ:ಕುರಂಜಿ

ಒಂದು ನಿಮಿಷಕ್ಕೆ ಎಷ್ಟು ಸೆಕೆಂಡು? ಹೇಳಮ್ಮಾ ಹೇಳು। ಒಂದು ನಿಮಿಷಕರವತ್ತು ಸೆಕೆಂಡು। ಕೇಳಮ್ಮಾ ಕೇಳು। ಒಂದು ಗಂಟೆಗೆ ನಿಮಿಷಗಳೆಷ್ಟು? ಹೇಳಮ್ಮಾ ಹೇಳು। ಗಂಟೆಗೆ ನಿಮಿಷಗಳರವತ್ತಂತೆ ಕೇಳಮ್ಮಾ ಕೇಳು। ಗಂಟೆಗಳೆಷ್ಟು ದಿನವೊಂದಕ್ಕೆ ಹೇಳಮ್ಮಾ ಹೇಳು। ಇಪ್ಪತ್ನಾಲ್ಕು ಗಂಟೆ ದಿನಕ್ಕೆ ಕೇಳಮ್ಮಾ ಕೇಳು॥

ಗಂಟೆಯ ನೆಂಟನೆ ರಾಗ: ಕುರಂಜಿ

ಗಂಟೆಯ ನೆಂಟನೆ ಓ ಗಡಿಯಾರ। ಬೆಳ್ಳಿಯ ಬಣ್ಣದ ಗೋಳಾಕಾರ। ವೇಳೆಯು ತಿಳಿಯಲು ನೀನಾಧಾರ। ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್॥ ಹಗಲೂ ಇರುಳೂ ಒಂದೇ ಬಾಳು। ನೀನಾವಾಗಲು ದುಡಿಯುವ ಆಳು। ಕಿವಿಯನು ಹಿಂಡಲು ನಿನಗದು ಕೂಳು। ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್॥ ಮುಖ ಒಂದಾದರು ದ್ವಾದಶ ನೇತ್ರ। ಎರಡೇ ಕೈಗಳು ಏನುವಿಚಿತ್ರ। ಯಂತ್ರ ಪುರಾಣದ ರಕ್ಕಸ ಪುತ್ರ। ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್॥ ಟಿಕ್ ಟಿಕ್ ಎನ್ನುತ ಹೇಳುವೆಯೇನು? ನಿನ್ನೀ ಮಾತಿನ ಒಳಗುಟ್ಟೇನು? 'ಕಾಲವು ನಿಲ್ಲದು' ಎನ್ನುವಿಯೇನು? ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್॥ ದುಡಿಯುವುದೊಂದೇ ನಿನ್ನಯ ಕರ್ಮ। ದುಡಿಸುವುದೊಂದೆ ನಮ್ಮಯ ಧರ್ಮ। ಇಂತಿರುವುದು ಕಲಿಯುಗದೀ ಧರ್ಮ। ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್॥

ಗೋಡೆಗೆ ಇರುವ ಗಡಿಯಾರ

ಗೋಡೆಗೆ ಇರುವ ಗಡಿಯಾರ। ನಿನಗೆ ಎಷ್ಟು ವೈಯ್ಯಾರ। ಢಣಢಣ ಗಂಟೆ ಬಾರಿಸುವೆ। ಸಮಯವ ನಮಗೆ ತೋರಿಸುವೆ॥

ಶಾಮಣ್ಣನ ಮನೆ ಮದುವೇಲಿ

ಶಾಮಣ್ಣನ ಮನೆ ಮದುವೇಲಿ ನಾನೇನೇನ್ ತಿಂದೆ ಗೋತ್ತಾ? ಸೋಮವಾರ ಸಂಡಿಗೆ। ಮಂಗಳವಾರ ಮಂಡಿಗೆ। ಬುಧವಾರ ಬೂಂದಿ। ಗುರುವಾರ ಗುಲ್ ಪಾವಟಿ। ಶುಕ್ರವಾರ ಶನಿವಾರ ಶ್ಯಾವಿಗೆ ಖೀರು ಕೆಸರಿಭಾತು। ಭಾನುವಾರ ಬರೀ ತಿಳಿಸಾರನ್ನ। ಅದು ತಿಂದಿದ್ದಕ್ಕೆ ಮುಂದಿನವಾರ ಏನಾಯ್ತು ಗೊತ್ತಾ?

ಸೋಮವಾರ ಸೊಂಟನೋವು। ಮಂಗಳವಾರ ಮಂಡಿನೋವು। ಬುಧವಾರ ಬೆನ್ನುನೋವು। ಗುರುವಾರ ಗಂಟಲು ನೋವು। ಶುಕ್ರವಾರ ಶನಿವಾರ ಜ್ವರ, ಕೆಮ್ಮು, ನೆಗಡಿ ಭಾನುವಾರ ಡಾಕ್ಟ್ರ ಹತ್ತಿರ ಓಡೋಗ್ ಬೇಕು।।

ತಿಥಿಗಳು – ಹಬ್ಬಗಳು

ಪಾಡ್ಯಮಿ – ಬಲಿಪಾಡ್ಯಮಿ। ಬಿದಿಗೆ – ಭಾವನ ಬಿದಿಗೆ

ಪಾಡ್ಯಮಿ - ಬಲಿಪಾಡ್ಯಮಿ। ಬಿದಿಗೆ - ಭಾವನ ಬಿದಿಗೆ। ತದಿಗೆ - ಅಕ್ಷಯ ತದಿಗೆ। ಚೌತಿ - ಗಣೇಶನ ಚೌತಿ। ಪಂಚಮಿ-ನಾಗರಪಂಚಮಿ। ಷಷ್ಠಿ - ಸುಬ್ಬರಾಯನ ಷಷ್ಠಿ। ಸಪ್ತಮಿ - ರಥಸಪ್ತಮಿ। ಅಷ್ಟಮಿ-ಗೋಕುಲಾಷ್ಟಮಿ। ನವಮಿ-ಮಹಾನವಮಿ। ದಶಮಿ-ವಿಜಯ ದಶಮಿ। ಏಕಾದಶಿ-ವೈಕುಂಠ ಏಕಾದಶಿ। ದ್ವಾದಶಿ-ಉತ್ಥಾನ ದ್ವಾದಶಿ। ತ್ರಯೋದಶಿ- ಸೋಮ (ಪ್ರದೋಷ)ತ್ರಯೋದಶಿ। ಚತುರ್ದಶಿ - ನರಕ ಚತುರ್ದಶಿ। ಪೌರ್ಣಿಮೆ - ಗುರು ಪೂರ್ಣಿಮ। ಕಾರ್ತಿಕ ಹುಣ್ಣಿಮೆ। ಅಮವಾಸ್ಯೆ - ಭೀಮನಮಾವಾಸ್ಯೆ - ಮಹಾಲಯ ಅಮಾವಾಸ್ಯೆ।।

ಮೊದಲನೆ ದಿನವೆ ಭಾನುವಾರ (ಗ್ರಹ ಮತ್ತು ವಾರ)

ಮೊದಲನೆ ದಿನವೆ ಭಾನುವಾರ। ಭಾರತಿದೇವಿಗೆ ನಮಸ್ಕಾರ।। ಎರಡನೆ ದಿನವೆ ಸೋಮವಾರ। ಸೋಮೇಶ್ವರನಿಗೆ ನಮಸ್ಕಾರ।। ಮೂರನೆ ದಿನವೆ ಮಂಗಳವಾರ। ಮಂಗಳಗೌರಿಗೆ ನಮಸ್ಕಾರ।। ನಾಲ್ಕನೆ ದಿನವೆ ಬುಧವಾರ। ಭೂಮಿತಾಯಿಗೆ ನಮಸ್ಕಾರ।। ಐದನೆ ದಿನವೇ ಗುರುವಾರ। ಗುರುಬ್ರಹ್ಮರಿಗೆ ನಮಸ್ಕಾರ।। ಆರನೆ ದಿನವೇ ಶುಕ್ರವಾರ। ಸೂರ್ಯಚಂದ್ರರಿಗೆ ನಮಸ್ಕಾರ।। ಏಳನೇ ದಿನವೇ ಶನಿವಾರ। ಶನಿದೇವರಿಗೆ ನಮಸ್ಕಾರ।। ರಾಹುಕೇತುಗಳಿಬ್ಬರಿಗೂ ನಮ್ಮ ಅನಂತ ಕೋಟಿಯ ನಮಸ್ಕಾರ।।

ವಾರಕೆ ಏಳೇ ಏಳು ದಿನ

ವಾರಕೆ ಏಳೇ ಏಳು ದಿನ। ಆದಿತ್ಯವಾರವೆ ರಜದ ದಿನ। ಸೋಮವಾರ ಚಿಣ್ಣಿಯ ಕೋಲು। ಮಂಗಳವಾರ ವಾಲೀ ಬಾಲು। ಬೇಟೆಯ ಆಟವು ಬುಧವಾರ। ಗರಡಿಯ ಮನೆಯಲಿ ಗುರುವಾರ। ಶುಕ್ರವಾರಕೆ ಬುಗುರೀ ಚೆಂಡು। ಶನಿವಾರಕ್ಕೆ ಕ್ರಿಕೆಟ್ಟು ದಾಂಡು। ವಾರಕೆ ಏಳೇ ಏಳು ದಿನ ಆಟಕೆ ಸಾಲದು ರಜಾದಿನ।।

ಶುಕ್ಲಪಕ್ಷ ಕೃಷ್ಣಪಕ್ಷ

ಶುಕ್ಲಪಕ್ಷ ಕೃಷ್ಣಪಕ್ಷ ಎಂದರೇನು ಹೇಳಿ? ಹೇಳುತ್ತೇವೆ ಕೇಳಿ ಮಿಸ್ ಕೇಳಿ। ಪಾಡ್ಯ, ಬಿದಿಗೆ, ತದಿಗೆ, ಚೌತಿ, ಪಂಚಮಿ, ಷಷ್ಠಿ, ಸಪ್ತಮಿ, ಅಷ್ಟಮಿ, ನವಮಿ, ದಶಮಿ ಏಕಾದಶಿ, ದ್ವಾದಶಿ, ತ್ರಯೋದಶಿ, ಚತುರ್ದಶಿ, ಹುಣ್ಣಿಮೆ, 15 ದಿನ ಒಟ್ಟುಗೂಡಿ ಒಂದು ಪಕ್ಷವು। ಕಡೆಯಲಿ ಹುಣ್ಣಿಮೆಯು ಬರಲು ಶುಕ್ಲಪಕ್ಷವು ಅದರ ಬದಲು ಅಮಾವಾಸ್ಯೆ ಬರಲು ಕೃಷ್ಣಪಕ್ಷವು।।

ಚೈತ್ರ, ವೈಶಾಖ, ಜೇಷ್ಠ

ಚೈತ್ರ, ವೈಶಾಖವು, ಜ್ಯೇಷ್ಠ, ಆಶಾಢ। ಶ್ರಾವಣ ಭಾದ್ರಪದ । ಆಶ್ವೀಜ, ಕಾರ್ತಿಕ, ಮಾರ್ಗಶಿರ, ಪುಷ್ಯ, ಮಾಘ, ಪಾಲ್ಗುಣಋವುಗಳು ನಮ್ಮ ಹನ್ನೆರಡು ತಿಂಗಳುಗಳು।।

ಚೈತ್ರ ವೈಶಾಖ ತಡೆಯಲಾರೆ (ಋತುಚಕ್ರ)

ಚೈತ್ರ ವೈಶಾಖ ತಡೆಯಲಾರೆ ಈ ಶಾಖ। ಜ್ಯೇಷ್ಠ ಆಷಾಢ ಗಾಳಿ ಜೊತೆಗೆ ಮೋಡ। ಶ್ರಾವಣ ಭಾದ್ರಪದ ಮಳೆಸುರಿದು

ಆಮೋದ। ಆಶ್ವಯುಜ ಕಾರ್ತೀಕ ಪಟಾಕಿ ಹಬ್ಬ ಬಂತೀಗ। ಮಾರ್ಗಶಿರ ಪುಷ್ಯ ಚಳಿಚಳಿ ಸಧ್ಯ। ಮಾಘ ಫಾಲ್ಗುಣ ಶಿವರಾತ್ರಿ ಜಾಗರಣ। ಋತು ಚಕ್ರ ಉರುಳಿತ್ತು ಹೊಸ ಯುಗಾದಿ ಬಂದಿತ್ತು॥

ಚೈತ್ರ ವೈಶಾಖ ವಸಂತಋತು

ಚೈತ್ರ ವೈಶಾಖ ವಸಂತ ಋತು। ಹೂಗಳು ಅರಳಿ ನಗುವ ಋತು॥ ಜೇಷ್ಠ ಆಷಾಢ ಗ್ರೀಷ್ಮ ಋತು। ಬಿಸಿಲಿನ ಬೇಗೆಯಲಿ ಬರುವ ಋತು॥ ಶ್ರಾವಣ ಭಾದ್ರಪದ ವರ್ಷಋತು। ಮಳೆ ಮೋಡಗಳು ಸುರಿವ ಋತು॥ ಆಶ್ವಿಜ ಕಾರ್ತೀಕ ಶರದೃತು। ತಿಂಡಿಹಬ್ಬಗಳ ಖುಷಿಯ ಋತು॥ ಮಾರ್ಗಶಿರ ಪುಷ್ಯಗಳ ಹೇಮಂತ ಋತು। ಗಡಗಡ ನಡುಗುವ ಚಳಿಯ ಋತು॥ ಮಾಘ ಫಾಲ್ಗುಣ ಶಿಶಿರ ಋತು। ಮರದೆಲೆ ಉದುರುವ ಕಾಲ ಋತು॥

ವರ್ಷಕ್ಕೆ ಆರೇ ಆರು ಋತುಗಳು

ಚೈತ್ರ ವೈಶಾಖ ವಸಂತ ಋತು। ಜ್ಯೇಷ್ಠ ಆಶಾಢವು ಗ್ರೀಷ್ಮ ಋತು। ಶ್ರಾವಣ ಭಾದ್ರಪದ ವರ್ಷಋತು। ಆಶ್ವೀಜ ಕಾರ್ತೀಕ ಶರದ್ ಋತು। ಮಾರ್ಗಶಿರ ಪುಷ್ಯವು ಹೇಮಂತ ಋತು। ಮಾಘ ಫಾಲ್ಗುಣಗಳು ಶಿಶಿರ ಋತು। ತಿಂಗಳು ಎರಡಕೆ ಒಂದು ಋತು ವರ್ಷಕೆ ಆರೇ ಆರು ಋತು॥

ವರ್ಷಕೆ ಋತುಗಳು ಆರು

ವರ್ಷಕೆ ಋತುಗಳು ಆರು। ಋತುಗಳ ರಾಜ ವಸಂತ॥ಪ॥ ಗ್ರೀಷ್ಮ ವರ್ಷ ಬಂದರು। ನಮಗೆ ಕೊಡೆಯನು ಹಿಡಿಸಿದರು। ಗಂಗೆ ತುಂಗೆ ಹರಿಸಿದರು। ಭೂಮಿತಾಯಿಯ ತಣಿಸಿದರು॥1॥ ಶರದ್ ಹೇಮಂತ ಬಂದರು। ಎಲ್ಲೆಡೆ ಚಳಿಯನು ಚೆಲ್ಲಿದರು। ಅಜ್ಜಿಗೆ ಕಂಬಳಿ ಹೊದಿಸಿದರು। ಹಚ್ಚನೆ ಹಸಿರು ಹರಡಿದರು॥2॥ ವಸಂತ ಶಿಶಿರ ಬಂದರು। ವನವೆಲ್ಲ ಚಿಗುರಿಸಿ। ಹೂವೆಲ್ಲ ಅರಳಿಸಿ। ಎಲ್ಲೆಡೆ ಕಂಪನು ಸೂಸಿದರು॥3॥

ಶಿಶುಸಾಹಿತ್ಯ

ಅಜ್ಜನ ಕೋಲಿದು ನನ್ನಯ — ರಾಗ: ಶುದ್ಧಸಾವೇರಿ

ಅಜ್ಜನ ಕೋಲಿದು ನನ್ನಯ ಕುದುರೆ। ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ॥ಪ॥ ಕಾಲಿಲ್ಲದೆಯೇ ನಡೆಯುವ ಕುದುರೆ। ಕೂಳಿಲ್ಲದೆಯೇ ಬದುಕುವ ಕುದುರೆ। ನಾಲನು ಬಡಿಸದ ಜೂಲವ ಹೊದಿಸದ ಲಾಲನೆ ಪಾಲನೆ ಬಯಸದ ಕುದುರೆ। ಅಜ್ಜನ ಕೋಲಿದು ನನ್ನಯ ಕುದುರೆ॥1॥ ಚಂದಪ್ಪನಿಗೆ ಚಿಗರೆಯ ಕುದುರೆ। ಮಾದೇವನಿಗೆ ನಂದಿಯೆ ಕುದುರೆ। ರಾಮಚಂದ್ರನಿಗೆ ಹನುಮನೆ ಕುದುರೆ। ಹೊಟ್ಟೆಯ ಗಣಪಗೆ ಇಲಿಯೆ ಕುದುರೆ। ಅಜ್ಜನ ಕೋಲಿದು ನನ್ನಯ ಕುದುರೆ॥2॥ ನಿಂತರೆ ನಿಲ್ಲುವ ಒಳ್ಳೆಯ ಕುದುರೆ। ಓಡಿದರೋಡುವ ನನ್ನಿಯ ಕುದುರೆ। ಕಾಡದ ಬೇಡದ ಕರುಳಿನ ಕುದುರೆ। ನೋಡಲು ಬಿಡದಿಹ ಚೆತ್ತದ ಕುದುರೆ। ಅಜ್ಜನ ಕೋಲಿದು ನನ್ನಯ ಕುದುರೆ।3॥ ಅರಬರ ದೇಶದಿ ದೊರೆಯದ ಕುದುರೆ। ಕಾಠೇವಾಡದಿ ಕಾಣದ ಕುದುರೆ। ಅರಸು ಮಕ್ಕಳಿಗೂ ಸಿಕ್ಕದ ಕುದುರೆ। ನನಗೇ ಸಿಕ್ಕಿದೆ ನನ್ನೀ ಕುದುರೆ।॥4॥

ಅಜ್ಜಿ ಅಜ್ಜಿ ನಮ್ಮಜ್ಜಿ ಉಪ್ಪು ಮೆಣಸು

ಅಜ್ಜಿ ಅಜ್ಜಿ ನಮ್ಮಜ್ಜಿ ಉಪ್ಪು ಮೆಣಸು ಜಜ್ಜೀ। ಮಾಡಿದಳೊಂದು ಬಜ್ಜೀ॥ ಊಟಕೆ ಕರೆದಳು ನಮ್ಮಜ್ಜೀ। ಎದ್ದೆ ನಾನು ಕಣ್ಣುಜ್ಜೀ। ।1॥ಮುಖವನು ತೊಳೆದೆನು ಹಲ್ಲುಜ್ಜೀ। ಸ್ನಾನವ ಮಾಡಿದೆ ಮೈಯುಜ್ಜೀ। ಊಟಕೆ ಕುಳಿತು ನೆಕ್ಕುತ ಬಜ್ಜೀ। ವಾ ವ್ ಅಜ್ಜಿ ರುಚಿ ಬಜ್ಜಿ॥2॥

ಅಣ್ಣಾ ರಜೆಯಲಿ ಮರೆಯದೆ (ಪತ್ರ)

ಅಣ್ಣಾ ಅಣ್ಣಾ ರಜೆಯಲಿ ಮರೆಯದೆ ಊರಿಗೆ ಬಾರಣ್ಣ। ಬರುತಲಿ ನಿನ್ನಯ ಪ್ರೀತಿಯ ತಂಗಿಗೆ ಉಡುಗೊರೆ ತಾರಣ್ಣ। ಪೌಡರ್ ಶಾಂಪೂ ಬಣ್ಣದ ಬಳೆಗಳು ಬೇಕೇ ಬೇಕಣ್ಣ। ಚಕ್ಕುಲಿ ಚೂಡ ರುಚಿಕರ ಪೇಡ ತಂದರೆ ಸಾಕಣ್ಣ। ಸಮಯವ ಕಳೆಯಲು ಕಥೆಗಳ ಪುಸ್ತಕ ತರುವೆಯ ಏನಣ್ಣ। ಅನುದಿನ ನಿನ್ನಯ ದಾರಿಯ ಕಾಯುವೆ ಮರೆಯಲು ಬೇಡಣ್ಣ॥

ಅಂಚೆಯ ಅಣ್ಣ ಬಂದಿಹೆ ಚಿಣ್ಣ ರಾಗ:ಶುದ್ಧಸಾವೇರಿ

ಅಂಚೆಯ ಅಣ್ಣ ಬಂದಿಹೆ ಚಿಣ್ಣ। ಅಂಚೆಯ ಹಂಚಲು ಮನೆಮನೆಗೆ॥ ಸಾವಿರ ಸುದ್ದಿಯ ಬೀರುತ ಬರುವೆನು। ತುಂಬಿದ ಚೀಲವು ಹೆಗಲೊಳಗೆ॥1॥ ಬಾಗಿಲ ತಟ್ಟಿ ಚಿಲಕವ ಕುಟ್ಟಿ। ಸದ್ದನು ಮಾಡುತ ಕರೆಯುವೆನು॥ ಕಾಗದ ಬಂದಿದೆ ಬೇಗದಿ ಬನ್ನಿರಿ। ಕಾಗದಕೊಳ್ಳಿರಿ ಎನ್ನುವೆನು॥2॥ ಕಾಗದವಿದೆಯೇ ಕಾಗದವೆಂದು। ಮಕ್ಕಳು ಕೇಳಲು ಬಾಯ್‌ತುಂಬ॥ ಕೊರಳಿನ ಚೀಲದಿ ಬೆರಳುಗಳಾಡಿಸಿ। ಹಿರಿವೆನು ಓಲೆಯ ಕೈತುಂಬ॥3॥ ಕಾಗದ ಹೊರಳಿಸಿ ಕಣ್ಣುಗಳರಳಿಸಿ। ವೇಗದಿ ಹೆಸರುಗಳೋದುವೆನು॥ ಗಂಟನು ಕಟ್ಟಿ ಗಲ್ಲವ ತಟ್ಟಿ। ಕಾಗದವಿದೆಕೋ ಎನ್ನುವೆನು॥4॥

ಇದ್ದರೆ ಶಾಲೆಗೆ ನಿತ್ಯವೂ ರಜಾ

ಇದ್ದರೆ ಶಾಲೆಗೆ ನಿತ್ಯವೂ ರಜಾ। ಮಕ್ಕಳಿಗೆಲ್ಲಾ ಮಜವೋ ಮಜಾ॥ಪ॥ ಬೆಳಗಾಯಿತೆಂದರೆ ಶಾಲೆಗೆ ಓಟ(2 ಸಾರಿ) ಸಂಜೆಗೆ ಮತ್ತೆ ಟ್ಯೂಷನ್ ಕಾಟ(2ಸಾರಿ)। ರಾತ್ರಿ ಬೆಳಗೂ ಪಾಠವೇ ಪಾಠ। ಸಮಯವೆ ಇಲ್ಲ ಆಡಲು ಆಟ॥1॥ ಬಿಳಿಯ ಶೂಸಿಗೆ ಹಚ್ಚಬೇಕು ಪಾಲಿಶ್। ಕರಿಯ ಶೂಸಿಗೆ ಮಾಡ್ಬೇಕ್ ಮಾಲಿಶ್। ಬಟ್ಟೆಗಳನೊಗೆದೊಗೆದು ಇಸ್ತ್ರೀ। ಯಾರಿಗೆ ಬೇಕು ಈಪಾಟಿ ಶಿಸ್ತು॥2॥ Maths ಅನ್ನು ಕಲಿಯೋದು ತುಂಬಾ ಕಷ್ಟ ಮಗ್ಗೀಯ ಹೇಳೋದು ಮತ್ತಷ್ಟು ಕಷ್ಟ। ವಿಜ್ಞಾನದಲ್ಲಿ ವಿನೋದವಿಲ್ಲ। ಅಜ್ಞಾನದಲ್ಲೇ ಆನಂದವೆಲ್ಲ॥3॥ English ಶು ಗಿಂಗ್ಲೀಶು ಬರಿಯಾ ಬುರ್ನಾಸು। Telling the spelling ಗು ವಿಪರೀತ ತ್ರಾಸು। ಕನ್ನಡದಲ್ಲಂತು ಆಗದಿದ್ದರೆ ಪಾಸು। ಆದಾಗಿ ನಾವು ಹೋಪ್ಲೆಸ್ ಕೇಸು॥4॥ ದಿನವೂನು ಓದ್ಬೇಕು ಪುಟಗಟ್ಟಲೆ History। ಉಪಯೋಗ ಏನೂಂತ ನಮಗಂತು Mistary। ಯಾಕಾದ್ರೂ ಹುಟ್ಟಿತೋ ಈ ನಮ್ಮ ಭೂಗೋಳ॥5॥

ಉದಯರವಿ ಬಂದನು ರಾಗ:ಭೌಳಿ

ಉದಯರವಿ ಬಂದನು। ಬೆಳಕು ನಮಗೆ ತಂದನು। ಉದಯವಾಯಿತಿನ್ನು ಬೇಗ। ಏಳಿರೆಲ್ಲ ಎಂದನು॥1॥ ದಿನಾ ರವಿಯು ಬರುವನು। ಇದೇ ನುಡಿಯ ನುಡಿವನು। ಲೋಕಕೆಲ್ಲ ಬೆಳಕು ನೀಡಿ। ನಗುನಗುತ್ತ ದುಡಿವನು॥2॥ ನಾವು ಬೇಗ ಏಳುವ। ಎದ್ದು ಮುಖವ ತೊಳೆಯುವ। ಬೆಳಕು ಕೊಡುವ ರವಿಗೆ ನಮಿಸಿ। ಪಾಠವನ್ನು ಕಲಿಯುವ॥3॥

ಉಂಡಾಡಿ ಗುಂಡ

ಉಂಡಾಡಿ ಗುಂಡ। ಮದ್ವೆ ಮನೆಗ್ಹೋದ। ಹತ್ತು ಲಾಡು ತಿಂದ। ಇನ್ನೂಬೇಕು ಎಂದ। ಹೊಟ್ಟೆ ನೋವು ಅಂದ। ಅಮ್ಮ ಬೆಣ್ಣೆ ತಂದರು। ಅಪ್ಪದೊಣ್ಣೆ ತಂದರು। ಕ್ರಿಕಟ್ ಬಾಯ್ಮುಚ್ಚ್॥

ಕಲ್ಯಾಣಸೇವೆ ಜೇಬಿನ ಬುಡದಲಿ ರಾಗ:ಕುರಂಜಿ

ಕಲ್ಯಾಣಸೇವೆ ಜೇಬಿನ ಬುಡದಲಿ। ಪುಟ್ಟಾಣಿಯ ಪುರಿ ಮೇಲೊಂದಿಷ್ಟು। ಗೋಲಿ ಬಳಪ ಮತ್ತೊಂದಿಷ್ಟು। ಬಂದ ಬಂದ ಸಣ್ಣತಮ್ಮಣ್ಣ॥1॥ ಪಠಾಸು ಪೆಟ್ಲು ಒಳಜೇಬಲ್ಲಿ। ಕಾಸಿನ ಸಾಲು ಕಳ್ಳ ಜೇಬಲ್ಲಿ। ಚೆಂಡು ದಾಂಡು ಎಡಬಲದಲ್ಲಿ। ಬಂದ, ಬಂದ ಸಂಣ್ಣತಮ್ಮಣ್ಣ॥2॥ ಅಮ್ಮನ ಹಾರ ಉಬ್ಬಿದ ಎದೆಗೆ। ಬಿದಿರಿನ ಕೊಳಲು ಗೆಜ್ಜೆಯೊಳಗೆ। ಹದ್ದಿನ ರೆಕ್ಕೆ ಎತ್ತಿದ ತಲೆಗೆ। ಬಂದ, ಬಂದ, ಸಣ್ಣ ತಮ್ಮಣ್ಣ॥3॥ ಕತ್ತುರಿ ಚಂದ್ರ ಹಣೆಯಲ್ಲಿಹುದು।

ಸಂಜೆಯ ಶುಕ್ರ ಕಣ್ಣಲ್ಲಿಹುದು। ಬೆಳುಬೆಳ್ದಿಂಗಳು ಗಲ್ಲದ ಮೇಲೆ। ಬಂದ ಬಂದ ಸಂಣ್ಣತಮ್ಮಣ್ಣ॥4॥ ಮೊದಲನೆ ಮಾತು ಹೂವಿನ ಮುತ್ತು। ಮರು ಮಾತಾಡಲು ಸಿಡಿಲು ಗುಡುಗು। ಮೂರನೆ ಬಾರಿಗೆ ಆನೆಯ ಕಲ್ಮಳೆ। ಬಂದ, ಬಂದ, ಸಣ್ಣತಮ್ಮಣ್ಣ॥5॥ ಬಾರೋ ಬಾರೋ ಸಿಡಿಲಿನ ಮರಿಯೆ। ಬಾರೋ ನಾಡಿನ ಸುಂಟರಗಾಳಿ। ತೋರೋ ಸಿರಿಮೊಗ ತುಂಟರ ಗುರುವೆ॥ ಬಂದ, ಬಂದ, ಸಂಣ್ಣತಮ್ಮಣ್ಣ॥5॥

ಕಾಯಿ ಅಂಗಡಿ ಪಾಪಣ್ಣ

ಕಾಯಿ ಅಂಗಡಿ ಪಾಪಣ್ಣ। ಕಾಲು ಉಳುಕಿದೆ ನೋಡಣ್ಣ। ಎಣ್ಣೆ ಹಚ್ಚಿ ನೀವಣ್ಣ। ಲಟ ಲಟ ನಟಿಕೆ ಮುರಿಯಣ್ಣ॥

ಕಾಯಿ ಕಾಯಿ ಮೆಣಸಿನಕಾಯಿ ಚಿಕ್ಕದು — ರಾಗ:ಪುನ್ನಾಗವರಾಳಿ

ಕಾಯಿ ಕಾಯಿ ಮೆಣಸಿನಕಾಯಿ। ಚಿಕ್ಕದು ಕಾಯಿ ಪುಟ್ಟದು ಕಾಯಿ। ಸಾರಿಗೆ ಹಾಕುವ ಮೆಣಸಿನ ಕಾಯಿ। ಚಪ್ಪರಿಸುತ್ತಾ ತಿನ್ನುವ ಕಾಯಿ। ಉಪ್ಪಿನಕಾಯಿಗೆ ಬೆರೆಸುವ ಕಾಯಿ। ನಮಗೂ ಬೇಕು ನಿಮಗೂ ಬೇಕು। ಮೆಣಸಿನಕಾಯಿ॥

ಕಾಯಿ ಕಾಯಿ ಮೆಣಸಿನಕಾಯಿ ಸಾರಿಗೆ — ರಾಗ:ಪುನ್ನಾಗವರಾಳಿ

ಕಾಯಿ ಕಾಯಿ ಮೆಣಸಿನಕಾಯಿ। ಸಾರಿಗೆ ಹಾಕುವ ಮೆಣಸಿನ ಕಾಯಿ। ಸಣ್ಣದು ಕಾಯಿ ದೊಡ್ಡದು ಕಾಯಿ। ಉದ್ದದು ಕಾಯಿ ಮೆಣಸಿನ ಕಾಯಿ॥1॥ ಹಸಿಯಲಿ ಅದು ಹಸಿರು ಕಾಯಿ। ಒಣಗಿದ ಮೇಲೆ ಕೆಂಪದು ಕಾಯಿ। ಬಾಯಲಿ ನೀರು ಸುರಿಸುವ ಕಾಯಿ। ಕಣ್ಣಲಿ ನೀರು ತರಿಸುವ ಕಾಯಿ॥2॥ ಬಹಳ ಖಾರ ಮೆಣಸಿನಕಾಯಿ। ಉರಿಮುಖದ ಮೆಣಸಿನ ಕಾಯಿ। ಉಪ್ಪಿನ ಕಾಯಿಗೆ ಬೆರೆಸುವ ಕಾಯಿ। ಚಪ್ಪರಿಸುತ್ತಾ ತಿನ್ನುವ ಕಾಯಿ॥3॥ ನಡೆಯದು ಇಲ್ಲದೆ ಮೆಣಸಿನ ಕಾಯಿ। ಸುದ್ದಿಯ ಕಾಯಿ ಎಲ್ಲರ ಮನೆಯ ಮೆಣಸಿನ ಕಾಯಿ॥4॥

ಕಾಸಿಗೆ ಎರಡು ಕೋಳೀಮರಿ — ರಾಗ:ಶಂಕರಾಭರಣ

ಕಾಸಿಗೆ ಎರಡು ಕೋಳೀಮರಿ। ತಂದಿದ್ದು ನಾನೇನೇ॥ಪ॥ ಬುಟ್ಟೀಲಿ ಹಾಕಿ ನೀರ್ ಕುಡಿಸ್ದೆ ಗಂಗಾಸ್ನಾನವನು ಮಾಡಿಕೊಂಡೆ। ಮಾಡಿಕೊಂಡೆ ಎನ್ನುತ್ತೆ ಕೋಳೀಮರಿ। ತಂದಿದ್ದು ನಾನೇನೇ॥1॥ ರೆಕ್ಕೆಗಳೆರಡೂ ಕಿತ್ತುಬಿಟ್ಟೇನೇ। ಶುದ್ಧಾಮ ಕ್ಷೌರವನ್ನು ಮಾಡಿಕೊಂಡೆ। ಮಾಡಿಕೊಂಡೆ ಎನ್ನುತ್ತೆ ಕೋಳೀಮರಿ। ತಂದದ್ದು ನಾನೇನೇ॥2॥ ಬಾಣಲೇಲಿ ಹಾಕಿ ಹುರಿದು ಬಿಟ್ಟೆ। ಮೈಗೆಲ್ಲಾ ಎಣ್ಣೆಯನು ಸವರಿಕೊಂಡೆ। ಸವರಿಕೊಂಡೆ ಎನ್ನುತ್ತೆ ಕೋಳೀಮರಿ। ತಂದಿದ್ದು ನಾನೇನೇ॥3॥ ಬಾಯಲಿ ಹಾಕಿ ನುಂಗಿಬಿಟ್ಟೆ। ವೈಕುಂಠಲೋಕವನ್ನು ಪಡೆದುಬಿಟ್ಟೆ ಪಡೆದುಬಿಟ್ಟೆ ಎನ್ನುತ್ತೆ ಕೋಳೀಮರಿ। ತಂದಿದ್ದು ನಾನೇನೇ॥4॥

ಕಿನ್ನರಿ ಕಿನ್ನರಿ ಚಿನ್ನಾರಿ ನನ್ನಯ

ಕಿನ್ನರಿ ಕಿನ್ನರಿ ಚಿನ್ನಾರಿ। ನನ್ನಯ ಮುದ್ದು ಬಂಗಾರಿ। ಆಡೋಣ ಬಾರೆ ವಯ್ಯಾರಿ॥ಪ॥ ನನ್ನಯ ಲಂಗ ಜರತಾರಿ॥ ಹೂಗಳ ಬನಕೆ ಹೋಗೋಣ। ದುಂಬಿಯ ಹಾಗೆ ಹಾರೋಣ॥3ಸಲ॥ ಹೂವಿನ ಮಧುವ ಹೀರೋಣ॥1॥ ಹಣ್ಗಳ ಬನಕೆ ಹೋಗೋಣ। ಗಿಳಿಯ ಹಾಗೆ ಹಾರೋಣ॥3ಸಲ॥ ಹಣ್ಗಳ ಬನಕೆ ಹೋಗೊಣ। ಹಣ್ಗಳ ಕುಕ್ಕಿ ತಿನ್ನೋಣ॥2॥ ಹಣ್ಗಳ ಸವಿಯ ಸವಿಯೋಣ॥ ಕಾಡೀನ ಒಳಗೆ ಹೋಗೋಣ। ಕಾಡಿನ ಚಂದವ ಕಾಣೋಣ। ಜಿಂಕೆಯಹಾಗೆ ನೆಗೆಯೋಣ। ಜಿಂಕೆಯ ಅಂದವ ನೋಡೋಣ॥3॥

ಕಿಲಾಡಿ ಕಿಟ್ಟ ಬಲಗೈ

ಕಿಲಾಡಿ ಕಿಟ್ಟ ಬಲಗೈ ಸೊಟ್ಟ। ಶಾಲೆ ಬಿಟ್ಟ ಚಕ್ಕರ್ ಕೊಟ್ಟ। ಅವನಿಗೆತಾನೇ ನಷ್ಟ॥

ಕುಟ್ಟಿ ಕುಟ್ಟಿ ಸಾಕಾಯ್ತು ತಟ್ಟಿ2 ಸಾಕಾಯ್ತು

ಕುಟ್ಟಿ ಕುಟ್ಟಿ ಸಾಕಾಯ್ತು। ತಟ್ಟಿ ತಟ್ಟಿ ಸಾಕಾಯ್ತು। ಕೇರಿ ಕೇರಿ ಸಾಕಾಯ್ತು।। ಬತ್ತ ಕುಟ್ಟಿ ಕುಟ್ಟಿ ಸಾಕಾಯ್ತು। ರೊಟ್ಟಿ ತಟ್ಟಿ ತಟ್ಟಿಸಾಕಾಯ್ತು। ಅಕ್ಕಿ ಕೇರಿ ಕೇರಿ ಸಾಕಾಯ್ತು।।1।। ಬಡಿದು ಬಡಿದು ಸಾಕಾಯ್ತು। ಹೊತ್ತು ಹೊತ್ತು ಸಾಕಾಯ್ತು।। ಗುಡ್ಸಿ ಗುಡ್ಸಿ ಸಾಕಾಯ್ತು। ಬಟ್ಟೆ ಬಡಿದು ಬಡಿದು ಸಾಕಾಯ್ತು। ನೀರು ಹೊತ್ತು ಹೊತ್ತು ಸಾಕಾಯ್ತು। ಕಸ ಗುಡ್ಸಿ ಗುಡ್ಸಿ ಸಾಕಾಯ್ತು।।2।।

ಕೋಳಿ ಕೂಗಿತೇಳು ಕಂದ

ಕೋಳಿ ಕೂಗಿತೇಳು ಕಂದ। ಸೂರ್ಯ ಪೂರ್ವದಲ್ಲಿ ಬಂದ। ಹೆಚ್ಚು ಮಲಗಲೇನು ಚೆಂದ। ಬಾ ಕಂದ ಬಾ ಕಂದ ಬಾ।।

ಗಾಜಿನ ಗೊಂಬೆ ಬೇಕೆ — ರಾಗ:ಕುರಂಜಿ

ಗಾಜಿನ ಗೊಂಬೆ ಬೇಕೆ ಎನುತ। ಕೂಗುತ ಬಂದಳು ನಿಂಗವ್ವ। ಪುಟ್ಟ ಪಾಪುಗೆ ಬೇಕು ಎಂದು। ಕರೆದೆನು ನಾನು ತಂಗ್ಯವ್ವ।।1।। ನೀಲಿ ಲಂಗ ಕೆಂಪು ಜಂಪರ್ ಹಾಕಿರುವ ಪುಟ್ಟ ಪುಟ್ಟಾಣಿ ಗೊಂಬೆ। ಬಿಸಿಲಲಿ ಕುಳಿತು ಪಳಪಳ ಎಂದು ಹೊಳೆಯುತ ಕುಳಿತಿತು ಆ ಗೊಂಬೆ।।2।। ಗೊಂಬೆಯ ಮೂತಿ ಸೊಟ್ಟಗೆಂದು। ಕಲ್ಲಿಗೆ ಕುಟ್ಟಿ ಸರಿ ಮಾಡಲೆಂದು। ಒಂದೇ ಏಟಿಗೆ ಗಾಜಿನ ಗೊಂಬೆ ಪುಡಿ ಪುಡಿಯಾಯಿತು ಪಳಪಳ ಎಂದು।।3।।

ಗಿರಿಗೆ ಹೋಗೋ ಗಿರಿ

ಗಿರಿಗೆ ಹೋಗೋ ಗಿರಿ। ಮಾಡಿದ್ದಕ್ಕಿ ತರಿ। ಮೆಣಸಿನಕಾಯಿ ಮುರಿ। ತೆಂಗಿನಕಾಯಿ ತುರಿ। ಎಲ್ಲಾ ಬಾಂಡ್ಲೆಗೆ ಸುರಿ। ಉಪ್ಪಿಟ್ಮಾಡೋದ್ ಗುರಿ। ಉಪ್ಪಾಕೋದ್ ಮರಿ। ನೀ ಮಾಡಿದ್ದೇ ಸರಿ।।

ಗುಡುಗು ಬಡಿಯಿತು

ಗುಡುಗು ಬಡಿಯಿತು। ಮೋಡ ಮುಸುಕಿತು। ಕತ್ತಲಾಯಿತು ಸುತ್ತಲು। ಗಿಡವು ಕಿತ್ತಿತು ಮರವು ಬಾಗಿತು। ಸೋಗೆ ಜಾರಿತು ಎತ್ತಲು।।1।। ಗಾಳಿ ಎಳೆಯಿತು ಕೊಡೆಯು ತಪ್ಪಿತು। ಕಡ್ಡಿ ಕೆಲವದೊ ಮುರಿಯಿತು। ಧೂಳು ಮುಸುಕಿತು ಎಲೆಗಳುದುರಿತು। ದನಗಳೋಟವು ಕಂಡಿತು।।2।। ಸಿಡಿಲ ಬಡಿತಕೆ ಉರಿದು ಹೋಯಿತು। ಎಷ್ಟೋ ತೆಂಗಿನ ಮರಗಳು। ಕಡಿದ ತೆರದೊಳು ಮುರಿಯಿತೆಷ್ಟೊ। ಅಡಿಕೆ ತೋಟದ ಗಿಡಗಳು।।3।। ಏನು ಅಬ್ಬರ ಏನು ಕಂಪನ। ಏನು ಗಾಳಿಯ ಶಕ್ತಿಯೋ। ಏನು ಎಲ್ಲವ ಮುತ್ತುವಂತಿದೆ। ಯಾವುದಿವುಗಳ ಧ್ಯೇಯವೊ।।4।। ಮೇಲು ಮೇಲಕ್ಕೆ ಏರಿ ಹೋದವು। ಕಪ್ಪುಬಣ್ಣದ ಮೋಡಗಳ್। ಎಲ್ಲಿ ನಿಂತಿರಲಲ್ಲಿ ಬೀಳುವೆವೆಂಬ। ಸಿಡಿಲಿನ ಮಿಂಚುಗಳ್।।5।। ಭಾನುದೇವನ ಭಾವಮೈದುನ। ಗಾಳಿ ಸಿಡಿಲನು ಓಡಿಸೆ। ತಾಣ ಭೂತಳದೆಲ್ಲ ಕಡೆಯೊಳು ನೀರಿನೋಕುಳಿ ಹರಿಯಿಸೆ। ಕತ್ತಲೋಡಿತು ಬೆಳಕು ಹರಿಯಿತು।।6।। ಮುಗಿಲ ಮಲ್ಲಿಗೆ ಅರಳಿತು। ಮತ್ತೆ ತಂಪಿನ ಗಾಳಿ ಬೀಸಲು। ನೀರು ಧರೆಯನು ಸೇರಿತು।।7।।

ಚಕಚಕ ಚುಕ್ಕಿ

ಚಕಚಕ ಚುಕ್ಕಿ। ಹೊಳೆಯುವ ಹಕ್ಕಿ। ಮುಗಿಲಿನ ತುಂಬ ಹರಡಿವೆ ಮಿಕ್ಕಿ। ಹಗಲನು ಕಳೆದು ಇರುಳದು ಬರಲು। ಲಕಲಕ ಹೊಳೆದಿವೆ ಬಾನೊಳು ಚುಕ್ಕಿ।। ಸೂರ್ಯನ ಬಂಟರು। ಚಂದ್ರನ ನೆಂಟರು। ಬಾನಿನ ಬಯಲಲಿ ಆಡುವ ತುಂಟರು। ಗುಡುಗು-ಮಿಂಚು। ಸಿಡಿಲು ಬಂದರೂ। ಅಂಜದ ಅಳುಕದ ಪಂಜಿನ ವೀರರು।।2।। ಮೋಡದ ನಡುವೆ ಆಡುವ ಆಟ। ನೋಡುವ ಕಣ್ಣಿಗೆ ಸುಂದರ ನೋಟ। ಗಗನದ ಗುಡಿಗೆ ತೋರಣ ಕಟ್ಟಿ। ಮಾಡುವ ಮಾಟ ಚೆಂದದ ಪೇಟ।।3।।

ಚಳಿಯಪ್ಪ ಚಳಿಯೋ

ಚಳಿಯಪ್ಪ ಚಳಿಯೋ ಚಳಿಯಮ್ಮ ಚಳಿಯೋ। ಶಾಲು ಹೊದ್ಕೊಂಡೆ ಕಂಬ್ಳಿ ಹೊದ್ಕೊಂಡೆ। ದುಪ್ಟಿ ಹೊದ್ಕೊಂಡೆ। ಚಳಿಯಪ್ಪ ಹೋಗ್ಲೇಇಲ್ಲ।। ಬಿಸಿಬಿಸಿ ಕಾಫಿ ಮಾಡಿ ಗಟಗಟ ಅಂತ। ಒಂದ್ಲೋಟ ಕಾಫಿ ಕುಡ್ದೆ ಚಳಿಯಪ್ಪ ಓಡ್ಹೋದ।।

ಚುಕ್ಕು ಬುಕ್ಕು ರೈಲು ಬಂತು

ಚುಕ್ಕು ಬುಕ್ಕು ರೈಲು ಬಂತು। ಹೊಳೆಯ ದಡದಲಿ ಆನೆಯ ಹಿಂಡು। ಓಡುವ ಗಿಡಮರ ನೋಡೋಣ। ಮಾವನ ಊರಿಗೆ ಹೋಗೋಣ।।1।। ನನ್ನ ಅತ್ತೆ ಬಲುಜಾಣೆ। ದಿನಾಲು ಚಪಾತಿ ಸೀಕರಣೆ। ಚಪಾತಿ ಸೀಕರಣೆ ತಿನ್ನೋಣ ಮಾವನ ಊರಿಗೆ ಹೋಗೋಣ।।2।।ನನ್ನ ಮಾವ ಬಲು ಜೋರು। ಕೊಡಿಸುವರೊಂದು ಸೈಕಲ್ಲು। ಸೈಕಲ್ ಸವಾರಿ ಮಾಡೋಣ। ಮಾವನ ಊರಿಗೆ ಹೋಗೋಣ।।3।।

ಚಂದ್ರ ನೋಡಿ ನಕ್ಕ ಅಂತ

ಚಂದ್ರ ನೋಡಿ ನಕ್ಕ ಅಂತ। ಯಾಕೀಷ್ಟೊಂದು ಕೋಪ। ಚಂದ್ರನ ಹಲ್ಲು ಮುರಿಯೋದು ಬಿಟ್ಟು। ನಿನ್ನ ಹಲ್ಲ ಮುರ್ದ್ಯ್ಬೆಪ್ಪ।। ಚೌತಿದಿನ ಚಕ್ಲಿ ಕಡುಬು। ತಿಂದ ಹಿಗ್ಗು ನಮಗೂ। ಹಲ್ಲಿಲ್ವಲ್ಲ ಹೇಗೂ ನಿಂಗು। ಮೂಲೇಲಿ ಸುಮ್ನೆ ಕೂತ್ಕೋ।।

ಜನರ ಗುಂಪು ಸೇರಿತು

ಜನರ ಗುಂಪು ಸೇರಿತು। ಕೋತಿ ಚಟ್ಟ ಏರಿತು। ಕಾಸು ರಾಶಿ ಬಿದ್ದಿತು। ಚಟ್ಟ ಮುಂದೆ ಸಾಗಿತು।।1।। ಪೂಜೆ ಬಹಳ ನಡೆಯಿತು। ಕೋತಿ ಮಣ್ಣು ಸೇರಿತು। ಕಲ್ಲು ರೂಪ ತಾಳಿತು। ಭದ್ರ ಗುಡಿಯ ಸೇರಿತು।।2।। ಭಕ್ತವೃಂದ ಬೆಳೆಯಿತು। ಸುದೀರ್ಘ ಸೇವೆ ಸಂದಿತು। ಧೂಪದೀಪ ಬೆಳಗಿತು। ನಿತ್ಯ ಪೂಜೆ ನಡೆಯಿತು।।3।। ಕೋತಿ ಅದನು ಹೊಂದಿತು। ಹನುಮನಾಗಿ ಮೆರೆಯಿತು। ಹಣ್ಣು ರಾಶಿ ಕಂಡಿತು। ಮೂಕನಾಗಿ ನಿಂತಿತು।।4।।

ಪುಟ್ಟಲಕ್ಷ್ಮಿ ಬಟ್ಟಲಲ್ಲಿ

ಪುಟ್ಟ ಲಕ್ಷ್ಮಿ ಬಟ್ಟಲಲ್ಲಿ ಬೆಣ್ಣೆ ಇಟ್ಕೊಂಟು ಕಟ್ಟೆ ಮೇಲೆ ಬೆಟ್ಟು ಚೀಪ್ಕೊಂಡು ತಿನ್ತಾ ಕೂತಿದ್ಲು। ದೊಡ್ಡ ಜೇಡ ಪಕ್ಕದಲ್ಲಿ ಬಂದು ನೋಡಪ್ಪಾ। ಪುಟ್ಟ ಲಕ್ಷ್ಮಿ ಬಟ್ಟಲೆಸೆದು ಓಡಿ ಹೋಗ್ಬಿಟ್ಲು।।

ಬಾರೆ ಮಣಿ ಕೊರಳ ದನಿ

ಬಾರೆ ಮಣಿ ಕೊರಳ ದನಿ।।4 ಸಲ।। ಬಾರೆ ಮಣಿ ಕೊರಳ ದನಿ ಮಾಲೆ ಮಾಡುವ। ಅಂಟು ಅಂಟು ಬೆಂಡೇಕಾಯಿ।।4ಸಲ।। ಅಂಟು ಅಂಟು ಬೆಂಡೇಕಾಯಿ ತಿನ್ನಲೇ ಬೇಕಮ್ಮ।।1।। ಗೀರಿ ಗೀರು ಹೀರೇಕಾಯಿ।।4ಸಲ।। ಗೀರು ಗೀರು ಹೀರೇಕಾಯಿ ತಿನ್ನಲೇ ಬೇಕಮ್ಮ।।2।। ಸೊಗಡು ಸೊಗಡು ಅವರೆಕಾಯಿ।।4ಸಲ।। ಸೊಗಡು ಸೊಗಡು ಅವರೆಕಾಯಿ ತಿನ್ನಲೇ ಬೇಕಮ್ಮ।।3।। ಅಂಕುಡೊಂಕು ಪಡವಲಕಾಯಿ।।4ಸಲ।। ಅಂಕು ಡೊಂಕು ಪಡವಲ ಕಾಯಿ ತಿನ್ನಲೇ ಬೇಕಮ್ಮ।।4।। ಖಾರ ಖಾರ ಮೆಣಸಿನಕಾಯಿ।।4ಸಲ।। ಖಾರ ಖಾರ ಮೆಣಸಿನಕಾಯಿ ತಿನ್ನಲೇ ಬೇಕಮ್ಮ।।5।। ಕೆಂಪು ಕೆಂಪು ಟಮೋಟೋ ಹಣ್ಣು।।4ಸಲ।। ಕೆಂಪು ಕೆಂಪು ಟಮೋಟೋ ಹಣ್ಣು ತಿನ್ನಲೆ ಬೇಕಮ್ಮ।।6।। ಕಹಿ ಕಹಿ ಹಾಗಲಕಾಯಿ।।4ಸಲ।। ಕಹಿ ಕಹಿ ಹಾಗಲಕಾಯಿ ತಿನ್ನಲೇ ಬೇಕಮ್ಮ।।7।।

ಮಾರಿಯ ಜಾತ್ರೆಗೆ ಸೂರಿಯು

ಮಾರಿಯ ಜಾತ್ರೆಗೆ ಸೂರಿಯು ಹೊರಟನು। ಅಜ್ಜನ ಹೆಗಲೇರಿ ಬೆಟ್ಟವ ಹತ್ತಿ ದೇಗುಲಸುತ್ತಿ ಎಳೆದನು ತೇರನು

ಸಡಗರದಿ॥1॥ ಡೋಲಿನ ಬಡಿತವು ನಂದಿಯ ಕುಣಿತವು। ದೊಂಬರ ಆಟವು ಭರ್ಜರಿ ಊಟವು। ತಂದಿತು ಸಂತಸ ಸೂರಿಯ ತನುಮನಕೆ॥2॥ ಅಂಗಡಿ ಸಾಲನು ಕಾಣುತ ಸೂರಿಯು ಹಿಗ್ಗುತ ಮನದಲಿ ಅಜ್ಜನ ಪೀಡಿಸಿ ಹರ್ಷದಿ ಕೊಂಡನು। ಬೇಡಿದುದೆಲ್ಲವನು॥3॥ ಪುರಿಯನು ಮುಕ್ಕುತ। ಪೀಪಿಯ ಊದುತ। ಬೆಟ್ಟವ ಇಳಿದು ದಾರಿಯ ಹಿಡಿದು। ಸೂರಿಯು ಹೊರಟನು ಅಜ್ಜನ ಹೆಗಲೇರಿ॥4॥

ಮೈಸೂರ್ ಜನರಾ ನೋಡಲು ಪುಟ್ಟ

ಮೈಸೂರ್ ಜನರಾ ನೋಡಲು ಪುಟ್ಟ। ತಾತನ ಸಂಗಡ ಹೊರಟಿದ್ದ। ಚಕ್ಕುಲಿ ಚುರುಮುರಿ। ಮಿಠಾಯಿ ತಿಂದು। ಖುಷಿಯಲಿ ತಾ ಕುಣಿದಾಡಿದ್ದ॥1॥ ದೀಪಾಲಂಕೃತ ಅರಮನೆ ಕಂಡು ತನ್ನನ್ನು ತಾನು ಮರೆತಿದ್ದ। ಅರಸರ ಕಾಲದ ವೈಭವವನ್ನು ನೆನಪಿಸಿ ಸಂಭ್ರಮ ಪಟ್ಟಿದ್ದ॥2॥ ಚಂದದ ಚೆಲುವಿನ ರೂಪಕ ಹೊತ್ತು ಬಂದಿತು ಸುಂದರ ಮೆರವಣಿಗೆ। ತಾಳಕೆ ತಕ್ಕ ಹೆಜ್ಜೆಯ ಹಾಕಿತು ಶಿಸ್ತಿನ ಸಿಪಾಯಿಗಳ ನಡಿಗೆ॥3॥ ರಾಜಾರೋಷದಿ ಬಂದಿತು ಆನೆ ಚಿನ್ನದ ಅಂಬಾರಿಯ ಹೊತ್ತು। ಕರಡೀ ಮಜಲು ಕರಡೀ ಮಜಲು ಎಲ್ಲಗರ್ದಿ ಗಮ್ಮತ್ತು॥4॥ ಗೊರವರ ಕುಣಿತ ಡೊಳ್ಳಿನ ಬಡಿತ ಮೈಜುಮ್ಮೆನ್ನುವ ಕಸರತ್ತು। ಸಂಜೆಯ ಹೊತ್ತು ರಂಗೇರಿತ್ತು। ಯುವಕರ ಪಂಜಿನ ಕವಾಯತು॥5॥ ಉತ್ಸವ ಮುಗಿಸಿ ಹೊರಟನು ಪುಟ್ಟ ಸವಿನೆನಪುಗಳನು ಮೆಲ್ಲುತ್ತ। ಪ್ರಶ್ನೆಯ ಮೇಲೆ ಪ್ರಶ್ನೆಯ ಹಾಕಿ ತಾತನ ತಲೆಯನ್ನು ತಿನ್ನುತ್ತ॥6॥

ರವೆಉಂಡೆ ರವೆಉಂಡೆ ಬೀರುವುನಲ್ಲಿ

ರವೆಉಂಡೆ ರವೆಉಂಡೆ। ಬೀರುವಿನಲ್ಲಿ ಕಂಡೆ। ಅಮ್ಮ ಇಲ್ಲ ಅನ್ಕೊಂಡೆ। ಅಪ್ಪ ಇಲ್ಲ ಅನ್ಕೊಂಡೆ॥ ಬಾಯೊಳ್ಗೊಂದು ಹಾಕ್ಕೊಂಡೆ। ಕೈಯಲ್ಲೊಂದು ಇಟ್ಕೊಂಡೆ। ಓಡಿ ಕಾಲು ಮುರ್‍ಕೊಂಡೆ॥

ಚುಟುಕಗಳು

ಪ್ರತಿಯೊಂದು ಮರಬಳ್ಳಿ ಬಿದಿರು ಗಿಡಗಂಟಿ

ಪ್ರತಿಯೊಂದು ಮರಬಳ್ಳಿ ಬಿದಿರು ಗಿಡಗಂಟಿ। ಒಂದಕ್ಕೊಂದನು ತಬ್ಬಿಕೊಂಡಿಹವು ಅಂಟಿ। ಕಟ್ಟಡವಿಯಲ್ಲಿಯು ಬಾಂಧವ್ಯನೀತಿ॥1॥ ಪಟ್ಟಣದೊಳಿಲ್ಲೇಕೆ ಈ ತರದ ಪ್ರೀತಿ। ಅಡಿಕೆ ತೋಟವೆ ಸ್ವರ್ಗಕಿಂತಲೂ ಚಂದ। ಹೀಗೆಂದು ಪದ ಹಾಡಿ ಕವಿ ಕುಳಿತುಕೊಂಡ। ಒಡನೆಯೇ ಒಳನುಗ್ಗಿದವು ಕಾಡಹಂದಿ। ಓಡಿ ಹೋದರು ತೋಟದೊಳಗಿದ್ದ ಮಂದಿ॥2॥ ಪ್ರತಿಯೊಂದು ಮನೆಯೊಳಗೆ ಇರಬೇಕು ಕೂಸು। ಸಂಪೂರ್ಣ ದಿನವಾಗುವುದು ಒಂದು ತಾಸು। ಕೂಸು ಎಂಬುದು ಲೇಸು ಮಾನವನ ಆದಿ। ಭಗವಂತನಿಗೆ ಕೂಡ ಕೂಸೇ ಬುನಾದಿ॥3॥ ಪ್ರತಿಯೊಂದು ಹಾದಿಯಲ್ಲೂ ಉಂಟು ಹಾವು। ಕಚ್ಚಿದರೆ ನಮಗೆ ತಪ್ಪುವುದಿಲ್ಲ ಸಾವು। ಆದರೂ ಬಿಡಬಾರದೆಂದಿಗೂ ಹಾದಿ। ಹಾದಿ ಬಿಟ್ಟರೆ ನಮ್ಮ ಜೀವನ ಸಮಾಧಿ॥4॥

ಜೂಜು ಮಲ್ಲಿಗೆ

ಜೂಜು ಮಲ್ಲಿಗೆ ಜಾಜೀಯ ಸಂಪಿಗೆ। ರಾಜ ತೇಜ ಮಗುವೆ ಎನ್ನ ಗಾಜುಗೊಂಬೆಯೆ। ಹಾಡು ಕೋಗಿಲೆ ನಲಿದಾಡು ಮರಿಯೆ। ಬಳಿಗೆ ಬಾ ಆನೆಮರಿ ರಾಜ ಹಂಸವೆ, ಆಡು ನವಿಲೆ ಕುಣಿದಾಡು ಜಿಂಕೆಯೆ। ಆಡಿ ಆಡಿ ಆಡಿ ಮಲಗು ಪುಟ್ಟ ಕಂದನೆ

ಝುಣ ಝುಣ ಝುಣ ಜೇಬು ತುಂಬ — ರಾಗ: ಆನಂದಭೈರವಿ

ಝುಣ ಝುಣ ಝುಣ। ಜೇಬು ತುಂಬ ಹಣ। ಮೇಲಕೆತ್ತಿ ಬಿಡಲು ಸದ್ದು ಠಣ್ ಠಣಾ ಠಣಾ॥ 1॥॥ ನದಿಯಲೊಂದು ಬಕ। ಮುದುರಿಕೊಂಡು ಮುಖ। ಕಾಲನೆತ್ತಿ ಕುಣಿಯುತ್ತಿತ್ತು ಥಕಾ ಥಕಾ ಥಕಾ॥2॥ ಸುತ್ತ ಹಸಿರು ಬನ ನಡುವೆ ಮೇವ

ದನ। ಮರದ ಬಳಿ ಗೊಲ್ಲನುಲಿ ತಾನನಾನನಾ।।3।।

ಡೊಳ್ಳು ಹೊಟ್ಟೆ ಗುಂಡ

ಡೊಳ್ಳು ಹೊಟ್ಟೆ ಗುಂಡ। ತಿಂಡಿ ತಿನ್ನೋಕ್ ಬಂದ।। ಹಸಿವು ಇಲ್ಲ ನಂಗೆ। ಚೂರೇ ತಿಂತೀನ್ ಅಂದ।।ಪ।। ಒಂದು ತಟ್ಟೆ ಉಪ್ಪಿಟ್ಟು। ಎರಡೇ ನಿಮಿಷ, ಢಂ। ಮೂರೇ ದೋಸೇ ನಾಕೇ ರೊಟ್ಟಿ। ಐದೇ ಇಡ್ಲಿ ಢಂ।। ಆರು ವಡೆ ಢಂ। ಏಳು ಉಂಡೇ ಢಂ। ಎಂಟೋ ಒಂಬತ್ತು ಪೂರಿ ಅಷ್ಟೇ। ಢಂ ಢಂ ಢಂ।। ಒಂದೇ ಒಂದೇ ಲೀಟರ್ ಹಾಲು ಕುಡಿದು। ಗುಂಡ ಎದ್ದೇ ಬಿಟ್ಟ। ಯಾಕೋ ತಿಂಡಿ ಸೇರ್ತಿಲ್ಲಾಂತ। ತುಂಬಾ ದುಃಖ ಪಟ್ಟ।। ಜೈ ಜೈ ಜೈ । ತಿಂಡಿ ಪೋತ ಗುಂಡ। ಎಂಥ ಹೊಟ್ಟೆ ಬಾಕ ಬಂದ್ರೂ। ಗುಂಡನ ಎದುರು ಥಂಡ।।2।।

ತಾತ ಬುಟ್ಟಿ ತುಂಬಾರೊಟ್ಟಿ

ತಾತ ಬುಟ್ಟಿ ತುಂಬಾ ರೊಟ್ಟಿ ಕಟ್ಟಿ ತಂದನು। ಕಿಟ್ಟಿ ಆಗ ರೊಟ್ಟಿ ಕದ್ದು ತಿಂದು ಬಿಟ್ಟನು। ತಾತ ಬಂದು ಕಿಟ್ಟಿಗಾಗ ಏಟುಕೊಟ್ಟನು। ಅಳುತ ಕಿಟ್ಟಿ ಬರಿಯ ಬುಟ್ಟಿ ತಂದು ಕೊಟ್ಟನು।।

ತಿಮ್ಮರಾಯಿ ಕೊಳಕ

ತಿಮ್ಮರಾಯಿ ಕೊಳ್ಕ। ಮಾಡೋದಿಲ್ಲ ಜಳ್ಕ। ಮೂಗಿನಲ್ಲಿ ಸುರಿತ। ಮೈಯ್ಯಲ್ಲೆಲ್ಲಾ ಕೆರೆತ।।

ದೇವನಿತ್ತ ನನಗೆ ಕಾಲು

ದೇವನಿತ್ತ ನನಗೆ ಕಾಲು। ಹತ್ತು ಊರು ಸುತ್ತಲು। ಕೊಟ್ಟನೆರಡು ಕಣ್ಣುಗಳನು ಹೊಸತನವ ಕಾಣಲು।।1।। ಕೈಗಳು ಅವನ ಕೊಡುಗೆ ನಿತ್ಯ। ದುಡಿದು ಗಳಿಸಿ ಬದುಕಲು। ಕಿವಿಯಳೊಳಿತು ನುಡಿಯ ಕೇಳಿ। ತಿಳಿವು ತುಂಬಿಕೊಳ್ಳಲು।।2।। ನಾಲಿಗೆಯಲಿ ನುಡಿವ ಶಕ್ತಿ। ಅಡಗಿಸಿಟ್ಟನಾತನೇ। ಮಾತು ತಿಳಿದ ಮೇಲೆ ಏಕೆ ಬಾಳಿನಲ್ಲಿ ಯಾತನೆ। ಅಂಗವೆಲ್ಲವನ್ನು ಕೊಟ್ಟನಾತ ಜೊತೆಗೆ।।3।। ಬುದ್ಧಿಶಕ್ತಿ ತಲೆಗೆ, ವಿವೇಕವಿತ್ತನೊಡನೆ। ತಕ್ಕ ಹಾಗೆ ಬಳಸಿಕೊಳ್ಳಲು ಗೆಲುವು ನನ್ನ ಪಾಲಿಗೆ। ಇನ್ನು ಬಡವನೆಂದು ಕೂಗೆ।।4।। ಕೊಡು ಕೊಡೆನಲು ಯೋಗ್ಯವೇ। ಇಷ್ಟನೆಲ್ಲ ದೇವನಿಂದ। ಪಡೆದುದೆನ್ನ ಭಾಗ್ಯವೆಂದು। ಅರಿತು ಬಾಳೊ ಮನುಜನೆ।।5।।

ದೋಸೆ ದೋಸೆ ಘಮ ಘಮ

ದೋಸೆ ದೋಸೆ ಘಮ ಘಮ ದೋಸೆ। ನಾಲಿಗೆ ಬಯಸುವ ಮೆಂತ್ಯದ ದೋಸೆ। ಅಮ್ಮನು ಕೊಡುವ ಬಿಸಿಬಿಸಿ ದೋಸೆ।।1।। ಕೆಂಪು ಬಣ್ಣದ ಖಾರದ ದೋಸೆ। ಬಾಯಲ್ಲಿಟ್ಟು ಕರಗುವ ದೋಸೆ। ಅಮ್ಮನು ಮಾಡುವ ಈರುಳ್ಳಿ ದೋಸೆ।।2।। ತೂತು ತುಂಬಿದ ತುಪ್ಪದ ದೋಸೆ। ಗರಿಗರಿ ಸದ್ದನು ಮಾಡುವ ದೋಸೆ। ಮೂಗನ್ನರಳಿಸಿ ಸೆಳೆಯುವ ದೋಸೆ।।3।। ಚಟ್ನಿ ಪಲ್ಯವ ಹಾಕಿದ ದೋಸೆ। ಅಮ್ಮನು ಮಾಡುವ ಮಸಾಲೆ ದೋಸೆ। ಬೇಕೆ ಬೇಕೆ ನಿಮಗೂ ದೋಸೆ।। 4।। ಆಗುವುದಂತು ತಿನ್ನಲು ಆಸೆ। ಸಿಗದೇ ಇದ್ದರೆ ನಿಮಗೆ ನಿರಾಸೆ। ಬೇಕೇ ಅಮ್ಮನು ನೀಡುವ ಬೆಣ್ಣೆಯ ದೋಸೆ।।5।।

ನನ್ನ ಸಣ್ಣ ತಮ್ಮ

ನನ್ನ ಸಣ್ಣ ತಮ್ಮ ಅಳುತಾನ ಅಳುತಾನ। ನಿನ್ನನು ನೋಡಿ ನಗುತಾನ।। ಬಚ್ಚಲಮನೆಗೆ ಹೋಗಬೇಡ ತಮ್ಮ ಅಲ್ಲೊಂದೈತೆ ಕಪ್ಪೇ....। ಅದು ಹೇಗೆ ಕೂಗ್ತಾದೆ ಗೊತ್ತಾ...। ರ್ರಂ... ರ್ರಂ...ರ್ರಂ....।।1।। ಸಾಹೇಬ್ರ ಬಂಗ್ಲೆಗೆ ಹೋಗಬೇಡ ತಮ್ಮ। ಅಲ್ಲೊಂದೈತೆ ನಾಯಿ। ಅದು ಹೇಗೆ ಕೂಗ್ತದೆ ಗೊತ್ತಾ। ಬೌ ಬೌ.... ಬೌಬೌ... ಬವ್।।2।। ಹೂವಿನ ತೋಟಕೆ ಹೋಗಬೇಡ ತಮ್ಮ। ಅಲ್ಲೊಂದೈತೆ ಹಾವು। ಅದು ಹೇಗೆ ಕೂಗ್ತದ ಗೊತ್ತಾ ಬುಸ್... ಬುಸ್... ಬುಸ್..।।3।।

ನನ್ನಪ್ಪ ಅಷ್ಟೆತ್ತರ ನನ್ನ ಅಮ್ಮ ಇಷ್ಟೆತ್ತರ ರಾಗ:ಶಂಕರಾಭರಣ

ನನ್ನಪ್ಪ ಅಷ್ಟೆತ್ತರ ನನ್ನ ಅಮ್ಮ ಇಷ್ಟೆತ್ತರ। ನಾನು ಮಾತ್ರ ಇಷ್ಟೆತ್ತರ, ಯಾಕೋ ಗೊತ್ತಿಲ್ಲ।। ಮೀಸೆ ಬಂದಿದೆ ಅಪ್ಪನಿಗೆ। ಉದ್ದ ಜಡೆಯಿದೆ ಅಮ್ಮನಿಗೆ। ನನಗೆ ಮಾತ್ರ ಎರಡೂ ಇಲ್ಲ ಯಾಕೋ ಗೊತ್ತಿಲ್ಲ।।1।। ಕೋಟು ತೊಡುವವರು ನನ್ನಪ್ಪ। ಸೀರೆ ಉಡುವಳು ನನ್ನಮ್ಮ। ನನಗೆ ಮಾತ್ರ ಅಂಗೀ ಚಡ್ಡಿ ಯಾಕೋ ಗೊತ್ತಿಲ್ಲ।।2।। ಆಫೀಸು ಕೆಲಸವು ಅಪ್ಪನಿಗೆ। ಅಡುಗೆಯ ಕೆಲಸವು ಅಮ್ಮನಿಗೆ। ನನಗೆ ಮಾತ್ರ ಶಾಲೆಯ ಕೆಲಸ ಯಾಕೋ ಗೊತ್ತಿಲ್ಲ।।3।। ನಸ್ಯವ ಸೇದುವ ನಮ್ಮಜ್ಜ ತಂಬುಲ ತಿಂಬಳು ನಮ್ಮಜ್ಜಿ। ಆದರೆ ನನಗವು ಎರಡೂ ಇಲ್ಲ, ಯಾಕೋ ಗೊತ್ತಿಲ್ಲ।।4।।

ನನ್ನ ಸ್ಲೇಟು ಕರಿಯದು ರಾಗ: ಶಂಕರಾಭರಣ

ನನ್ನ ಸ್ಲೇಟು ಕರಿಯದು। ಅದರ ಕಟ್ಟು ಬಿಳಿಯದು। ಬರೆಯಲಿಕ್ಕೆ ಬರುವುದು। ಬಹಳ ಚೆಂದವಿರುವುದು।। ಅಪ್ಪ ದುಡ್ಡು ಕೊಟ್ಟನು। ಉದ್ದ ಬಳಪ ತಂದೆನು। ಒಂದು ಎರಡು ಬರೆದೆನು। ಅಆಇಈ ಬರೆದೆನು। ಅಮ್ಮಗದ ತೋರಿದೆನು। ಅಮ್ಮ ಹಣ್ಣು ಕೊಟ್ಟಳು। ಅಪ್ಪಗದ ತೋರಿದೆನು। ಮುದ್ದು ಮರಿ ಎಂದನು।।

ನಮ್ಮ ಮನೆಯಲೊಂದು ಸಣ್ಣ ಪಾಪ ರಾಗ:ಶಂಕರಾಭರಣ

ನಮ್ಮ ಮನೆಯಲೊಂದು ಸಣ್ಣ ಪಾಪವಿರುವುದು। ಎತ್ತಿಕೊಳಲು ಹೋದರದಕೆ ಕೋಪಬರುವುದು।।ಪ।। ಕೋಪಬರಲು ಗಟ್ಟಿಯಾಗಿ ಕಿರುಚಿಕೊಳುವುದು। ಕಿರಿಚಿಕೊಂಡು ತನ್ನ ಮೈಯ ಪರಚಿಕೊಳ್ಳುವುದು। ಮೈಯ ಪರಚಿಕೊಂಡು ಪಾಪ ಅತ್ತು ಕರೆವುದು। ಅಳಲು ಕಣ್ಣಿನಿಂದ ಸಣ್ಣ ಮುತ್ತು ಸುರಿವುದು।।1।। ಪಾಪ ಅತ್ತರಮ್ಮ ತಾನೂ ಅತ್ತುಬಿಡುವಳು। ಅಯ್ಯೋ ಪಾಪ ಎಂದುಕೊಂಡು ಮುತ್ತುಕೊಡುವಳು।। ಪಾಪ ಪಟ್ಟು ಹಿಡಿದ ಹಟವು ಸಾರ್ಥಕವಾಯಿತು। ಕಿರಿಚಿ ಪರಚಿ ಅಳುವುದೆಲ್ಲ ಅರ್ಥವಾಯಿತು।।2।।

ನಾವೆಲ್ಲಾ ಪೋಗುವಾ ರಾಗ: ಶಂಕರಾಭರಣ-ನೋಟ್

ನಾವೆಲ್ಲ ಪೋಗುವಾ ಸಾಲಾಗಿ ನಡೆಯುವ। ಗುರುಗಳಿಗೆ ವಂದಿಸಿ ತರಗತಿಯನು ಸೇರುವ।। ಮೇಲಾದಗತಿಲಿ ನಾವು ವಿದ್ಯೆಯಾ ಕಲಿಯುವ। ಲೀಲೆಯ ತೋರುವಾ ಹರುಷದಿಂ ಹಾಡುವ। ।1।। ಚಿತ್ರವಾ ಬರೆಯುವಾ ವ್ಯಾಯಾಮ ಮಾಡುವ। ವಿಜ್ಞಾನ ಯುಗದಿ ನಾವು ಹೊಸತನು ಅರಿಯುವ। ಇತಿಹಾಸ ಮರೆಯದೆ ಹಳತನು ತಿಳಿಯುವ।।2।। ಗಣಿತದಾ ಲೆಖ್ಖಕೆ ಮಗ್ಗಿಯನ್ನು ಹೇಳುವಾ। ಕೂಡುವಾಕಳೆಯುವಾ ಗುಣಿಸುತಾ ಭಾಗಿಸುವ।। ಭಾಷೆಯ ಕಲಿಯಲು ಕಾಗುಣಿತ ಅರಿಯುವ। ವ್ಯಾಕರಣದ ನಿಯಮಗಳನು ಕಲಿತು ಬರೆಯುವ।।3।।

ಪುಟ್ಟ ಪುಟ್ಟ ಏನ್ ಟೀಚರ್ (ನೀತಿ ಮತ್ತು ಆರೋಗ್ಯ)

ಪುಟ್ಟ ಪುಟ್ಟ, ಏನ್ ಟೀಚರ್। ಹೇಳಬೇಡ ಸುಳ್ಳು, ಎಸ್ ಟೀಚರ್। ಹೊಡಿಬೇಡ ಯಾರ್ಗೂ, ಎಸ್ ಟೀಚರ್। ಪುಟ್ಟ ಪುಟ್ಟ ಬಾ ಜಾಣ। ಮಿಠಾಯಿ ಕೊಡುವೆ ಬಾ ಜಾಣ।।1।। ಪುಟ್ಟನ ಹಲ್ಲು ಬೆಳ್ಳಿಯ ಸಾಲು ನಿನಗೂ ಇದೆಯಾ ನೋಡು। ಹೊಳೆಯುವ ಹರಳು ಮುತ್ತಿನ ಸಾಲು ದಿನವೂ ಉಜ್ಜುತ ನೋಡು।।2।।

ನೋಡಿದರೆ ದೂರಕ್ಕೆ ಕೆಂಪನೆಯ (ಒಗಟು)

ನೋಡಿದರೆ ದೂರಕ್ಕೆ ಕೆಂಪನೆಯ ಹಣ್ಣು। ತೆಳ್ಳಗೇ ಉದ್ದಕ್ಕೆ ಜಡೆಯು ಇದೆ ಎನ್ನು। ತವರಿನಲ್ಲಿರುವಾಗ ಹಸಿರೆನ್ನ ಬಣ್ಣ। ಬಿಟ್ಟು ಮುದಿಯಾದಾಗ ಕೆಂಪು ಕಾಣಣ್ಣ।। ಬೈಯುವರು ನನ್ನನ್ನು ಬಲು ಜೋರು ಎಂದು। ಬೊಬ್ಬೆ ಹೊಡೆಸುತ್ತಾಳೆ ಉರಿ ಮಾರಿ ಎಂದು। ನಿಮ್ಮ ಅಡಿಗೆಯ ಮನೆಗೆ ಬರುವೆ ರಂಗಣ್ಣ। ಪ್ರತಿದಿನಾ ನಿನಗೆ ನಾ ಬೇಕೆ ಬೇಕಣ್ಣ।। ನಾ ಯಾರು ಎಂದು ನೀ ಹೇಳು ನೋಡೋಣ। ಹೇಳಿದರೆ ನೀ ಜಾಣ ಇಲ್ಲವೋ ಕೋಣ।। (ಉತ್ತರ: ಮೆಣಸಿನಕಾಯಿ)

ಪುಟಾಣಿ ಪಾಪ

ಪುಟಾಣಿ ಪಾಪ ನಮ್ಮನೆ ದೀಪ। ನಗುತಲಿ ನಿಂದಿದೆ ದೇವರ ರೂಪ। ಪುಟಾಣಿ ಕೂಸು ನೋಡಲು ಲೇಸು। ಕಿಲ ಕಿಲ ನಕ್ಕರೆ ಕಣ್ಣಿಗೆ ಸೊಗಸು। ಪುಟಾಣಿ ಪಾಪ ಮಾಡನು ರಂಪ। ಊಟಕೆ ಕುಳಿತರೆ ಗಣಪತಿ ರೂಪ॥

ಪುಟಾಣಿ ಮಕ್ಕಳೆ ರಾಗ: ತಿಲಂಗ್

ಪುಟಾಣಿ ಮಕ್ಕಳೆ ಕೇಳುವಿರಾ। ಭವ್ಯ ಭಾರತದ ಅಚ್ಚರಿಯಾ। ಭವ್ಯ ಭಾರತದ ಅಚ್ಚರಿಯಾ। ವಿವಿಧತೆಯಲ್ಲಿನ ಏಕತೆಯಾ॥1॥ ಪೂರ್ವ ಪಶ್ಚಿಮ ತೀರ ಕಣಾ। ಉತ್ತರ ದಕ್ಷಿಣದುದ್ದಕ್ಕೂ। ಭವ್ಯ ಭಾರತದ ದೇಶಕೆ। ಪ್ರೀತಿ ಗಂಗೆಯು ಚಿಮ್ಮುತಿದೆ॥2॥ ಎಲ್ಲರನು ಒಂದಾಗಿಸುತೆ। ಭಿನ್ನ ಭಾಷೆಯ ರಂಗಿನಲಿ। ಬಣ್ಣ ಬಣ್ಣದ ವೇಷದಲಿ। ಅಖಂಡ ಭಾರತ ಬೆಳಗುತಿದೆ॥3॥ ಬಂಧುರ ಭಾವವು ಬೆಸೆಯುತಿದೆ। ಪ್ರೀತಿ ಗಂಗೆಯು ಚಿಮ್ಮುತಿದೆ। ಎಲ್ಲರನು ಒಂದಾಗಿಸುತೆ। ಎಲ್ಲರನು ಒಂದಾಗಿಸುತೆ॥4॥ ನದಿಗಳು ಸೇರುವ ಕಡಲೊಂದೆ। ಬೀಸುವ ತಂಗಾಳಿಯು ಒಂದೇ। ಗಗನದಿ ಹಾರುವ ಧ್ವಜ ಒಂದೆ। ಎಲ್ಲರು ಹಾಡುವ ಸ್ವರ ಒಂದೆ॥5॥

ಪುಟಾಣಿ ಕಂದ

ಪುಟಾಣಿ ಕಂದ। ಬೀದಿಗೆ ಬಂದ। ಮಳೆಯಲಿ ನೆಂದ। ಚಳಿಚಳಿಯಾಗಲು ಗಡಗಡನಡುಗಿ। ಹೇಹೇ ಹೇಹೆ ಎಂದ।

ಪುಸ್ತಕವು ಮಾತನು ಹೇಳುತಿದೆ ರಾಗ:ಕುರಂಜಿ

ಪುಸ್ತಕವು ಮಾತನು ಹೇಳುತಿದೆ। ಚಿತ್ತವ ಹತ್ತಿಸಿ ಕೇಳುಮಗು॥ಪ॥ ಒಳ್ಳೆಯ ಕಡೆಯಲಿ ಇಡು ನನ್ನನ್ನು। ಬೀರು ಪೆಟ್ಟಿಗೆ ಬಲು ಚೆನ್ನ। ಬೀಳದೆ ಧೂಳು ಈ ಪರಿಮೇಲೆ। ಬೇರೊಂದಟ್ಟೆಯ ಹೊದಿಸು ಮಗು॥1॥ ಜನಗಳ ಕಾಲಡಿ ಹಾಕದಿರು। ಕಿವಿಗಳ ನಿತ್ಯ ಮಡಿಸದಿರು। ಹಾಳೆಯ ಮಡಿಸಿ ಬೋರಲುಹಾಕಿ। ಕಷ್ಟಕ್ಕೆ ಸಿಕ್ಕಿಸಬೇಡ ಮಗು॥2॥ ನನ್ನಯ ತಿರುಳು ಕಾಡಿನದು ನನ್ನಲ್ಲಿ ಅರಿವು ನಾಡಿನದು। ಬೆಂಕಿಲಿ ಬೆಂದು ನೀರಲ್ಲಿ ನೆಂದು। ಯಂತ್ರವ ಹೊಕ್ಕು ಬಂದೆ ಮಗು॥3॥ ಏನೊಂದಾದರು ಕೇಳುಮಗು। ಯಾವಾಗೆಂದರು ಹೇಳುವೆನು। ಬೇಸರವಿಲ್ಲದೆ ಸೇವಿಪೆನಲ್ಲದೆ। ನನ್ನೇಕಿಂತು ನೋಯಿಸುವೆ॥4॥ ತೂಕಡಿಸುತ್ತ ಮುಟ್ಟದಿರು। ಅರೆಗಣ್ಣಾದರೆ ತೆರೆಯದಿರು। ಕಡ್ಡಿಯ ಸಿಕ್ಕಿಸಿ ತಲೆಯಡಿಯಡಕಿ। ಗೊರಕೆಯ ಹೊಡೆಯದೆ ಇರುಮಗುವೆ॥5॥ ಮೇಜಿನ ಮೇಲೆ ಜಾಗವಿರೆ। ಮೊಗ ಮೇಲಾಗಿಡು ಹೂವು ಇಡು। ಕೈಗಳ ತೊಳೆದು ಚೌಕದಿ ತೊಡೆದು। ಆಮೇಲೆನ್ನನು ಓದು ಮಗು॥6॥

ಬಣ್ಣದ ತಗಡಿನ ತುತ್ತೂರಿ ರಾಗ:ದುಗ......

ಬಣ್ಣದ ತಗಡಿನ ತುತ್ತೂರಿ। ಕಾಸಿಗೆ ಕೊಂಡನು ಕಸ್ತೂರಿ। ಸರಿಗಮ ಪದನಿಸ ಊದಿದನು। ಸನಿದಪ ಮಗರಿಸ ಊದಿದನು॥1॥ ತನಗೇ ತುತ್ತುರಿ ಇದೆಯೆಂದ। ಬೇರಾರಿಗು ಅದು ಇಲ್ಲೆಂದ। ಕಸ್ತೂರಿ ನಡೆದನು ಬೀದಿಯಲಿ। ಜಂಭದ ಕೋಳಿಯ ರೀತಿಯಲಿ॥2॥ ತುತ್ತುರಿಯೂದುತ ಕೊಳದ ಬಳಿ। ನಡೆದನು ಕಸ್ತೂರಿ ಸಂಜೆಯಲಿ। ಜಾರಿತು ನೀರಿಗೆ ತುತ್ತೂರಿ। ಗಂಟಲು ಕಟ್ಟಿತು ನೀರೂರಿ॥ 3॥ ಸರಿಗಮ ಊದಲು ನೋಡಿದನು। ಗಗಗಗ ಸದ್ದನು ಮಾಡಿದನು। ಬಣ್ಣವು ನೀರಿನ ಪಾಲಾಯ್ತು। ಬಣ್ಣದ ತುತ್ತುರಿ ಬೋಳಾಯ್ತು॥4॥ ಬಣ್ಣದ ತುತ್ತುರಿ ಹಾಳಾಯ್ತು। ಜಂಭದ ಕೋಳಿಗೆ ಗೋಳಾಯ್ತು॥5॥

ಬಣ್ಣ ಬಣ್ಣದ ಲಂಗತೊಟ್ಟು

ಬಣ್ಣ ಬಣ್ಣದ ಲಂಗತೊಟ್ಟು। ಪುಟ್ಟ ಪುಟ್ಟ ಹೆಜ್ಜೆ ಇಟ್ಟು। ಬೇಗ ಬೇಗನೆ ನೆಡೆಯುತ್ತಾಳೆ। ನನ್ನ ತಂಗಿ ನಡೆಯುತ್ತಾಳೆ॥ ಮುದ್ದು ಮುಖದ ನನ್ನ ತಂಗಿ ತುಟಿಯ ತೆರೆದು ಹಾಡಿದಾಗ। ಗುಬ್ಬಿ ಗುಂಪು ಹಾರಿಹಾರಿ ಕುಣಿಯುತ್ತಾವೆ॥2॥ಬಣ್ಣ॥

ಕಾಲು ಜಾರಿ ಬಿದ್ದುಬಿಟ್ಟು। ಕಣ್ಣ ಮೇಲೆ ಕೈಯ ಇಟ್ಟು। ಅತ್ತು ಕೂಗಿ ಅಮ್ಮನನ್ನು ಕರೆಯುತ್ತಾಳೆ।।3।।ಬಣ್ಣ।।

ಬನ್ನಿ2 ಮಕ್ಕಳೆ ಶಾಲೆ ಕಡೆಗೆ

ಬನ್ನಿ ಬನ್ನಿ ಮಕ್ಕಳೆ ಶಾಲೆ ಕಡೆಗೆ ಹೋಗುವಾ। ಕೋಲ ನಾವು ಆಡುವ ಕೋಲ ನಾವು ಆಡುವಾ। ಉಯ್ಯಾಲೆ ತೂಗುವ ಏಣಿಯನ್ನು ಹತ್ತುವಾ। ಏತ ನಾವು ಆಡುವಾ।।1।। ಇರುವೆಯಂತೆ ಸಾಲುಗಟ್ಟಿ ಶಾಲೆ ಬಳಿಗೆ ಹೋಗುವಾ। ಬಸ್ಸಿನಾಟವಾಡೋಣ ರೈಲಿನಾಟವಾಡೋಣ। ಆನೆ ಕುದುರೆ ಮೋಟಾರ್‌ಗಾಡಿ ಎಲ್ಲಾ ತಂದು ಆಡೋಣ।।2।।

ಬಳೆ ಬೇಕೆ ಬಳೆ

ಬಳೆ ಬೇಕೆ ಬಳೆ ತೊಡುವುದಕ್ಕೆ ಬಳೆ। ಕೈಗೊಳ್ಳೀ ಗಾಜು ಬಳೆ ಬಳೆ ಬೇಕೆ? ಬಳೆ? ತಿನ್ನುವುದಕ್ಕೆ ಬಳೆ ಬಾಯಿಗೊಳ್ಳೆ ಕೋಡುಬಳೆ ಬಳೆಬೇಕೆ ಬಳೆ? ತರಹವಾರಿ ಬಳೆ ಬಳೆ ಗಾಜು ಬಳೆ। ಕೋಡುಬಳೆ ಬಳೆ ಬೇಕೆ ಬಳೆ?

ಬಾಳಾ ಒಳ್ಳೇವ್ರು ನಮ್ಮಿಸ್ಸು

ಬಾಳಾ ಒಳ್ಳೇವ್ರು ನಮ್ಮಿಸ್ಸು। ಏನ್ ಹೇಳಿದ್ರೂ ಎಸ್ಸೆಸ್ಸು। ನಗ್ತಾ ನಗ್ತಾ ಮಾತಾಡ್ತಾರೆ ಸ್ಕೂಲಿಗೆಲ್ಲ ಫೇಮಸ್ಸು।।1।। ಜಾಣ ಮರಿ ಅಂತಾರೆ। ಚಾಕ್ಲೇಟಿದ್ರೆ ಕೊಡ್ತಾರೆ। ಬೆನ್ನು ತಟ್ಟಿ ಕೆನ್ನೆ ಸವರಿ ಬೆಣ್ಣೆ ಕಂದ ಅಂತಾರೆ।।2।। ಆಟಕ್ಕೆ ಬಾ ಅಂತಾರೆ। ಆಟದ ಸಾಮಾನು ಕೊಡ್ತಾರೆ। ಗೊತ್ತಿಲ್ಲದ್ಹಾಂಗೆ ಆಟದ ಜೊತೆ ಪಾಠಾನೂ ಕಲಿಸ್ತಾರೆ।।3।। ನಮ್ಜೊತೇನೇ ಆಡ್ತಾರೆ ಕೈ ಕೈ ಹಿಡಿದು ಹಾಡ್ತಾರೆ। ಕೋತಿ ಕರಡಿ ಕಥೆ ಹೇಳಿ ಸಿಕ್ಕಾಪಟ್ಟೆ ನಗಿಸ್ತಾರೆ।।4।। ನಮ್-ಸ್ಕೂಲಂತ ಸ್ಕೂಲಿಲ್ಲ। ನಮ್‌ಮಿಸ್ಸಂಥ ಮಿಸ್ಸಿಲ್ಲ। ಅಮ್ಮನ ಹಾಗೆ ಅವ್ರುನೂ ಬಿಟ್ ಬರೋಕೆ ಮನಸಿಲ್ಲ।।5।।

ಬಾರೋ ಇಲ್ಲಿ ಹರಿ

ಬಾರೋ ಇಲ್ಲಿ ಹರಿ। ರವೆ ಸ್ವಲ್ಪ ಹುರಿ। ತೆಂಗಿನ ಕಾಯಿ ತುರಿ। ಮೆಣಸಿನಕಾಯಿ ಮುರಿ। ವಗ್ಗರಣೆ ಹಾಕೋ ಮರಿ। ಉಪ್ಪಿಟ್ ಮಾಡು ನನ್ನ ಹರಿ।।

ಬೆಳಗಾಯ್ತೇಳೋ ತಿಮ್ಮ

ಬೆಳಗಾಯ್ತೇಳೋ ತಿಮ್ಮ। ಕೋಳಿ ಕೂಗಲಮ್ಮ। ಮುಖ ತೊಳೆಯೊ ತಿಮ್ಮ। ನೀರಿಲ್ಲ ಅಮ್ಮ। ನೀರು ಸೇದೋ ತಿಮ್ಮ। ಕೈ ನೋಯುತ್ತಮ್ಮ। ಪೇಟೆಗ್ಹೋಗೊ ತಿಮ್ಮ। ಕಾಲ್ ನೋಯುತ್ತಮ್ಮ। ಪಾಠ ಓದೋ ತಿಮ್ಮ। ತಲೆ ನೋಯುತ್ತಮ್ಮ। ಊಟಕೆ ಬಾರೊ ತಿಮ್ಮ। ಓಡೋಡ್ ಬರ್ತೀನಮ್ಮ। ಊಟಕೆ ಮುಂದು ಕೆಲಸಕೆ ಹಿಂದು। ಈ... ತಿಮ್ಮ ಮಂಕುತಿಮ್ಮ।।

ಬೇಕೆ2 ತರಕಾರಿ ತರ2

ಬೇಕೇ ಬೇಕೇ? ತರಕಾರಿ?। ತರತರ ಊಟಕೆ ರುಚಿಕಾರಿ।।ಪ।। ಇದೆ, ಇದೆ। ನೋಡಿರಿ। ಬೆರಳನು ಹೋಲುವ ಬೆಂಡೇಕಾಯಿ। ಉಬ್ಬಿದ ಕೊಬ್ಬಿದ ಸೋರೇಕಾಯಿ। ಹಬ್ಬದ ಊಟದ ಕುಂಬಳಕಾಯಿ। ಬೇಕೇ? ಬೇಕೇ? ತರಕಾರಿ?।।1।। ಹೆರೆಯಲು ಬೇಕೇ ತೆಂಗಿನಕಾಯಿ। ಖಾರಕೆ ನೋಡಿ ಮೆಣಸಿನಕಾಯಿ. ಮರೆಯಲು ಬೇಡಿರಿ ಮಾವಿನಕಾಯಿ। ಬೆರಸಿದರೊಳ್ಳೆಯ ಉಪ್ಪಿನ ಕಾಯಿ। ಬೇಕೇ ಬೇಕೇ?ತರಕಾರಿ?।।2।। ಹಸುರಿಗೆ ಹಸುರಿದೆ ಹರಿವೆಯ ಸೊಪ್ಪು। ಕೆಸುವಿನ ಸೊಪ್ಪಿದೊ ಬಸಳೆಯ ಸೊಪ್ಪು। ತುಸು ತುಸು ಕೊಳ್ಳಿರಿ ಮೆಂತ್ಯದ ಸೊಪ್ಪು। ಹಸಿ ಹಸಿ ಬೆರೆಯಿಸೆ ಪರಿಮಳ ಒಪ್ಪು। ಬೇಕೇ ಬೇಕೇ? ತರಕಾರಿ?।।3।। ಹಾವನು ಹೋಲುವ ಪಡವಲಕಾಯಿ। ಕೋಲನು ಹೋಲುವ ನುಗ್ಗೇಕಾಯಿ। ಗೋಳಾಕಾರದ ನಿಂಬೆಕಾಯಿ। ಬಜ್ಜಿಗೆ ತಕ್ಕ ಬದನೆಕಾಯಿ। ಒರಟು ಚರ್ಮದಾ ಹಾಗಲಕಾಯಿ। ಗೆರೆಗಳು

ಇರುವ ಹೀರೇಕಾಯಿ। ಬೇಕೇ ಬೇಕೇ ತರಕಾರಿ?।।4।।

ಬೊಮ್ಮನ ಹಳ್ಳಿಯ ಬೋರೇಗೌಡ (ಜಾನಪದ ಮಟ್ಟು)

ಬೊಮ್ಮನ ಹಳ್ಳಿಯ ಬೋರೇಗೌಡ ಬೆಂಗಳೂರಿಗೆ ಬಂದನು।।2ಸಾರಿ।। ಬೋರೇಗೌಡನಾ ಹೆಂಡತಿ ಬೆಂಗಳೂರಿಗೆ ಬಂದಳು।।2ಸಾರಿ।। ಬೊಮ್ಮನಹಳ್ಳಿ ಬೋರೆಗೌಡ, ಬೋರೇಗೌಡನ ಹೆಂಡತಿ ಬೆಂಗಳೂರಿಗೆ ಬಂದಳು। ಹೆಂಡತಿಯ ತಮ್ಮ। ಬೆಂಗಳೂರಿಗೆ ಬಂದನು।।2ಸಾರಿ।। ಬೊಮ್ಮನಹಳ್ಳಿಯ ಬೋರೆಗೌಡ, ಬೋರೆಗೌಡನಾ ಹೆಂಡತಿ। ಹೆಂಡತಿಯ ತಮ್ಮ ಬೆಂಗಳೂರಿಗೆ ಬಂದನು।। ತಮ್ಮನ ಮಗಳು ಬೆಂಗಳೂರಿಗೆ ಬಂದಳು।2ಸಾರಿ।। ಬೊಮ್ಮನ ಹಳ್ಳಿ ಬೋರೆಗೌಡ ಬೋರೇಗೌಡನಾಹೆಂಡತಿ। ಹೆಂಡತಿಯ ತಮ್ಮ ತಮ್ಮನ ಮಗಳು ಬೆಂಗಳೂರಿಗೆ ಬಂದಳು। ಮಗಳ ಗಂಡ ಬೆಂಗಳೂರಿಗೆ ಬಂದನು।।2ಸಾರಿ।। ಬೊಮ್ಮನ ಹಳ್ಳಿ ಬೋರೆಗೌಡ, ಬೋರೆಗೌಡನ ಹೆಂಡತಿ ಹೆಂಡತಿಯ ತಮ್ಮ ತಮ್ಮನ ಮಗಳು ಮಗಳ ಗಂಡ ಬೆಂಗಳೂರಿಗೆ ಬಂದನು।। ಗಂಡನ ಮಗುವು ಬೆಂಗಳೂರಿಗೆ ಬಂದಿತು।।2ಸಾರಿ।। ಬೊಮ್ಮನಹಳ್ಳಿ ಬೋರೆಗೌಡ ಬೋರೇಗೌಡನ ಹೆಂಡತಿ, ಹೆಂಡತಿಯ ತಮ್ಮ। ತಮ್ಮನ ಮಗಳು। ಮಗಳ ಗಂಡ, ಗಂಡನ ಮಗುವು ಬೆಂಗಳೂರಿಗೆ ಬಂದಿತು।। ಮಗುವಿನ ಗೊಂಬೆ ಬೆಂಗಳೂರಿಗೆ ಬಂದಿತು।।2ಸಾರಿ।। ಬೊಮ್ಮನ ಹಳ್ಳಿ ಬೋರೆಗೌಡ, ಬೋರೆಗೌಡನಾ ಹೆಂಡತಿ, ಹೆಂಡತಿಯ ತಮ್ಮ, ತಮ್ಮನ ಮಗಳು, ಮಗಳಗಂಡ, ಗಂಡನ ಮಗುವು, ಮಗುವಿನ ಗೊಂಬೆ ಬೆಂಗಳೂರಿಗೆ ಬಂದಿತು।।

ಬಂದಿದೆ ಬೇಸಿಗೆ ರಜ

ಬಂದಿದೆ ಬೇಸಿಗೆ ರಜ। ರಜ ಇದ್ದರು ಬಿಸಿಲಿನ ಸಜ। ಬನ್ನಿ ಆಡೋಣ....। ಸೂರ್ಯನ ಮಹಿಮೆ ಹಾಡೋಣ।।1।।ಏಕೆ ರವಿಗಿಂತ ತಾಪ। ಯಾರ ಮೇಲವನ ಕೋಪ। ಎಂದು ಹಳಿಯಬೇಡಿ ನೀವು। ಸೂರ್ಯನ ತಪ್ಪು ತಿಳಿಯಬೇಡಿ।।2।। ಮೋಡ ಕೂಡಿಸಲು। ಇಳೆಗೆ ಮಳೆ ತರಲು। ದುಡಿಯುತಿಹನು ಪಾಪ।।3।। ಭೂಮಿಯ ಪೋಷಕ ಸೂರ್ಯ। ಭೂಮಿಗವನು ಅನಿವಾರ್ಯ। ಹೊಗಳಿಕೆ ಬೇಕಿಲ್ಲ। ತೆಗಳಿದರೆ ಅವ ಕುಗ್ಗುವುದಿಲ್ಲ।।4।। ಬೆಳಕನೀಡುವನು। ಬಿಸಿಲನೂಡುವನು। ಮರೆಯದೆ ಕರ್ತವ್ಯ।।5।। ಇಂತಹ ಬಿರಿಬಿಸಿಲಲ್ಲಿ। ಮರಗಿಡ ಪೊದೆಬಳ್ಳಿ। ಕಂಗಾಲಾಗಿಲ್ಲ ನೋಡಿ। ರಂಗಾಗಿದೆ ಎಲ್ಲಾ ಚಿಗುರು।।6।। ಹೂತೋಟ್ಟು ಹಣ್ಣು ಮಡಿಬಿಟ್ಟು। ಇವೆ ಸಂಭ್ರಮದಲ್ಲಿ। ಸೂರ್ಯನಿಂದ ಕಲಿಯೋಣ। ಪ್ರಕೃತಿಯಂತೆ ನಲಿಯೋಣ।।7।। ಕಷ್ಟಗಳಿಗಂಜದೆ ನಮ್ಮ। ಕರ್ತವ್ಯ ಮರೆಯದೆ।। ನಲಿಯುತ ಬಾಳಿ। ನಲಿವನು ಹಂಚಿ ಧನ್ಯರಾಗೋಣ।।8।।

ಮಳೆ ಬಂತು ಮಳೆ ಕೊಡೆ ಹಿಡಿದು ನಡೆ

ಮಳೆ ಬಂತು ಮಳೆ। ಕೊಡೆ ಹಿಡಿದು ನಡೆ। ಕೆಸರಿನಲ್ಲಿ ಜಾರಿಬಿದ್ರೆ। ಬಟ್ಟೆ ಎಲ್ಲ ಕೊಳೆ।। ಬಿಸಿಲು ಬಂತು ಧಗೆ ಕೋಟು ಟೋಪಿ ತೆಗೆ। ಬಾವಿಯಲ್ಲಿ ನೀರು ಸೇದಿ। ಸೋಪು ಹಾಕಿ ಒಗೆ।।

ಮೈಯೇ ಇಲ್ಲ ಬರೀ ತಲೆ (ಒಗಟು)

ಮೈಯೇ ಇಲ್ಲ ಬರೀ ತಲೆ। ನೆತ್ತಿನ ಜುಂಗಿನ ಬಿಗೀ ಬಲೆ। ನಾ ಯಾರೆಂದು ಹೇಳುವಿಯಾ। ಸೋತರೆ ಕಾಲಿಗೆ ಬೀಳುವಿಯಾ।। ಮುಂಜಿಗಿಂಜಿ ಆಗಿಲ್ಲ। ಜನಿವಾರಾನೇ ಹಾಕಿಲ್ಲ। ಆದ್ರೂ ತಲೇಲಿ ಫಿಳ್ ಜುಟ್ಟ್। ಹೇಳ್ ನೋಡೋಣ ನನ್ ಗುಟ್ಟು।। ದೇವರಿಗೋ ನಾ ಬಲು ಇಷ್ಟ। ನನಗೋ ಅವನಿಂದಲೆ ಕಷ್ಟ। ಅವನ್ನೆಸರಲ್ಲಿ ತಲೆ ಒಡೆದು। ತಿಂತಾರೆ ನನ್ನೆದೆ ತುರಿದು।। ನನ್ನನ್ ಹೊಡೆಯೋ ಹಾಗಿಲ್ಲ। ಹೊಡೆದೋರ್ ಕೈಯೇ ನೋಯುತ್ತೆ। ನಾನು ಜೊತೇಲೀ ಸೇರ್ಕೊಂಡ್ರೆ। ತಿಂಡಿ ಬಲು ರುಚಿ ಆಗುತ್ತೆ।। ನಾ ಯಾರೆಂದು ಹೇಳುವಿಯಾ। ಒಗಟಿಗೆ ಉತ್ತರ ನೀಡುವಿಯಾ। ಇಲ್ಲವೆ ಸೋಲನ್ನೊಪ್ಪುವಿಯಾ। ತೆಪ್ಪನೆ ಕಾಲಿಗೆ ಬೀಳುವಿಯಾ? (ಉತ್ತರ: ತೆಂಗಿನಕಾಯಿ)

ಯುಗಾದಿ ಹಬ್ಬ ಬಂದಾಗ

ಯುಗಾದಿ ಹಬ್ಬ ಬಂದಾಗ ಹೋಳಿಗೆ ತಿನ್ನುವ ಆಸೆ। ಚೌತಿ ಹಬ್ಬ ಬಂದಾಗ ಕಡುಬು ತಿನ್ನುವ ಆಸೆ। ದೀಪಾವಳಿ ಹಬ್ಬ ಬಂದಾಗ ಪಟಾಕಿ ಹೊಡೆಯುವ ಆಸೆ। ಯುಗಾದಿ ಪೂಜೆ ಬಂದಾಗ ಹೊಸಬಟ್ಟೆ ಧರಿಸುವ ಆಸೆ। ವಿಜಯದಶಮಿ ಬಂದಾಗ ದಸರಾ ನೋಡುವ ಆಸೆ। ಶಿವರಾತ್ರಿಹಬ್ಬ ಬಂದಾಗ ಜಾಗರಣೆ ಮಾಡುವ ಆಸೆ। ಸಂಕ್ರಾಂತಿ ಹಬ್ಬ ಬಂದಾಗ ಎಳ್ಳು ಬೆಲ್ಲ ಹಂಚುವ ಆಸೆ।।

ರಾಜಕುವರಿ ಕಥೆ **ರಾಗ: ಮಿಶ್ರಪೀಲು**

ರಾಜಕುವರಿ ಕಥೆ। ಅವಳ ಹೆಸರು ಸೀತೆ। ಬಹಳ ಹಿಂದೆ ಬಹಳ ಹಿಂದೆ। ನಡೆದುದೀ ಕಥೆ। ಇಷ್ಟು ಎತ್ತರ ಮನೆ। ಸೀತೆ ಇದ್ದ ಮನೆ। ರಾಜ್ಯವಾಸ ಯೋಗ್ಯವಾದ। ದೊಡ್ಡ ಅರಮನೆ।।1।। ಮುಳ್ಳು ಬೆಳೆಯಿತಲ್ಲಾ। ಮನಸು ಬೆಳೆಯಿತಲ್ಲಾ। ಕಡೆಗೆ ಬಂದ ನೆರೆಯ ರಾಜಮಗ। ಮುಳ್ಳನೆಲ್ಲ ಕತ್ತರಿಸಿ ಒಳಗೆ ಹೊಕ್ಕನು।।2।।

ರಾಗಿ ಬಿತ್ತೋಣ,

ರಾಗಿ ಬಿತ್ತೋಣ, ರಾಗಿ ಬೆಳೆಯೋಣ, ರಾಗಿ ಕೊಯ್ಯೋಣ, ರಾಗಿ ಬಡಿಯೋಣ। ರಾಗಿ ತೂರೋಣ। ರಾಗಿ ಬೀಸೋಣ। ಮುದ್ದೆ ಮಾಡೋಣ। ಮುರಿದು ನುಂಗೋಣ। ಊಟಕ್ಕೆ ಕೂರೋಣ।।

ರೊಟ್ಟಿಯ ಅಂಗಡಿ ಕಿಟ್ಟಪ್ಪ

ರೊಟ್ಟಿಯ ಅಂಗಡಿ ಕಿಟ್ಟಪ್ಪ ನನಗೊಂದು ರೊಟ್ಟಿಯ ತಟ್ಟಪ್ಪ। ಪುಟಾಣಿ ರೊಟ್ಟಿ ಕೆಂಪಗೆ ಸುಟ್ಟು। ಒಂಬತ್ತು ಕಾಸಿಗೆ ಕಟ್ಟಪ್ಪ। ಖಾರದ ರೊಟ್ಟಿ ಕೊಡಪ್ಪ। ಕಪ್ಪಗಾಗಿದೆ ಕಿಟ್ಟಪ್ಪ। ತಿನ್ನುತ ಹೋಗ್ತೇನು ನಾನಪ್ಪ। ಹಸನಾದ ರೊಟ್ಟಿ ಬೇಕಪ್ಪ।। ಕಾಸನು ಕೊಡುವೆನು ತಾರಪ್ಪ। ಗುಂಡಗೆ ರೊಟ್ಟಿ ಸುಡದೆ ಕೊಟ್ರೆ। ಟೂಟೂ ಸಂಗ ಬಿಟ್ಟೇಪ್ಪಾ। ಬಿಟ್ಟರೆ ಎಂದೂ ಕಟ್ಟೇಪ್ಪ।।

ಲಾಲಾಜಿ ಲಡ್ಡು ಕೊಡು

ಲಾಲಾಜಿ ಲಡ್ಡು ಕೊಡು।।2ಸಾರಿ।। ಲಡ್ಡು ಬೇಕು ಅಂದ್ರೆ ದುಡ್ಡು ಕೊಡು।।2ಸಾರಿ।। ಲಾಲಾಜಿ ಲಾಲಾಜಿ ದುಡ್ಡು ಇಲ್ಲ।।2ಸಾರಿ।। ದುಡ್ಡು ಇಲ್ಲ ಅಂದ್ರೆ ಲಡ್ಡು ಇಲ್ಲ।।2ಸಾರಿ।। ಲಾಲಾಜಿ ಲಾಲಾಜಿ ನಿನ್ನ ಮೀಸೆ ಏನೂ ಅಂದ। ಆಹಾ ಎಂಥ ಚೆಂದ।।2ಸಾರಿ।। ಬಾಲಾಜಿ ಬಾಲಾಜಿ ಲಡ್ಡು ತೊಗೊ। ಎಷ್ಟು ಬೇಕೋ ನಿಂಗೆ ಅಷ್ಟೂ ತೊಗೊ।।2ಸಾರಿ।।

ಹಪ್ಪಳ ಏಕೆ ಒಣಗಲಿಲ್ಲ

ಹಪ್ಪಳ ಹಪ್ಪಳ ಏಕೆ ಒಣಗಲಿಲ್ಲ, ನಾನೇನ್ಮಾಡ್ಲಿ ಬಿಸಿಲ್ ಬರಲಿಲ್ಲ। ಬಿಸಿಲೇ ಬಿಸಿಲೇ ಯಾಕೆ ಬರಲಿಲ್ಲ। ನಾನೇನ್ಮಾಡಲಿ ಹುಲ್ಮರೆಯಾಯ್ತು। ಹುಲ್ಲೆ ಹುಲ್ಲೇ ಯಾಕೆ ಮರೆಯಾದೆ? ನಾನೇನ್ಮಾಡ್ಲಿ ಹುಡುಗ ಹುಲ್ಲ ಕುಯ್ಯಲಿಲ್ಲ। ಹುಡುಗ ಹುಡುಗ ಯಾಕೆ ಹುಲ್ಲು ಕುಯ್ಯಲಿಲ್ಲ? ನಾನೇನ್ಮಾಡ್ಲಿ ಅಜ್ಜಿ ರೊಟ್ಟಿ ಕೊಡ್ಲಿಲ್ಲ। ಅಜ್ಜಿ, ಅಜ್ಜಿ ಯಾಕೆ ರೊಟ್ಟಿ ಕೊಡ್ಲಿಲ್ಲ? ನಾನೇನ್ಮಾಡ್ಲಿ ಅಜ್ಜ ಜೋಳ ತರ್ಲಿಲ್ಲ। ಅಜ್ಜ ಅಜ್ಜ ಯಾಕೆ ಜೋಳ ತರ್ಲಿಲ್ಲ? ನಾನೇನ್ಮಾಡ್ಲಿ ಸರ್ಕಾರ್ ಸಂಬ್ಳ ಕೊಡ್ಲಿಲ್ಲ। ಸರ್ಕಾರ್ ಸರ್ಕಾರ್ ಯಾಕೆ ಸಂಬಳ ಕೊಡ್ಲಿಲ್ಲ? ನಾನೇನ್ಮಾಡ್ಲಿ ರಾಜ ಅಪ್ಪಣೆ ಕೊಡಲಿಲ್ಲ। ರಾಜ ರಾಜ ಯಾಕೆ ಅಪ್ಪಣೆ ಕೊಡಲಿಲ್ಲ? ನಾನೇನ್ಮಾಡ್ಲಿ ದೇವರ್ ಚಿತ್ತಕ್‌ಬರಲಿಲ್ಲ।।

ಹೊರಟಳು ರಾಧೆ **ರಾಗ: ಹಂಸಧ್ವನಿ**

ಹೊರಟಳು ರಾಧೆ ಮಥುರಾ ಪುರಕೆ। ತುಂಬಿದ ಕೊಡವ ತಲೆಯ ಮೇಲೆ ಹೊತ್ತು।।ಪ।। ಚುರು ಚುರು ಬುರು ಬುರು

ಮಜ್ಜಿಗೆ ಕಡೆದು। ಮಜ್ಜಿಗೆಯಿಂದ ಬೆಣ್ಣೆಯ ತೆಗೆದು। ತುಂಬಿದ ಕೊಡವ ತಲೆಯ ಮೇಲೆ ಹೊತ್ತು॥1॥ ತೋಟಕೆ ಹೋಗಿ ಹೂಗಳ ಕೊಯ್ದು। ಹೂವಿನಿಂದ ಮಾಲೆಯ ಮಾಡಿ। ಕೃಷ್ಣನಿಗ್ಹಾಕಿ ವಂದನೆ ಮಾಡಿ॥2॥

ಕಥನ ಕವನಗಳು

ಒಂದಾನೊಂದು ಊರು ಆ ಊರಲ್ಲಿ

ಒಂದಾನೊಂದು ಊರು। ಆ ಊರಲ್ಲಿ ಇಲಿಗಳು ನೂರು। ಮನೆಮನೆಯಲ್ಲಿ .... ಬೀದಿಗಳಲ್ಲಿ। ಅವುಗಳ ಕಾಟ ಜೋರು॥ಪ॥ ಇಲಿಗಳ ನಡುವೆ ಒಗ್ಗಟ್ಟು... ಬೆಕ್ಕಿಗೆ ಬಹಳ ಬಿಕ್ಕಟ್ಟು। ಬಳಿಯಲಿ ಬರವು... ಹಿಡಿಯಲು ಸಿಗವು। ಕುಳಿತಿತು ಬೆಕ್ಕು ಕಂಗೆಟ್ಟು॥1॥ ಬೆಕ್ಕು ಉಪಾಯ ಹೂಡಿ... ಧರಿಸಿತು ಮೀಸೆ ದಾಡಿ। ತಪವನು ಮಾಡಿ ಬಂದಿಹೆ ನೋಡಿ... ಎಂದಿತು ಇಲಿಗಳ ಕೂಡಿ॥2॥ ಕಪಟ ಜೋಗಿಯನು ಕಂಡು ಮರುಳಾಯಿತು। ಇಲಿಗಳ ಹಿಂಡು। ಹಾಲನು ನೀಡಿ...। ಸೇವೆಯಮಾಡಿ... ಭಕ್ತಿಯ ತೋರಿತು ದಂಡು॥3॥ ಮೆಲ್ಲನೆ ಇಲಿ ಬಳಿಹೋಗಿ... ಹಿಡಿಯಿತು ಒಂದನು ಜೋಗಿ। ಜೈ ಮಹಾಕಾಳಿ ಎಂದಿತು ಕೂಗಿ... ಇಲಿಯನು ತಿಂದು ತೇಗಿ॥4॥ ಕಳೆದವು ದಿನಗಳು ಆರು...। ಮುಗಿದವು ಇಲಿಗಳು ನೂರು...। ಯುಕ್ತಿಯಿಂದ ಜಯಿಸಿದ ಬೆಕ್ಕು... ಅರಸಿತು ಮುಂದಿನ ಊರು॥5॥

ಕಾಕಿ ಒಕ್ಕಟಿ ನೀಳ್ಳಕು

ಕಾಕಿ ಒಕ್ಕಟಿ ನೀಳ್ಳಕು ಕಾವು ಕಾವು ಮನುಚುನು। ಅಟ್ಲು ಎಗರಿ ಪೋಯನು ಇಟ್ಲು ಎಗರಿ ವಚ್ಚನು। ಚಿನ್ನ ಮೂತಿ ಪಾತ್ರುಲು ನೀಳು ಕೊಂಚಂ ಉಂಡನು। ಗುಟುಕರಾಳ್ಳು ತಚ್ಚಿನು। ಒಕಟಿ ಒಕಟಿ ವೇಸುನು। ನೀಳ್ಳು ಪೈಕಿ ರಾಗನೆ ಗುಟುಕು। ಗುಟುಕು ಎನೆ ತಾಗಿ ವೆಳ್ಳಿಪಾಯನು॥

ಕಾಗೆ ಜೋಡಿ ಆಡೆ ನೀನು (ಸಂಭಾಷಣೆ)

ಕಾಗೆ ಜೋಡಿ ಆಡೆ ನೀನು ಕಾಲ್ಮುರಿತೀನಿ ಅಂತು ಅಮ್ಮ ಗುಬ್ಬಿ। ಯಾಕಮ್ಮಾ ಹಾಗಂತೀ? ಕಾಗೆ ಮರಿ ಜಾಣ ಮರಿ। ಆಡಿದ್ರೇನು ತಪ್ಪು ಅಂತು ಗುಬ್ಬಿ ಮರಿ। ಗುಬ್ಬಿಮರಿ ಗುಬ್ಬಿಮರಿ ಜೋಡಿ ಮಾತ್ರ ಆಡ್ಕೋಬೇಕು। ಕಾಗೆ ಜೋಡಿ ಬೇಡ ಅಂತು ಅಮ್ಮ ಗುಬ್ಬಿ। ಗುಬ್ಬಿಮರಿ ಕಾಗೆ ಮರಿ ಜೋಡಿ ಯಾಕೆ ಆಡ್ಕೊಬಾರ್ದು? ಆಡಿದ್ರೇನು ತಪ್ಪು ಅಂತು ಗುಬ್ಬಿಮರಿ। ಅಮ್ಮ ಗುಬ್ಬಿ ಯೋಚಿಸಿ ಹೇಳ್ತು। ನೋಡು ಪುಟ್ಟ ಕಾಗೆ ಮರಿ ಕಾಡ್ಗಪ್ಪು। ನೀನೋ ಬಿಳಿ ಮುತ್ತಂತೆ। ಅದರ ಜೋಡಿ ಆಡ್ತಾ ನೀನು ಕೂಡ ಕಪ್ಪಗೆ ಕರಿ ಕೊರಮ ಆಗ್ತಿ ನೋಡು ನನಗೇನಂತೆ। ಪುಟಾಣಿ ಗುಬ್ಬಿ ತಟ್ಟನೆ ಹೇಳ್ತು। ಹೌದಲ್ಲಮ್ಮ ನಾನು ಬಿಳಿ ಕಾಗೆ ಮರಿ ಕಾಳಗಪ್ಪು। ನನ್ನ ಜೊತೆ ಆಡ್ತಾ ಇದ್ರೆ ಕಾಗೆ ಮರಿ ಮಲ್ಲಿಗೆ ಹೂವಿನ ಹಾಗೆ ಬೆಳ್ಳಗೆ ಆಗುತ್ ನೋಡು ಅಂತ। ಪುರ್ರನೆ ಹಾರಿ ಹೋಯ್ತು ಗುಬ್ಬಿ ಕಾಗೆ ಜೋಡಿ॥

ಕಾಗೆಯೊಂದು ಹಾರಿ ಬಂದು — ರಾಗ:ಶಂಕರಾಭರಣ

ಕಾಗೆಯೊಂದು ಹಾರಿ ಬಂದು। ಮರದ ಮೇಲೆ ಕುಳಿತುಕೊಂಡು। ಬಾಯೊಳಿದ್ದ ಮಾಂಸವನ್ನು ತಿನ್ನ ತೊಡಗಿತು॥1॥ ಠಕ್ಕ ನರಿಯು ಇದನು ಕಂಡು। ಮಾಂಸವನ್ನು ಎತ್ತಲೆಂದು। ಮರದ ಕೆಳಗೆ ಓಡಿ ಬಂದು ನಿಂತುಕೊಂಡಿತು॥2॥ ಕಾಕರಾಜ ನೀನು ನಮ್ಮ। ವನಕೆ ಬಹಳ ದಿನಕೆ ಬಂದೆ। ನಿನ್ನ ಕಂಡು ನನ್ನ ಮನಕೆ ಹರುಷವಾಯಿತು॥3॥ ನಿನ್ನ ಗರಿಗಳೆಷ್ಟು ಚಂದ। ನಿನ್ನ ಬಣ್ಣವೆಷ್ಟು ಅಂದ। ನಿನ್ನ ರಾಗವನ್ನು ಕೇಳಿ ಜನರು ಕುಣಿವರು॥4॥ ಕಾಕರಾಜ ನೀನು ಈಗ। ಹಾಡನೊಂದು ಹಾಡು ಬೇಗ। ವನದೊಳಿದ್ದ ಪಶುಗಳೆಲ್ಲ ಕೇಳಿ ಕುಣಿಯಲಿ॥5॥ ಮರುಳ ಕಾಗೆ ನರಿಯ ನುಡಿಗೆ ಮರುಳುಗೊಂಡು ಹರುಷದಿಂದ ಕಾವು ಕಾವು ಎಂದು ದೊಡ್ಡ ದನಿಯ ತೆಗೆಯಿತು॥ 6॥ ದನಿಯತೆಗೆಯಲೊಡನೆ ಅದರ। ಬಾಯೊಳಿದ್ದ ಮಾಂಸವೆಲ್ಲ। ನರಿಯ ಬಾಯಿಯೊಳಗೆ ಬಂದು ಬಿದ್ದು ಬಿಟ್ಟಿತು॥7॥ ಮಾಂಸವನ್ನು ನುಂಗಿ ನರಿಯು। ಹರುಷದಿಂದ

ಕುಣಿದು ಕುಣಿದು। ಕಾಗೆಯನ್ನು ನೋಡಿ ನೋಡಿ ನಗುತ ನಿಂದಿತು।।8।। ಮಾಂಸವನ್ನು ಕಳೆದುಕೊಂಡು। ಅದಕೆ ಬಹಳ ಬುದ್ಧಿ ಬಂದು। ಠಕ್ಕರನ್ನು ನಂಬಬೇಡಿ ಎಂದು ಸಾರಿತು।।9।।

ಕಾಡಿಗೆ ಹೋದೆನು ಕನಸಿನಲಿ

ಕಾಡಿಗೆ ಹೋದೆನು ಕನಸಿನಲಿ। ಒಯ್ದಿತು ನನ್ನನು ಪುಟ್ಟ ಹುಲಿ। ಸೊಂಡಿಲಿನಲ್ಲಿ ತಣ್ಣೀರನು ತಂದು ಆನೆಯು ಝಳಕವ ಮಾಡಿಸಿತು।।1।। ಮರಗಳು ನೀಡಿದ ಹಣ್ಣುಗಳನ್ನು ಸಿಂಹವು ನನಗೆ ಉಣಿಸಿತು।। ಹಂಸಗಳೆಲ್ಲಾ ಹಾಸಿಗೆ ಮಾಡಿ। ಹಕ್ಕಿಗಳೆಲ್ಲಾ ಹಾಡನು ಹಾಡಿದವು।।2।। ಮೊಲಗಳು ಕಥೆಯನು ಹೇಳಿದವು।। ನಿಮ್ಮೂರಿನ ಮಳೆಬೆಳೆ ಹೇಗೆಂದು ನರಿಗಳು ಕೇಳಿದವು।। ಗಾಳಿಯ ಹಾಕಿತು ನವಿಲಿನ ಹಿಂಡು। ಇದನೆಲ್ಲಾ ನನ್ನಪ್ಪನು ಕಂಡು।।3।। ಕೈಯಲಿ ಛಡಿಯನು ಹಿಡಿದೇ ಬಂದು। ನನ್ನನ್ನು ಕೇಳುತ ಯಾತಕೆ ಬಂದೆ ಎಂದು ಅಬ್ಬರಿಸಲು। ಹೆದರಿಕೆಯಿಂದ ಪ್ರಾಣಿಗಳೆಲ್ಲಾ ಓಡಿದವು।।4।। ದೂರದಿ ಗವಿಯಲಿ ಸುಮ್ಮನೆ ನಿಂತು ಅಪ್ಪನ ನೋಡಿದವು। ಬೆನ್ನಿಗೆ ಛಡಿಗಳು ಬೀಳಲು ಅಯ್ಯೋ ಎಂದತ್ತೆ। ಎಚ್ಚರವಾಯಿತು ಅಪ್ಪನು ಇಲ್ಲ। ಕಾಡಿಗೆ ಹೋಗಲು ಆಗಲೆ ಇಲ್ಲ ಎಂದೆಂದೂ ಮತ್ತೆ।।5।।

ಕಷ್ಟ ಜೀವಿಯೊಬ್ಬ ಇದ್ದ (ಕೈ ತುತ್ತು ಬಾಯಿಗೆ?)

ಕಷ್ಟ ಜೀವಿಯೊಬ್ಬ ಇದ್ದ ಅವನು ಬಹಳ ಬಡವನಿದ್ದ। ಒಮ್ಮೆ ಅವನು ಧಣಿಯ ಹೊಲದ ಬದುವ ಅಗೆಯುತ್ತಲಿದ್ದ।।1।। ಇತ್ತು ಒಂದು ಬದುವಿನಲ್ಲಿ ಚಿಕ್ಕ ಚೊಕ್ಕ ಚೌಕ ಕಲ್ಲು। ನಿತ್ಯದಲ್ಲಿ ಬುತ್ತಿಉಣಲು। ಸಿಕ್ಕುತಿತ್ತು ನೆರಳು।।2।। ಧಣಿಯ ಆಜ್ಞೆಯಂತೆ ಇಂದು। ಅದನು ಕೂಡ ಎಬ್ಬಲೆಂದು। ಜೋರಿನಿಂದ ಹಾರೆ ಎತ್ತಿ। ನೆಲದಿ ನೆಟ್ಟು ಸುಯ್ದನೊಂದು।।3।। ಗಂಟಲೊಣಗಿ ತೃಷೆಯಿಂದ ಮೀಟಿದನು ಹಾರೆಯಿಂದ। ಕೊನೆಗೂ ಒಮ್ಮೆ ಎಬ್ಬಿದನು ಆಳ ಹೂತ ಆ ಕಲ್ಲನು।।4।। "ಆಹ್"!ಎಂದು ಆತನು ಸ್ತಬ್ಧನಾಗಿ ನಿಂತನು। ಅವನ ಕಣ್ಣು ಚಕಮಕ ಪೂರ್ಣಕುಂಭ ಲಕಲಕ।।5।। ವಜ್ರ ಕೆಂಪು ಪಚ್ಚೆ ನೀಲ। ಅವನೆಂದೂ ಕಂಡಿರಲೇ ಇಲ್ಲ। ಕಿವಿಗಳು ಮೊದಲೇ ಕೇಳಿರಲೇ ಇಲ್ಲ। ಇಂತಿರಲಾತ ಅದರ ಬೆಲೆಯ ಎಂತು ನಿರ್ಣಯಿಸಬಲ್ಲ।।6।। ಎತ್ತಲಾರದೆತ್ತಿ ಅದನು ಮನದಲಿಂತು ಹರ್ಷಿಸಿದನು। ಹಕ್ಕಿ ಓಡಿಸೆ ಇನ್ನು ನನಗೆ ಕಲ್ಲರಸುವ ಕಷ್ಟವಿಲ್ಲ ಕವಣೆಗೆ।।7।। ಆರಿಗದನು ಹೇಳದಂತೆ ಮುಚ್ಚಿ ಒಯ್ದು ಪೆದ್ದನಂತೆ ಹಕ್ಕಿಕಾಯೆ ಕುಳಿತುಕೊಳಲು ಕಟ್ಟಿಕೊಂಡು ಮಂಚಿಗೆ।। ಮುನ್ನಿನಂತೆ ಮತ್ತೆ ಬಂದು ತೊಡಗಿದ ಅಗತೆಗೆ।।8।। ಅಂದಿನಿಂದ ನಮ್ಮ ಬಡವ ಹಾಲುತೆನೆಯ ಜೋಳದ್ಹೊಲವ ಹಕ್ಕಿ ಹಿಂಡು ಹೀರದಂತೆ ಗೈದನಾ ಕಾರ್ಯವ।।9।। ಇವನ ಕವಣೆಯಾನದಲ್ಲಿ ವಜ್ರಕೆಂಪು ಪಚ್ಚೆನೀಲ। ಕುಳಿತು ವೇಗ ಯಾತ್ರೆ ಮಾಡಿ ಸೇರಿದುವು ಹೊಲದಂಚಿನ ನದಿಯ ಮಡುವ।।10।। ಕಟ್ಟಕಡೆಯ ವಜ್ರವೊಂದು ಅಪ್ಪಿ ತಪ್ಪಿ ದಡದಿ ಬಿತ್ತು। ಅಪ್ಪಗೆಂದು ಬುತ್ತಿ ಹೊತ್ತ ಬಡಕಿಶೋರನ ಕಣ್ಣಿಗೆ ಬಿತ್ತು।।11।। ಅವ್ವಾ ಅವ್ವಾ ಎಷ್ಟು ಚೆಂದ। ಈ ಬೆಣಚು ಎಷ್ಟು ಅಂದ। ಸಿಕ್ಕಿತಿದು ಮರಳಿನಲ್ಲಿ ಧಣಿಯ ಹೊಲದ ಅಂಚಿನಲ್ಲಿ।।12।। ಕಂದನಿಂದ ತಾಯಿ ಅದನು ತಿರುವಿ ಮುರುವಿ ನೋಡಿ। ಎಂದೂ ಕಾಣದಂಥ ವಸ್ತು ತಿಳಿಯಬೇಕಿದರ ಅಂತಸ್ತು।।13।। ಓಡಿದಳು ಸರಾಫನತ್ತ ತಿಳಿದಳದರ ಕಿಮ್ಮತ್ತು। ತನ್ನ ಇಚ್ಛೆಯಷ್ಟು ಹಣವ ಪಡೆಯುವ ಸದಾವಕಾಶವ।।14।। ತಾಳು ತಾಳು ಸೇಠಪ್ಪಾ। ಪತಿಯ ಕೇಳಿ ಬರುವೆನಪ್ಪ। ಎಂದು ಆಕೆ ಬಂದು ಓಡಿ ಕಲ್ಲಾಯುತಿರುವ ಗಂಡನನ್ನ ನೋಡಿ।।15।। ನೋಡಿ ನೋಡಿ ಕಲ್ಲಿದು। ನಮ್ಮ ಕಂದಗೆ ಸಿಕ್ಕಿದುದು। ನಾವು ಕೇಳಿದಷ್ಟು ಹಣವ ಕೊಡುವನಂತೆ ಸರಾಫ। ಇದರ ಬದಲು।।16।। ಅದನು ಕೈಲಿ ಹಿಡಿದು ಬಡವ ನೋಡಿ ನೋಡಿ ದಣಿದನಾ ವಜ್ರವಾ ನೆತ್ತಿ ಮೇಲೆ ಕೈಯನಿಟ್ಟು ನಿಡಿದು ಉಸಿರು ಬಿಟ್ಟ ವಜ್ರವೂ ಕರಗುವ।।17।। ಅವಗೆ ಸಿರಿಯ ಬೆಲೆಯು ತಿಳಿಯಲಿಲ್ಲ। ಅವಗೂ ನನಗೂ ಭೇದವಿಲ್ಲ। ಹಕ್ಕಿ ಹೊಲವ ಮೆದ್ದ ಮೇಲೆ ಕಣ್ಣುಬಾಯಿ ಬಿಡುವೆವಲ್ಲಾ।।18।। ಆ ಬಡವ ನನ್ನ ಬಂಧು ನಗೆನು ಆತ ಪೆದ್ದನೆಂದು। ಜಗದಿ ವಜ್ರವೆಂಬ ವಸ್ತುವೊಂದು ಇರುವುದೆಂದು ತಿಳಿದನು ಉಳಿದ ಒಂದರಿಂದ ಅಂದು।।19।। ದೇವರಿಗಿದು ಆಟವೆ? ಬುದ್ಧಿ ಕೊಡದೆ ಸಿರಿಯಕೊಡುಗೆ ಉಚಿತವೆ? ಮಂಗನ ಕೈಗೆ ಮಾಣಿಕ್ಯವೇ? ಹೀಗೆ ಕೊಟ್ಟು ಹಾಗೆ ಕಸಿಯೆ ಅದುವೆ ಮೋಸವಲ್ಲವೆ? ಯೋಗವೊದಗಿ ಭೋಗಭಾಗ್ಯವೆನ್ನ ಪಾಲಿಗಿಲ್ಲವೆ?

ಗೆಳೆಯನೆ ಪೇಳುವೆ ಕೇಳಣ್ಣ ರಾಗ:ಪುನ್ನಾಗವರಾಳಿ

ಗೆಳೆಯನೆ ಪೇಳುವೆ ಕೇಳಣ್ಣ। ರೈಲು ಪ್ರವಾಸದ ಕನಸನ್ನ। ನೆನ್ನೆಯ ರಾತ್ರಿಯ ಕನಸಿನಲಿ। ಕುಳಿತೆನು ನಾ ರೈಲು ಬಂಡಿಯಲಿ।। ತೂಗುತಲಿತ್ತು ಅಪ್ಪನ ಕೋಟು। ಅದರಿಂ ತೆಗೆದೆ ಪಚ್ಚೆಯ ನೋಟು। ಇನ್ನೂ ಸುತ್ತಲು ಕತ್ತಲೆ ಇತ್ತು। ಮನದಲಿ ಹೆದರಿಕೆ ಆಗುತಲಿತ್ತು।। ನಡೆದೆನು ರೈಲಿನ ಸ್ಟೇಷನ್‌ಗೆ। ಪಡೆದೆನು ಟಿಕೆಟ್ ಬೊಂಬಾಯಿಗೆ। ಕುಳಿತೆನು ಹರುಷದಿ ರೈಲೊಳಗೆ। ಅಮ್ಮನ ನೆನೆದೆನು ಮನದೊಳಗೆ। ಬಂಡಿಯು ಮುಂದಕೆ ಹೋಗುತಲಿತ್ತು। ಹಿಂದಕೆ ಗಿಡಮರ ಸಾಗುತಲಿತ್ತು। ಸೂರ್ಯನು ಬಾನಿಗೆ ಏರುತಲಿದ್ದ। ಬೆಳಕಿನ ಕಿರಣವ ಚೆಲ್ಲುತಲಿದ್ದ। ನೋಡಿದೆ ಸುತ್ತಲು ಬೇಸರವಾಯ್ತು। ಮೇಲ್ಗಡೆ ಒಂದು ಸರಪಳಿ ಇತ್ತು। ಅಕ್ಷರವೇನೋ ಬರೆದಿತ್ತು। ಎಳೆಯಿರಿ ಸರಪಳಿ ಎಂದಿತ್ತು। ಕೂತಲ್ಲಿಂದ ಬೇಗನೆ ಎದ್ದೆ। ತೂಗುವ ಸರಪಳಿಯನು ನಾ ಎಳೆದೆ। ಕುಳಿತಿದ್ದ ಜನ ನನ್ನನೇ ನೋಡಲು। ಬಂಡಿಯು ಮುಂದಕೆ ಬಾಗಿ ನಿಲ್ಲಲು। ಮುಂದೆ ಏನಾಯಿತು ಕೇಳಣ್ಣ। ಬಲು ಹೆದರಿಕೆ ನನಗಾಯ್ತಣ್ಣ। ಠೊಣಪ್ಪನೊಬ್ಬ ನನ್ನೆಡೆ ಬಂದ। ಸರಪಳಿ ಏತಕೆ ಎಳೆದೆ ಎಂದ। ಅವನ ಕರಿ ಉಡುಪನು ನಾ ನೋಡಿ। ಅಮ್ಮಾ ಎಂದೆನು ಭಯದಿಂ ಕೂಡಿ।। ಏನೋ ಎಂದಳು ನನ್ನಮ್ಮ। ತಟ್ಟುತ ನನ್ನ ತಲೆಯನ್ನ। ಆಗಲೆ ಕೂಗಿತು ಕೋಕ್ಕೋ ಕೋಳಿ। ಕಣ್ಣುಜ್ಜುತ ನಾ ಪಿಳಿ ಪಿಳಿ ನೋಡಿ। ಅಮ್ಮನ ಕೇಳಿದೆ ಎಲ್ಲಿದೆ ಸರಪಳಿ। ಅಮ್ಮನು ನುಡಿದಳು ಭಯವಾಯ್ತೆ ಗಿಳಿ। ಹೌದೌದಮ್ಮ ಭಯವಾಯ್ತು ರೈಲು ಪ್ರವಾಸದ ಕನಸಾಯ್ತು।।

ಧರೆಯ ಭೋಗವನ್ನು ನೋಡಿ

ಧರೆಯ ಭೋಗವನ್ನು ನೋಡಿ ಹರಿಯುಮರೆತು। ಕೆಡಲು ಬೇಡ। ಧರೆಯ ಭೋಗ ಕನಸಿನಂತೆ ಕೇಳುಮಾನವಾ।। ತಿರುಕನೋರ್ವನೂರಮುಂದೆ। ಮುರುಕು ಧರ್ಮಶಾಲೆಯಲ್ಲಿ। ಒರಗಿರುತ್ತಲೊಂದು ಕನಸುಕಂಡನೆಂತೆನೆ। ಪುರದ ರಾಜ ಸತ್ತನವಗೆ। ವರಕುಮಾರರಿಲ್ಲದಿರಲು। ಕರಿಯ ಕೈಗೆ ಕುಸುಮಮಾಲೆಯಿತ್ತು ಪುರದೊಳು।। ನಡೆದು ಯಾರ ಕೊರಳಿನಲ್ಲಿ। ತೊಡರಿಸುವದೊ ಅವರ ಪಟ್ಟಕೊಡೆಯರನ್ನು ಮಾಳ್ಪೆವೆಂದು ಬಿಟ್ಟರಲ್ಲಿಯೆ। ಒಡನೆ ತನ್ನ ಕೊರಳಿನಲ್ಲಿ। ತೊಡರಿಸಲ್ಕೆ ಕಂಡು ತಿರುಕ। ಪೊಡವಿಯಾಣ್ಮೆನೆಂದು ಮನದಿ ಹಿಗ್ಗುತಿರ್ದನು।। ಪಟ್ಟವನ್ನು ಕಟ್ಟಿ ನೃಪರು। ಕೊಟ್ಟರವಗೆ ಕಪ್ಪಗಳನು। ನೆಟ್ಟನವನು ರಾಜ್ಯವಾಳ್ದ ಕನಸಿನಲ್ಲಿಯೇ। ಭಟ್ಟನಿಗಳ ಕೂಡಿ ನಲ್ಲ। ನಿಷ್ಟಸುಖದೊಳಿರಲವಂಗೆ। ಹುಟ್ಟಿ ಹೆಣ್ಣು ಗಂಡು ಮಕ್ಕಳಾದುವಾಗಲೇ।। ಓಲಗದಲಿರುತ್ತ ತೊಡೆಯ। ಮೇಲೆ ಮಕ್ಕಳಾಡುತಿರಲು। ಲೀಲೆಯಿಂದ ಚಾತುರಂಗ ಬಲವ ನೋಡುತ। ಲೋಲನಾಗಿ ನುಡಿದನಿನಿತು। ಕೇಳು ಮಂತ್ರಿ, ಸುತರುಗಳಿಗೆ। ಬಾಲೆಯರನು ನೋಡಿ ಮದುವೆ ಮಾಡಬೇಕೆಲೆ।। ನೋಡಿ ಬನ್ನಿರೆನಲು ಜೀಯ। ನೋಡಿಬಂದೆವೆನಲು ಬೇಗ। ಮಾಡಿ ಮದುವೆ ಮಂಟಪದೊಳು ಸಕಲ ಕಾರ್ಯವ। ಗಾಢವಾಗೆ ಸಂಭ್ರಮಗಳು ಮಾಡುತಿದ್ದ ಮದುವೆಗಳನು। ಕೂಡಿದಖಿಳ ರಾಯರೆಲ್ಲ ಮೆಚ್ಚುವಂದದಿ।। ಧನದ ಮದವು ರಾಜ್ಯಮದವು। ತನುಜಮದವು ಯುವತಿಮದವು। ಜನಿತಮಾಗಿ ಕನಸಿನಲ್ಲಿ ಹಿಗ್ಗುತಿರ್ದನು। ಅನಿತರೊಳಗೆ ನೃಪರ ದಂಡು। ಮನೆಯ ಮುತ್ತಿದಂತೆಯಾಗೆ। ಕನಸ ಕಾಣುತಿರ್ದು ಹೆದರಿ ಕಣ್ಣ ತೆರೆದನು।। ಮೆರೆಯುತಿದ್ದ ಭಾಗ್ಯವೆಲ್ಲ ಹರಿದು ಹೋಯಿತೆಂದು ತಿರುಕ। ಮರಳಿ ನಾಚಿ ಪೋಗುತ್ತಿದ್ದ ಮುನ್ನಿನಂತೆಯೇ।। ಸಿರಿಯು ಕನಸಿನಂತೆ ಕೇಳು। ಅರಿತು ಆದಿಕೇಶವನ್ನ। ಹರುಷದಿಂದ ಭಜಿಸೆ ಸುಖವನೀವನು।।

ಧರಣಿ ಮಂಡಲ ಮಧ್ಯದೊಳಗೆ ರಾಗ : ಖರಹರಪ್ರಿಯ

ಧರಣಿ ಮಂಡಲ ಮಧ್ಯದೊಳಗೆ। ಮೆರೆವುದೈವತ್ತಾರು ದೇಶದಿ। ಇರುವ ಕಾಳಿಂಗ ನೆಂಬ ಗೊಲ್ಲನ। ಪರಿಯ ನಾನೆಂತು ಪೇಳ್ವೆನು।।1।। ಉದಯಕಾಲದೊಳೆದ್ದು ಗೊಲ್ಲನು। ನದಿಯ ಸ್ನಾನವ ಮಾಡಿಕೊಂಡು। ಮದನ ತಿಲಕವ ಫಣೆಯೊಳಿಟ್ಟು। ಚದುರಶಿಖೆಯನು ಹಾಕಿದ।।2।। ಎಳೆಯ ಮಾವಿನ ಮರದಕೆಳಗೆ। ಕೊಳಲನೂದುತ ಗೊಲ್ಲಗೌಡನು। ಬಳಸಿ ಬರುವ ತುರುಗಳನ್ನು ಬಳಿಗೆ ಕರೆದನು ಹರುಷದಿ।।3।। ಗಂಗೆ ಬಾರೇ ಗೌರಿ ಬಾರೇ ತುಂಗಭದ್ರೆ ನೀನು ಬಾರೇ।

ಕಾಮಧೇನು ನೀನು ಬಾರೆಂದು ಚೆಂದದಲಿ ಗೊಲ್ಲ ಕರೆದನು॥4॥ ಪುಣ್ಯಕೋಟಿಯೆ ನೀನು ಬಾರೆ। ಪುಣ್ಯವಾಹಿನಿ ನೀನು ಬಾರೆ। ಪೂರ್ಣಗುಣ ಸಂಪನ್ನೆ ಬಾರೆಂದು। ನಾಣ್ಯದಿಂ ಗೊಲ್ಲ ಕರೆದನು॥5॥ ಗೊಲ್ಲ ಕರೆದ ಧ್ವನಿಯ ಕೇಳಿ। ಎಲ್ಲ ಪಶುಗಳು ಬಂದವಾಗ। ಚೆಲ್ಲಿ ಸೂಸಿ ಹಾಲು ಕರೆದು ಅಲ್ಲಿ ತುಂಬಿತು ಬಿಂದಿಗೆ॥6॥ ಒಡನೆ ದೊಡ್ಡಿಯ ಬಿಡುತ ಪಶುಗಳು। ನಡೆದವಾಗಾರಣ್ಯಕಾಗಿ। ಕಡಲು ಮೇಘವು ತೆರಳುವಂದದಿ। ನಡೆದವಾಗಾರಣ್ಯಕೆ॥7॥ ಅಟ್ಟ ಬೆಟ್ಟದ ಕಿಬ್ಬಿಯೊಳಗೆ। ಇಟ್ಟೆಡೆಯ ಬೆಟ್ಟಾದ ನಡುವೆ। ದಟ್ಟೈಸಿದಾ ಸಸಿಗಳೆಡೆಯೊಳು। ಮುಟ್ಟಿ ಮೇದವು ಹುಲ್ಲನು॥8॥ ಹಬ್ಬಿದಾ ಮಲೆ ಮಧ್ಯದೊಳಗೆ। ಅರ್ಬುತಾನೆಂತೆಂಬ ವ್ಯಾಘ್ರನು। ಗಬ್ಬಿತನದೊಳು ಬೆಟ್ಟದಾ ಅಡಿ। ಕಿಬ್ಬಿಯೊಳು ತಾನಿರುವನು॥9॥ ಒಡಲಿಗೇಳು ದಿವಸದಿಂದ। ತಡೆದಾಹಾರವ ಬಳಲಿ ವ್ಯಾಘ್ರನು। ಅಡಗಿಕೊಂಡು ಗವಿಯ ಬಾಗಿಲ। ಹೊರನುಡಿಯ ಆಲಿಸುತಿರ್ದನು॥10॥ ಸಿಡಿಲು ಘೋಷದಿ ಮೊರೆಯುತಾ ಹುಲಿ। ಘುಡುಘುಡಿಸಿ ಭೋರಿಡುತಾ ವ್ಯಾಘ್ರನು। ತಡುಕಿಯೆರಗಿದ ರಭಸದಿಂದೊ। ಗ್ಗೊಡೆದವಾಗಾ ಗೋವ್ಗಳು॥11॥ ಅದರ ರಭಸಕೆ ನಿಲ್ಲಲರಿಯದೆ। ಕದುಬಿ ಕಮರಿಯ ಬಿದ್ದು ಪಶುಗಳು. ಪದರಿ ತಲ್ಲಣಗೊಂಡು ಪಶುಗಳು। ಚೆದುರಿ ಓಡಿ ಹೋದವು॥12॥ ಕನ್ನೆ ಮಗನ ಪಡೆದ ಪಶುವು। ತನ್ನ ಕಂದನ ನೆನೆದುಕೊಂಡು। ಪುಣ್ಯಕೋಟಿಯೆಂಬ ಪಶುವು। ಚೆನ್ನಾಗಿ ತಾ ಬರುತಿರೆ॥13॥ ಇಂದು ಎನಗಾಹಾರ ಸಂದಿತು। ಎನುತಲಾಗ ದುಷ್ಟವ್ಯಾಘ್ರನು। ಬಂದು ಬಳಸಿ ಅಡ್ಡಗಟ್ಟಿ। ಕೊಂಡಿತಾಗ ಪಶುವನು॥14॥ ಖೂಳ ಹುಲಿಯು ಅಡ್ಡಗಟ್ಟಿ। ಬೀಳಹೊಯ್ವೆನು ನಿನ್ನನೆನುತಲಿ। ಸೀಳಿ ಬಿಸುಡುವೆ ಬೇಗವೆನುತ। ಪ್ರಳಯವಾಗಿಯೆ ಕೋಪಿಸೆ॥15॥ ಒಂದು ಬಿನ್ನಹ ಹುಲಿಯ ರಾಯನೆ। ಕಂದನ್ನೈದನೆ ಮನೆಯ ಒಳಗೆ। ಒಂದು ನಿಮಿಷದಿ ಮೊಲೆಯ ಕೊಟ್ಟು ಬಂದು ನಾನಿಲ್ಲಿ ನಿಲ್ಲುವೆ॥16॥ ಹಸಿದ ವೇಳೆಗೆ ಸಿಕ್ಕಿದೊಡವೆಯ। ವಶವಮಾಡಿಕೊಳ್ಳದೀಗ। ನುಸುಳಿಹೋದರೆ ನೀನು ಬರುವೆಯ। ಹಸನಾಯಿತೀಗೆಂದಿತು॥17॥ ಮೂರು ಮೂರ್ತಿಗಳಾಣೆ ಬರುವೆನು। ಸೂರ್ಯ ಚಂದ್ರಮರಾಣೆ ಬರುವೆನು। ಧಾರುಣೀ ದೇವಿಯಾಣೆ ಬರುವೆನು। ಎಂದು ಭಾಷೆಯ ಮಾಡಿತು॥18॥ ಬರುವೆನೆಂದು ಭಾಷೆಮಾಡಿ। ತಪ್ಪೆನೆಂದಾ ಪುಣ್ಯಕೋಟಿಯು। ಒಪ್ಪಿಸಲೊಡಂಬಟ್ಟು ವ್ಯಾಘ್ರನು। ಅಪ್ಪಣೆಯ ತಾ ಕೊಟ್ಟಿತು॥19॥ ಅಲ್ಲಿಂದ ಕಳುಹಿಸಿಕೊಂಡು। ನಿಲ್ಲದೆ ದೊಡ್ಡಿಗೆ ಬಂದು। ಚೆಲ್ವ ಮಗನನ ಕಂಡು ಬೇಗ ಅಲ್ಲಿ ಕೊಟ್ಟಿತು ಮೊಲೆಯನು॥20॥ ಕಟ್ಟಕಡೆಯಲಿ ಮೇಯದೀರು। ಬೆಟ್ಟದೊತ್ತಿಗೆ ಹೋಗದೀರು। ದುಷ್ಟವ್ಯಾಘ್ರಗಳುಂಟು ಅಲ್ಲಿ ನಟ್ಟನಡುವೆ ಬಾರಯ್ಯನೆ॥21॥ ಕೊಂದೆನೆಂಬ ದುಷ್ಟ ವ್ಯಾಘ್ರಗೆ। ಚೆಂದದಿಂದ ಭಾಷೆಯಿತ್ತು। ಕಂದ ನಿನ್ನನು ನೋಡಿ ಪೋಗುವೆ। ನೆಂದು ಬಂದೆನು ದೊಡ್ಡಿಗೆ॥22॥ ಅಮ್ಮ ನೀನು ಸಾಯಲೇತಕೆ। ಸುಮ್ಮನಿರು ನೀ ಎಲ್ಲಾರ ಹಾಗೆ। ತಮ್ಮ ತಾಯಿಗೆ ಪೇಳಿ ಕರುವು। ಸುಮ್ಮಾನವಡಗಿ ನಿಂದಿತು॥23॥ ಕೊಟ್ಟ ಭಾಷೆಗೆ ತಪ್ಪಲಾರೆನು। ಕೆಟ್ಟ ಯೋಚನೆ ಮಾಡಲಾರೆನು। ನಿಷ್ಠೆಯಿಂದಲಿ ಪೋಪೆನಲ್ಲಿಗೆ ಕಟ್ಟಕಡೆಗಿದು ಖಂಡಿತ॥24॥ ಸತ್ಯವೇ ನಮ್ಮ ತಾಯಿ ತಂದೆ। ಸತ್ಯವೇ ನಮ್ಮ ಬಂಧು ಬಳಗವು। ಸತ್ಯವಾಕ್ಯಕ್ಕೆ ತಪ್ಪಿದಾರೆ ಅಚ್ಚುತಾ ಹರಿ ಮೆಚ್ಚನು॥26॥ ಆರ ಮೊಲೆಯಾ ಕುಡಿಯಲಮ್ಮ। ಆರ ಸೇರಿ ಬದುಕಲಮ್ಮ। ಆರಬಳಿಯಲಿ ಮಲಗಲಮ್ಮ। ಆರು ಎನಗೆ ಹಿತವರು॥27॥ ಅಮ್ಮಗಳಿರಾ ಅಕ್ಕಗಳಿರಾ। ಎನ್ನ ತಾಯೊಡಹುಟ್ಟುಗಳಿರಾ। ನಿಮ್ಮ ಕಂದನೆಂದು ಕಾಣಿರಿ ತಬ್ಬಲಿಯ ಮಗನ್ನೈದನೆ॥28॥ ಮುಂದೆ ಬಂದರೆ ಹಾಯದೀರಿ। ಹಿಂದೆ ಬಂದರೆ ಒದೆಯದೀರಿ। ನಿಮ್ಮ ಕಂದನೆಂದು ಕಂಡಿರಿ। ತಬ್ಬಲಿ ಮಗನ್ನೈದನೆ॥29॥ ತಬ್ಬಲಿಯಾದಲ್ಲೊ ಮಗನೆ। ಹೆಬ್ಬುಲಿಯ ಬಾಯೀಗೆ ಹೊಗುವೆನು। ಇಬ್ಬರಾ ಋಣ ತೀರಿತೆಂದು ತಬ್ಬಿ ಕೊಂಡಳು ಕಂದನಾ॥30॥ ಕಂದನೀಗೆ ಬುದ್ಧಿ ಹೇಳಿ। ಬಂದಳಾಗ ಪುಣ್ಯಕೋಟಿಯು। ಚೆಂದದಿಂದಾ ಪುಣ್ಯನದಿಯೊಳು। ನಿಂದು ಸ್ನಾನವ ಮಾಡಿತು॥31॥ ಗೋವು ಸ್ನಾನವ ಮಾಡಿಕೊಂಡು। ಗವಿಯ ಬಾಗಿಲ ಪೊಕ್ಕು ನಿಂತು। ಸಾವಕಾಶವ ಮಾಡದಂತೆ। ವ್ಯಾಘ್ರರಾಯನ ಕರೆದಳು॥32॥ ಖಂಡವಿದೆ ಕೊ ರಕ್ತವಿದೆಕೊ। ಗುಂಡಿಗೆಯ ಕೊಬ್ಬುಗಳಿದೆ ಕೋ। ಉಂಡುಸಂತಸಗೊಂಡು ನೀ ಭೂ। ಮಂಡಲದೊಳು ಬಾಳಯ್ಯನೆ॥33॥ ಪುಣ್ಯ ಕೋಟಿಯು ಬಂದು ನುಡಿಯೆ। ತನ್ನ ಮನದೊಳು ಹುಲಿಯರಾಯನು। ಕನ್ನೆಯಿವಳನು ಕೊಂದುತಿಂದರೆ। ಎನ್ನ ನರಹರಿ ಮೆಚ್ಚನು॥34॥ ಎನ್ನ ಒಡಹುಟ್ಟಕ್ಕ ನೀನು। ನಿನ್ನ ತಿಂದು ನಾನೇನ ಪಡೆವೆನು। ನಿನ್ನ ಪಾದದ ಮೇಲೆ ಬಿದ್ದು। ಎನ್ನ ಪ್ರಾಣವ ಬಿಡುವೆನು॥35॥ ಯಾಕಯ್ಯಾ

ಹುಲಿರಾಯ ಕೇಳು। ಜೋಕೆಯಿಂದಲಿ ಎನ್ನ ನೊಲ್ಲದೆ। ನೂಕಿ ನೀನು ಸಾಯಲೇತಕೆ। ಬೇಕೆಂದು ನಾ ಬಂದೆನು॥36॥ ಪುಣ್ಯ ಕೋಟಿಯ ಮಾತ ಕೇಳಿ। ಕಣ್ಣಿನೊಳಗೆ ನೀರ ಸುರಿಯುತ। ಅನ್ಯಾಯಕಾರಿಯು ತಾನು ಎನುತಲಿ ತನ್ನ ಮನದೊಳು ಧ್ಯಾನಿಸಿ॥37॥ ಮೂರು ಮೂರ್ತಿಗೆ ಕೈಯ ಮುಗಿದು। ಸೇರಿ ಎಂಟು ದಿಕ್ಕ ನೋಡಿ। ಹಾರಿ ಆಕಾಶಕ್ಕೆ ನೆಗೆದು। ತನ್ನ ಪ್ರಾಣವ ಬಿಟ್ಟಿತು॥38॥

ಮಲೆನಾಡ ಕಾಡಲ್ಲಿ ಹಸಿರಾದ **ರಾಗ: ಶುಭಪಂತುವರಾಳಿ**

ಮಲೆನಾಡ ಕಾಡಲ್ಲಿ ಹಸಿರಾದ ಗಿಡ ಬನದಲ್ಲಿ ಬೆಳೆದಿತ್ತು ಭಾರಿ ಆಲದ ಮರವು ಮೊರೆದಿತ್ತು ನೂರಾರು ಹಕ್ಕಿಗಳಾ ಸ್ವರವು॥ ಚುಯ್ ಚುಯ್ ಚುಯ್ ಚುಯ್ ಎನ್ನುತ ಹಾಡೋಣ। ಕೂಡಿ ಪಾಡಿ ಎಲ್ಲರೂ ನಲಿಯೋಣ ಚುಯ್ ಚುಯ್ ಕಲಕಲ ಕುಣಿಯೋಣ। ಮೈಮನ ಮರೆಯೋಣ। ಒಟ್ಟಿಗೆ ಹಾಡಿ ನೆಟ್ಟಗೆ ಓಡಿ ಎಲ್ಲರು ನಲಿಯೋಣ॥ ಹಾವು ಬಂದಿತು, ಮರಿಯ ನುಂಗಿತು। ಕಂದ ನೀ ಬಲಿಯಾದೆಯಾ? ತಂದೆ ತಾಯಿಯ ತೊರೆದೆಯಾ? ಕಾರಿತೇ ವಿಷವು? ತೀರಿತೇ ಋಣವು? ಕ್ರೂರ ಸರ್ಪದ ಕಾವು ತಾಳಲಾರದ ನೋವು ಇದಕೆ ಕೊನೆಯಿಲ್ಲವೇ? ಯಾರು ಗತಿಯಿಲ್ಲವೆ? ಇಲ್ಲವೇ? ಕಂದ ಅಗಲಿ ಇರಲಾರೆನಾ ಅಗಲಿ ಇರಲಾರೆ ಇರಲಾರೆ॥

ನರಿ:- ಏನಾಯ್ತು? ಹೇಗಾಯ್ತು? ಯಾರಿಂದ? ಹೇಳಿ ಹೇಳಿ ಯಾರೂ ಹೆದರಬೇಡಿ ಈ ನರಿ ಮಾತು ಕೇಳಿ, ಅಪಾಯ ಬಂದಾಗ ಉಪಾಯ ಹೇಳುವೆ। ಆ ಸರ್ಪಾನ ಸಾಯೋಹಂಗೆ ಮಾಡ್ತೀನಿ, ಎಲ್ಲರೂ ಬನ್ನಿ, ಬನ್ನಿ। ಓ ಪಕ್ಷಿರಾಜ ಬಾನತೇಜ ಬಾಬಾ॥ ಆಹಾ ಏನು ರೋಷ, ಏನು ಆವೇಷ। ಎಲ್ಲಾ ನಮ್ಮಂಥ ಬಡ ಪ್ರಾಣಿಗಳ ಮೇಲೇನೆ ನಿನ್ನ ಪೌರುಷ, ಸಾಕು ಸಾಕು ಬರೀ ಒಣಜಂಭದಿಂದ ಏನು ಪ್ರಯೋಜನವಿಲ್ಲ। ವೃಥಾ ಕೋಪ, ತಾಪ, ಪ್ರತಾಪ ಏನೂ ಸುಖವಿಲ್ಲ। ನಮ್ಮ ಸರ್ಪರಾಜನ ಮುಂದೆ ನಿನ್ನ ದರ್ಪ ಏನೂ ನಡೆಯೋಲ್ಲ ತಾಳು ತಾಳು ನಿನ್ನ ಪೌರುಷ, ಆವೇಶ ಅಲ್ಲಿ ತೋರಿಸು ಬಾ॥ ಅಪಾಯ ಬಂದಾಗ ಉಪಾಯದಿಂದ ಕಾರ್ಯಸಾಧಿಸಬೇಕು। ವೈರಿ ಎದುರಾದಾಗ ಧೈರ್ಯ ತೋರಿ ಛಲದಿಂದ ಗೆಲ್ಲಬೇಕು॥

ಸಂತೆಗೆ ಹೋದನು ಭೀಮಣ್ಣ **ರಾಗ:ಕುರಂಜಿ**

ಸಂತೆಗೆ ಹೋದನು ಭೀಮಣ್ಣ। ಹಿಂಡಿಯ ಕೊಂಡನು ಹತ್ತು ಮಣ। ಕತ್ತೆಯ ಬೆನ್ನಿಗೆ ಹೇರಿಸಿದ। ಕುದುರೆಯ ಜತೆಯಲಿ ಸಾಗಿಸಿದ॥ ಕತ್ತೆಯು ಅರಚಿತು "''ಓ ಗೆಳೆಯ। ಅರ್ಧವ ನೀಹೊರು ದಮ್ಮಯ್ಯ"। ಕುದುರೆಗೆ ಕೂಗದು ಕೇಳಿಸಿತು। ಕತ್ತೆಯ ಕಿರುಚನು ಚಾಳಿಸಿತು॥ "ನಿನ್ನಯ ಬೆನ್ನಿಗೆ ಹಾಕಿದನು ಅದಕೇ ನಿನ್ನನು ಸಾಕಿದನು। ನೀನೇ ಹೊತ್ತುಕೋ ಬೇಗ ನಡಿ। ಧಣಿಯದೊ ಬರುವನು ಹಾದಿಹಿಡಿ"॥ ನಡುಗಿತು ಕತ್ತೆಯ ಕೈ ಕಾಲು। ಬಿದ್ದಿತು ಭೂಮಿಗೆ ಕಂಗಾಲು। ಬಂದನು ಆಗಲೆ ಭೀಮಣ್ಣ ಕುದುರೆಗೆ ಹೊರಿಸಿದ ಹತ್ತುಮಣ॥ ಹೊತ್ತಿತು ಕುದುರೆಯು ಹೊರೆಯನ್ನ। ಅತ್ತಿತು ಬಗ್ಗಿಸಿತದು ಬೆನ್ನ। ಕುದುರೆಯು ಬೇಡಿತು ಕತ್ತೆಯನು। "ಮರೆಯೆನು ನಿನ್ನುಪಕಾರವನು"॥ ಒಂದಿಷ್ಟಾದರು ಹೊತ್ತು ಬಿಡು। ನನ್ನಯ ಪ್ರಾಣವ ಉಳಿಸಿಕೊಡು॥ ಕತ್ತೆಯು ಹೇಳಿತು ಹಿಗ್ಗಿನಲಿ। ಆಗೇನಂದೆಯೊ ಸೊಕ್ಕಿನಲಿ?॥ ನನ್ನಯ ಕಷ್ಟದಿ ಹಿಗ್ಗಿದ್ದಿ। ಬಂತೇ ಈಗಾದರೂ ಬುದ್ಧಿ?। ನೀನನಗಿದ್ದರೆ ನಾ ನಿನಗೆ। ನೆನಪಿರಲೀ ನುಡಿ ನಮ್ಮೊಳಗೆ"॥

ಹಸಿದ ಹೊಟ್ಟೆಯಿಂದ **ರಾಗ : ಶಂಕರಾಭರಣ ನೋಟ್**

ಹಸಿದ ಹೊಟ್ಟೆಯಿಂದ ನಾಯಿ। ರೊಟ್ಟಿಗಾಗಿ ತಿರುಗಿತು। ಊರ ದಾಟಿ ಹಳ್ಳದಾಚೆ। ಹುಡುಕಲೆಂದು ಹೊರಟಿತು॥ ಅಲ್ಲಿ ಹೊಲದ ಗುಡಿಸಲಲ್ಲಿ। ಬುತ್ತಿಗಂಟು ದೊರಕಿತು। ರೊಟ್ಟಿಯೊಂದನೆತ್ತಿಕೊಂಡು ಉಬ್ಬಿನಿಂದ ಮರಳಿತು॥ ಹಳ್ಳ ದಾಟುವಾಗ ನೋಟ। ನೀರಿನಲ್ಲಿ ಬಿದ್ದಿತು। ರೊಟ್ಟಿ ಹಿಡಿದ ಬೇರೆ ನಾಯಿ। ಕಂಡು ರೊಚ್ಚಿಗೆದ್ದಿತು॥ ಅದನು ಕಿತ್ತುಕೊಳ್ಳಲೆಂದು। ಬಾಯಿ ತೆರೆದು ಬೊಗಳಿತು। ರೊಟ್ಟಿ ಜಾರಿ ಹಳ್ಳದಲ್ಲಿ। ಬಿದ್ದು ಬಿಡಲು ಮರುಗಿತು। ಆಸೆಯಿಂದ ತನ್ನದನ್ನು। ಕಳೆದುಕೊಂಡ ತಪ್ಪಿಗೆ। ಡೊಂಕುಬಾಲ ಎತ್ತಿಕೊಂಡು ಓಡಿತಾಗ ತೆಪ್ಪಗೆ॥

ಹಾವು ಅಂದ್ರೆ ಮರಿಗುಬ್ಬೀಗೆ

ಹಾವು ಅಂದ್ರೆ ಮರಿಗುಬ್ಬೀಗೆ ಭಾರಿ ದಿಗಿಲೇನೇ। ನೆನೆಸಿಕೊಂಡ್ರೆ ಮೈ ನಡಗುತ್ತೆ ಹಾಡೇ ಹಗಲೇನೇ। ಒಂದುಸಾರಿ ಪುಟಾಣಿ ಗುಬ್ಬಿ ಅಮ್ಮನ ಕೇಳುತ್ತೆ। ಅಮ್ಮಾ ಅಮ್ಮಾ ಬುಸ್ ಬುಸ್ ಹಾವು ಹ್ಯಾಗಿರುತ್ತೆ? ಕೊಕ್ಕಲಿ ಬೆನ್ನು ತಿಕ್ಕೀಕೊಳ್ತಾ ಅಮ್ಮ ಅನ್ನತ್ತೆ। ಒಳ್ಳೇ ಪ್ರಶ್ನೆ ಹಾವು ಹ್ಯಾವ್ಯೇಗಿರುತ್ತೇ? ಹಾವಿರುತ್ತೆ ಹಾವಿನ ಹಾಗೆ ಕಾಗೆ ಕಪ್ಪಗೆ। ಸಪೂರ ಘಳ ಘಳ ಕೆಂಡದ ಕಣ್ಣು ಕಡ್ಡಿ ದಪ್ಪಗೆ।। ಸೂರಿಗೆ ಸುತ್ತಿ ಜೋತಾಡುತ್ತೆ ಗೋಧಿ ಬೆನ್ನು। ದೀಪದ ಹಾಗೆ ಉರೀತಿರುತ್ತೆ ಹಾವಿನ ಕಣ್ಣು। ಬುಸ್ ಎನ್ನುತ್ತೆ ದರಿದ್ರ ಹಾವಿಗೆ ತುಂಬದ ಹೊಟ್ಟೆ। ಇಡಿ ಇಡಿಯಾಗೇ ನುಂಗ್ಬಿಡುತ್ತೆ ಹಕ್ಕೀ ಮೊಟ್ಟೆ।। ಹಕ್ಕಿಯ ಮೊಟ್ಟೆ ನುಂಗಿದ್ ಮೇಲೆ ಇಡಿ ಇಡೀಲಿ ಹಕ್ಕಿಮರಿ ಬೆಳ್ಕೊಳ್ಳುತ್ತೆ ಹಾವಿನ ಹೊಟ್ಟೇಲೀ। ಹಕ್ಕಿಮರಿ ಹುಟ್ಕೊಳ್ಳುತ್ತೆ ಹಾವಿನ ಹೊಟ್ಟೇಲೀ। ಅಂತ ಪುಟಾಣಿ ಕುಣಿದಾಡ್ತಿತ್ತು ಅಮ್ಮನ ತೋಳಲ್ಲಿ।। ನಿಟ್ಟುಸಿರಿಟ್ಟು ಅಮ್ಮ ಗುಬ್ಬಿ ಇಲ್ಲ ಬಂಗಾರ। ಇನ್ನೂ ನಿನಗೆ ತಿಳೀದಮ್ಮಾ ಹಾವಿನ ಹುನ್ನಾರ। ಹಾವಿನ ಹೊಟ್ಟೆ ಸೇರಿದ್ಮೇಲೆ ಹೇಳೋದಿನ್ನೇನು। ಹಾವಿನ ಮೊಟ್ಟೆ ಆಗ್ಬಿಡುತ್ತೆ ಹಕ್ಕಿ ಮೊಟ್ಟೇನೂ।।

ಹೇಳಿದ್ದು ಸುಳ್ಳಾಗಬಹುದು

ಹೇಳಿದ್ದು ಸುಳ್ಳಾಗಬಹುದು, ಕೇಳಿದ್ದು ಸುಳ್ಳಾಗಬಹುದು, ನಿಧಾನಿಸಿ ಯೋಚಿಸಿದಾಗ ನಿಜವು ತಿಳಿವುದು।।ಪ।। ದೂರದಲೊಂದು ಕಾಡಿತ್ತು। ಆ ಕಾಡಲಿ ಒಂದು ಮನೆಯಿತ್ತು। ಮುಂಗುಸಿ ಯೊಂದು ಅಲ್ಲಿತ್ತು। ಮನೆಯನು ಕಾವಲು ಕಾಯ್ತಿತ್ತು। ಆ ಮನೆ ಒಡತಿ ಗಂಗಮ್ಮ। ತೊಟ್ಟಿಲಲವಳ ಕಂದಮ್ಮ। ಮುಂಗುಸಿಯಲ್ಲದೆ ಬೇರೇನೂ ಮಗುವಿನ ಆಟಕೆ ಇಲ್ಲಮ್ಮ। ಕಂದನ ಜೊತೆಗೆ ಪ್ರೇಮದಲಿ। ಮುಂಗುಸಿಯೊಡನೆ ಸ್ನೇಹದಲಿ। ಬಾಳುತಲಿದ್ದಳು ಗಂಗಮ್ಮ। ಮುಂದೇನಾಯಿತು ಕೇಳಮ್ಮ।।1।। ಮನೆಯಲಿ ನೀರು ಮುಗಿದಿರಲು। ಹೊಳೆಯ ಕಡೆಗೆ ಹೊರಟಿರಲು ಕಂದನು ಇನ್ನು ಮಲಗಿರಲು ಮುಂಗುಸಿಯನ್ನು ಕೂಗಿದಳು। ಮನೆಯಲಿ ಬೇರೆ ಯಾರಿಲ್ಲ। ಮಗುವಿನ ಆಟಕೆ ಜೊತೆಯಿಲ್ಲ। ತೊಟ್ಟಿಲ ಬಳಿಯೇ ಕಾವಲಿರು। ಹೊರಗಡೆ ಎಲ್ಲೂ ಹೋಗದಿರು।।2।। ಗಂಗೆಯು ನೀರಿಗೆ ಹೊರಟಾಗ ಬೇಲಿಯಲಿದ್ದ ಕರಿನಾಗ ಸರಸರ ಹರಿಯಿತು ರಭಸದಲಿ। ಮನೆಯನು ಸೇರಿತು ನಿಮಿಷದಲಿ। ಮುಂಗುಸಿ ನೋಡಿತು ಹಾವನ್ನು ತೊಟ್ಟಿಲ ಬಳಿಗೆ ಬರುವುದನು। ಮೇಲೆ ಬಿದ್ದಿತು ರೋಷದಲಿ। ಹಾವನು ಕಚ್ಚಿತು ದ್ವೇಷದಲಿ। ಸೋತಿತು ಹಾವು ಜಗಳದಲಿ। ಮುಂಗುಸಿ ಗೆಲುವಿನ ಹರುಷದಲಿ। ಹಾವಿನ ಪ್ರಾಣವ ನೀಗಿತ್ತು। ಬಾಯಲಿ ರಕ್ತವು ಜಿನುಗಿತ್ತು।।3।। ಗಂಗೆಯು ನೀರನು ತರುತಿರಲು। ಕೈಬಳೆ ನಾದವು ಕೇಳಿಸಲು ಮುಂಗುಸಿ ಬಾಗಿಲ ಬಳಿ ಬರಲು। ಬಾಯಲಿ ರಕ್ತದ ಕಲೆಯಿರಲು। ಬೆಚ್ಚುತ ಗಂಗೆ ನೋಡಿದಳು। ಮಗುವನು ಕೊಂದಿದೆ ಇದು ಎಂದು। ಕೊಡವನು ತೆಗೆದು ಚಚ್ಚಿದಳು। ಅಳುತ ಒಳಗೆ ಓಡಿದಳು। ತೊಟ್ಟಿಲ ಕಂದನು ನಗುತಿತ್ತು। ನೆಲದಲಿ ಹಾವು ಸತ್ತಿತ್ತು। ದುಡುಕಿನ ಬುದ್ಧಿಯ ಫಲವಾಗಿ ಮುಂಗುಸಿ ಕಥೆಯು ಮುಗಿದಿತ್ತು।।4।।

ಶ್ಲೋಕ

ಓಂ ಅಸ್ಯ ಶ್ರೀ ಮಹಾಮೃತ್ಯುಂಜಯ ಮಂತ್ರಸ್ಯ (ಸಂಸ್ಕೃತ)

ಓಂ ಅಸ್ಯ ಶ್ರೀ ಮಹಾಮೃತ್ಯುಂಜಯ ಸ್ತೋತ್ರಂ ಮಂತ್ರಸ್ಯ। ಶ್ರೀ ಮಾರ್ಕಂಡೇಯ ಋಷಿಃ, ಅನುಷ್ಟುಪ್ ಛಂದಃ। ಶ್ರೀ ಮೃತ್ಯುಂಜಯೋ ದೇವತಾ, ಗೌರಿಶಕ್ತಿಃ। ಮಮ ಸರ್ವಾರಿಷ್ಟ ಸಮಸ್ತ ಮೃತ್ಯುಶಾಂತ್ಯರ್ಥಂ। ಸಕಲೈಶ್ವರ್ಯ ಪ್ರಾಪ್ತ್ಯರ್ಥಂ ಜಪೇ ವಿನಿಯೋಗಃ।।

ಅಥ ಧ್ಯಾನಮ್।।

ಚಂದ್ರಾರ್ಕಾಗ್ನಿವಿಲೋಚನಂ ಸ್ಮಿತಮುಖಂ। ಪದ್ಮದ್ವಯಾಂತಃ ಸ್ಥಿತಂ। ಮುದ್ರಾಪಾಶಮೃಗಾಕ್ಷ ಸೂತ್ರವಿಲಸತ್। ಪ್ರಾಣಂ